Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಬಿ. ಚೆಪ್ಪಯ್ಯ.

ವಾರ್ಷಿಕ ಚಂದಾ ರೂ. ೩-೮-೦

ತಾ. ೪—೧೧—೧೯೩೮.

ಸಂಪುಟ ೧೪] [ಸಂಚಿಕೆ ೩೦

The Bombay Life Assurance Company Ltd.

(Estd. 1908.)

45-47, Churchgate Street, Fort-Bombay.

Progress Proves Its Popularity.

Year.	Business in force.	Claims Paid.	Life Assurance Fund
1931	2,26,82,430	2,91,880	33,24,809
1933	3,07,98,435	3,51,003	50,04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8248.]

13

Bombay Life Building Udipi	Gautam Nivas Charni Road Girgaum Bombay 4	Viswewarapuram Circle, Bangalore City	Puthiyara Calicut	Car Street, Cochin	Ottapalam S. Malabar.	Central Station Road Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: RESERVE BANK OF INDIA, & BANKERS' CLEARING HOUSE, MADRAS.

Paid up Capital .... Rs. 3,03,205 -
Reserves .... ,, 3,88,842,-

Our Deposit Rates.

3 months	2½% p. a.
6 or 9 months	3 % p. a
12 months	3½% p. a.
SHORT TERM	2 % p. a.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8 Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-48

V. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ.	ಪೈ.
ಶೇರ್ ಬಂಡವಾಳ	– 50,000	0	0
ವಸೂಲಾದ ಶೇರ್ ಮೊಬಲಗು	– 45,770	0	0
ಜಮೂಬಂದ ಠೇವಣಾತಿ	– 2,45,269	2	4
ವಸೂಲಾದ ಫ್ಲೋಟಿನಿಧಿ	– 1,36,696	8	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	– 19,598	4	11
ತ್ರಿಪ್ಟ ಡಿಪಾಜಿಟ್ಟು	– 34,431	6	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಪೆಚ್ಚಾಗಿ ಸಾಲ ಕೊಡತಕ್ಕದ್ದು.

- ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೂನ 3½ ದರದಲ್ಲಿಯೂ, ಸೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೂನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937 ರಲ್ಲಿ ನಿಲ್ಲಿಸಿವ್ವನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ಏರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಸಂಧ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಜೋರೀರ ಎ. ಮಂದೆಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-10-1938 ———

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ' ಬಿಲ್ಡಿಂಗ್ಸ್, ಕುಂಬಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊಡೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ ಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural & Industrial Bank Ltd

52-23

ರುಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

"ZANDU"
ರುಂಡೂರವರ

ಕೇಸರಿ ಚೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ರುಂಡೂ ಅಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಪೋಧಕ ಮತ್ತು ಸ್ತ್ರೀ ಸಂಬಂಧದ ಮೋಹ ವಿಕಾರಗಳ್ಲಿ ದಿವ್ಯ ಔಷಧ.

ರುಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿಪ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52 13)

ವೀರಾಜನೇಟೆಯ ಏಜೆಂಟರು—ಜೆ. ಕೃಷ್ಣರಾವ್, ವೀರಾಜನೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ

ಧಾತುಪುಷ್ಟಿ ಲೇಹ.

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯಪ್ಯುತ್ತಮವಾದ ಶಕ್ತಿವರ್ಧಕ ರಸಾಯನ, ನ್ಯಾಸ್ತಾನಸ್ಥೆ, ಶರೀರದ ಉಷ್ಣತೆ, ಧಾತು ಪುಷ್ಟಿ, ಸೊಡಸಿ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಉರ್ಸಾಸ, ಅರಕ್ತತೆ ಇವುಗಳ್ಲು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ.

ಇದು ಚಳಿ ಜ್ವರ, ಜಾತುರ್ಥಿ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ, ಇನ್ಫ್ಲುಯೆಂಜಾ ಇತ್ಯಾದಿ ನಾನಾ ವಿಧದ ಜ್ವರಗಳಿಗೆ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಷ್ಚರ್.

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಆಯಿಜಿ, ಕಾಮಾಲೆ, ಅರಕ್ತತೆ, ಮಲಬದ್ಧತೆ ಮುಂತಾದವ್ಯಗಳನ್ನು ಹೋಗಲಾಡಿಸಿ ಪಕ್ತಿಯನ್ನು ಉಂಟುಮಾಡುವುದು ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ.

ಮಕ್ಕಳಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎಡೆಯಲ್ಲಿ ನುಸುಮನೆಯ ರೆಬ್ಬ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಲೆ ಸಂಗತಿ ಬರೆವಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ವಿ. ಬಿ. ಕಾಮತ್, ಮಡಿಕೇರಿ. (3) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (4) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (5) ಸುಂದರ್ ಪ್ರಭು, ಸುಳ್ಯ. (6) ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (7) ಎ. ಎಸ್. ಹುಚ್ಚಯ್ಯ, ಗೋಣಿಕೊಪ್ಪಲು. [18]

ಸಿಡಿತದ ಸಿಗರೇಟು ಸೇದಿ ಸಕ್ತ!

ಫ್ರೆಂಚ್ ಸ್ಟೇಟ್ ಸಿಗರೇಟ್ ಕಂಪೆನಿಯ ಸಿಗರೇಟ್ ಒಂದನ್ನು ತನ್ನ ಗಂಡನು ಈಗ್ಗೆ 4 ವರ್ಷಗಳ ಹಿಂದೆ ಸೇದಲು ಆದು ಸಿಡಿದು ಆತನು ಸಾಯಲು, ಆತನ ಹೆಂಡತಿಯೂದ ಮೇಡಮ್ ಗ್ಯಾರ್ನರ್ಸ್ ಎಂಬುವಳು ಈಗ ಆ ಕಂಪೆನಿಯ ಮೇಲೆ 1000 ಪೌಂಡುಗಳ ಪರಿಹಾರ ದ್ಯಮ್ಯಕ್ಕೆ ವ್ಯವಹಾರ ಹೂಡಿದೆ.

—೦೦—

ಹ್ಯಾಗಿದೆ ಬ್ರಿಟಿಷ್ ಪ್ರಭಾನರ ಪುಣ್ಯ?

ಕೆಲವು ದಿನಗಳ ಹಿಂದೆ ಬ್ರಿಟನ್ನಿನ ಪ್ರಧಾನ ಆಮಾತ್ಯರಾದ ನೆವಿಲ್ ಛೇಂಬರ್ಲೇನರು ಹರ್ ಹಿಟ್ಲರರ ಸಂದರ್ಶನಕ್ಕಾಗಿ ಬರ್ಚ್ಟೆಸ್‌ಗೇಡನ್‌ಗೆ ರಯಸೂಡಿಸಿದ್ದಾಗ ಹಿಟ್ಲರರು ಛೇಂಬರ್ಲೇನರಿಗೆ ಒಂದು ಚುಟ್ಟಾಸನ್ನು ಸೇದಲು ಕೊಟ್ಟುದಲ್ಲದೆ ತಮ್ಮ ಎದುರಿಗೇ ಸೇದಲು ಅನುಮತಿ ಕೊಟ್ಟರಂತೆ! ಹ್ಯಾಗಿದೆ? ಹಿಟ್ಲರರು ತಾವು ಸೇದುವ ಆಭ್ಯಾಸ ಬಿಟ್ಟುಕೊಂಡಿಲ್ಲ ಮತ್ತು ತಮ್ಮ ಸಹ ಪಾಠಿಗಳೂ ಆವರ ಎದುರಿಗೆ ಸೇದಲು ಅನುಮತಿ ಕೊಡುತ್ತಿರಲಿಲ್ಲ.

ಆವರೆ ಛೇಂಬರ್ಲೇನರಿಗೆ ಮಾತ್ರ ಈ ಅನುಮತಿಯು ದೊರೆತಿದ್ದು ಅವರ ಪುಣ್ಯ ವಿಶೇಷವೇ ಸರಿ!

—೦೦—

ಈಗಿನ ವಿಜ್ಞಾನ ಶಾಸ್ತ್ರಕ್ಕೆ ಅಡಿಗಲ್ಲುಯಾವದು?

ಅಥರ್ವ ವೇದವಲ್ಲಿ ಹೇಳಲ್ಪಟ್ಟ ಶ್ಲೋಕಗಳನ್ನು ಆಧಾರವಡಿಸಿಕೊಂಡು, ಒಂದು ಅಪೂರ್ವವಾದ ಯಂತ್ರವನ ನಾಧನವನ್ನು ತಯಾರಿಸಬಹುದಾಗಿದೆ ಅಮಿತವಾಗಿ ವಿಷವಾಯುವನ್ನು ಕಲ್ಪಿಸಿ ರತ್ರು ನೇಸಿಗಳ ಮೇಲೆ ನೋಡಗಳಾಗಿ ಮೂಡಿ ಆ ನೂಲಕ ಅನ್ನ ಪರ್ವನನ್ನು ಸುರಿಸಿ, ಅವರನ್ನೆಲ್ಲಾ ಕೊಲ್ಲಬಹುದಾಗಿದೆ.

ಈ ರಹಸ್ಯಗಳನ್ನೆಲ್ಲಾ ಅಥರ್ವ ವೇದದಿಂದ ಸಂಗ್ರಹಿಸಿ, ಇವುಗಳಿಗೆ ಸವಿವರ ಣೆಯಿಂದ ವ್ಯಾಖ್ಯಾನ ಬರೆದ ಒಬ್ಬ ಭಾರತೀಯರು ಪ್ರಕಟಣೆ ಬಗ್ಗೆ ಕಪ್ಪಣಿಯನ್ನು ಕೇಳಿದಲ್ಲಿ ಕೊಡಲಿಲ್ಲವಂತೆ!

ಶ್ರೀ ಡಾಕ್ಟರ್ ರಾಜಾ ವೆನಿ ವ್ರಸಾವ ಮಿನ್ಸ್ರಾ ಎಂಬವರು ಈ ವಿಷಯವಾಗಿ ಮಾಡಿದ ಸುಹತ್ತರವಾಗಿ ವರಿಶೋಧನೆ ಮಾಡಿದ್ದಾರೆ ಬೊಂಬಾಯಿ ನಗರವಲ್ಲಿ ಮಣ್ಣು, ಪೊಟಾಸಿಯಂ ಕ್ಲೋರೈಡ್, ಹಾಲೂ ಸೇರಿಸಿ ಊಟ ಹೂಡಿದರು. ಆದು ತಿಂಗಳು ಕಾಲ ಇದೇ ಆಹಾರ ಸೇವನೆ ಮಾಡಿ ಜೀವಿಸಿದ್ದಾರೆ.

ಅಮೇರಿಕದ ಸಂಯುಕ್ತ ರಾಜ್ಯಕ್ಕೆ ಹೋಗಿ ಅಲ್ಲಿ ಎಲ್ಲರ ಮುಂದೆ ತಮ್ಮ ದೇಹವನ್ನು ಸುಡಿಸಿಕೊಂಡು, ಪರಕಾಯ ಪ್ರವೇಶದಿಂದ ಬೇರೊಂದು ಶರೀರಕ್ಕೆ ಪ್ರವೇಶಿಸಿ ಪುನಃ ಭಾರತ ದೇಶಕ್ಕೆ ಬರುವರಂತೆ! ಇವಲ್ಲವೆ ನಮ್ಮ ಪೂರ್ವಯೋಗದ ಮಂತ್ರ ವಿದ್ಯೆ!

ವಿವಿಧ ವಿಚಾರ.

ಹಲ್ಲಿನ ಮೇಲೆ ಜಪ್ತಿ.

ನ್ಯೂ ಯಾರ್ಕಿನ ಬಫ್ಫಲೋ ಎಂಬಲ್ಲಿನ ನೀಗ್ರೋನೊಬ್ಬನ ಎರಡು ಹಲ್ಲುಗಳು ವಜ್ರದಿಂದ ಕಟ್ಟಲ್ಪಟ್ಟವುಗಳು. ಈತನ ಹೆಸರು–ಜೋಬರ್ಟ್ ಆಟ್ಕಿನ್. ಸಾಲಗಾರರು ತಕ್ಕುಗೆ ಬರತಕ್ಕ ಸೂರು ಪವಸುಗಳಿಗಾಗಿ ದಾವೆ ಹೂಡಿ, ಆತನ ವಜ್ರದ ಹಲ್ಲುಗಳನ್ನು ಜಪ್ತಿ ('ಎಟೇಜ್') ಮಾಡಿಸಬೇಕೆಂದು ಕೇಳಿಕೊಂಡರು. ಆದರೆ ಮ್ಯಾಜಿಸ್ಟ್ರೇಟರು 'ಆದು ಆತನ ದೇಹಕ್ಕೆ ಸಂಬಂಧಿಸಿದುದಾದುದರಿಂದ, ಸಾಧ್ಯವಿಲ್ಲ' ಎಂದರು.

—೦೦—

ಪಂಥ.

ಯುಗೋಸ್ಲಾವಿಯದ ಪಾಂಛೇಪೊ ಎಂಬ ಹಳ್ಳಿಯಲ್ಲಿ, ಕೆಲಸಗಾರನೊಬ್ಬನು ತನ್ನ ಧನಿಯ ಪಂದಿಯನ್ನು ನೋಡಿದನು. ಆದು ಇಂದು ನಾಳೆಯೋ ಎಂಬಂತೆ ಮರಿಯಿಕ್ಕುವುದರಲ್ಲಿದ್ದಿತು. ಧನಿಯು 'ಈ ಹಂದಿ ನಾಲ್ಕು ಮರಿಗಳನ್ನಿಡಬಹುದು' ಎನ್ನಲು, ಕೆಲಸಗಾರನು 'ಆದು ೫ಕ್ಕಿಂತ ಹೆಚ್ಚಿಗೆ ಮರಿ ಹಾಕುವುದು. ಹಾಗಿದ್ದರೆ ೫ಕ್ಕಿಂತ ಹೆಚ್ಚಿನದೆಲ್ಲವನ್ನೂ ನನಗೆ ಕೊಡುವಿರಾ?' ಎಂದು. ಧನಿಯು ಒಪ್ಪಿದ. ಹಂದಿ ಹನ್ನೆರಡು ಮರಿಗಳನ್ನಿಕ್ಕಿತು. 7 ಕೆಲಸಗಾರನಿಗೆ ಸಂದುವು. ಮತ್ತೊಂದು ದಿನ, ಆದೇ ಕೆಲಸಗಾರನ ಹೆಂಡತಿ ಬಸಿರಾಗಿರುವಳೆಂದು ತಿಳಿದು ಬಂದು, ಧನಿ ಆಳಸೊಡನೆ ಸಂಧಿ ಹಾಕಿದ. ಕೆಲಸಗಾರನ ಮಡದಿ ಎರಡು ಮಕ್ಕಳನ್ನು ಹೆಕ್ತುದರಿಂದ, ಒಂದು ಧನಿಗೆ ಸೇರಿತು. ಆತನು ಆ ಮಗುವನ್ನು ದತ್ತು ಸ್ವೀಕಾರ ಮಾಡಿರುವನು. ಹೇಗಿದೆ ಪಂಥ! ಒಂದು ಮಗುವಿನ ಬೆಲೆ 7 ಹಂದಿ ಮರಿಗಳೆ!

—೦೦—

ಸಸ್ಯಗಳಿಗೆ ನಿದ್ರೆಯೇಕಂತೆ!

ಮನುಷ್ಯರಂತೆಯೇ ಸಸ್ಯಗಳಿಗೆ ಕೂಡಾ ಧಾರಾಳ ನಿದ್ರೆಯು ಬೇಕಾಗಿದೆಯೆಂಬುದನ್ನು ಜೋಹನ್‌ಸನ್ ಎಂಬವನು ಕಾರ್ಯರೂಪಕ್ಕೆ ಪ್ರಯತ್ನಪಡಿಸಿದ್ದಾನೆ.

ಸ್ಕೆಂಡಿನೇವಿಯದ ಈ ಮಹಾನುಭಾವನು ಸಸ್ಯಗಳ ನಿಶ್ಶಕ್ತಿಯ ರಹಸ್ಯವನ್ನರಿಯಲು ಕೆಲವು ಹೂ ಗಿಡಗಳ ಬೇರುಗಳನ್ನು ಬಿಸಿನೀರಿನ ಕೊಳವೆಯ ಬಳಿಯಲ್ಲಿಟ್ಟನಂತೆ. ಮರುದಿನ ಹೂಗಳು ಬಹಳ ಸುಂದರವಾಗಿದ್ದುವಂತೆ. ನಿದ್ರೆ ಮಾಡಲು ಬೆಚ್ಚಗಿರುವ ನೆಲವೇ ಸಸ್ಯಗಳಿಗೆ ಅವಶ್ಯವೆಂದು ಜೋಹನ್‌ಸನ್‌ನಿಗೆ ಆಗ ಸ್ಪಷ್ಟವಾಯಿತು.

ಆವನ ಮಹತ್ಕಾರ್ಯದ ಶೋಧವೆಂದರೆ ಬೇರುಗಳಿಗೆ ನಿದ್ರೆಬರಿಸುವ ಕ್ಲೋರೊಫಾರ್ಮನ್ನು ಕೊಡುವುದಾಗಿದೆ. ಒಂದು ಹೂಗಿಡದ ಗಡ್ಡೆಯನ್ನು ಕ್ಲೋರೊಫಾರ್ಮಿನಲ್ಲಿಟ್ಟು ನೋಡಿದಾಗ ಅಪೂಗಳು ಎಂದಿಗಿಂತ ಬೇಗನೆ ಮತ್ತು ಹೆಚ್ಚು ಹೂಬಿಟ್ಟುವು.

ಮೂಢ ನಂಬಿಕೆ.

ಪೈಸರಾಯರಾದ ಲಾರ್ಡ್ ರಿನ್‌ಲಿತ್‌ಗೌರವರು ಭಾರತದ ರಾಜಧಾನಿಯಾಗಿರುವ ದೆಹಲಿಯನ್ನು ಬಿಟ್ಟು ಬೇರೆ ಮತ್ಯಾವದಾದರೂ ಒಂದು ಊರನ್ನು ರಾಜಧಾನಿಯನ್ನಾಗಿ ಮಾಡಿಕೊಳ್ಳುವರೆಂದು ಸುದ್ದಿ ಹರಡಿದೆ. ಇದಕ್ಕೆ ರಾಜಕೀಯವೇ ಆಗಲಿ, ಆಡಳಿತವೇ ಆಗಲಿ, ಕಾರಣವಲ್ಲವಂತೆ. ಹಿಂದೆ ಎಸ್ಸೊ ಚಕ್ರಾಧಿಪತ್ಯಗಳು, ದೆಹಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಒಂದಲ್ಲ ಒಂದು ದಿನ ನಾಶವೊಂದಿವೆ. ಆದರಿಂದೆಯೇ ಬ್ರಿಟಿಷ್ ಚಕ್ರಾಧಿಪತ್ಯವೂ ಆಗಬಹುದೊ ಏನೋ! ಎಂಬ ಸಂಶಯದಿಂದ ಈಗ ದೆಹಲಿಯಿಂದ ವೈಸರಾಯರು ತಮ್ಮ ರಾಜಧಾನಿಯನ್ನು ಮತ್ತೆ ಯಾವುದಾದರೂ ಪರ ಊರಿಗೆ ಬದಲಾಯಿಸಬಹುದೆಂದು ಹೇಳಲಾಗಿದೆ. ಇದು ಮೂಢ ನಂಬಿಕೆಯಲ್ಲದೆ ಮತ್ತೇನು?

—೦೦—

ಜೇಬಿನಲ್ಲಿಟ್ಟುಕೊಳ್ಳಬಹುದಾದ ಸೂರ್ಯ!

ಕಾಲವು ಯಾವ ರೀತಿಯಲ್ಲಿ ಮುಂಚಿನೋವಾದಿಯಲ್ಲಿ ಓಡುತ್ತಿದೆಯೋ ಆದೇ ರೀತಿ ವಿಜ್ಞಾನ ಪ್ರಪಂಚವೂ ಓಡುತ್ತಿದೆಯೆನ್ನಬಹುದು. ಸೂರ್ಯನಿಗಾಗಿ ನಾವು ಈಗೆ ಕಾಯಬೇಕಾಗಿಲ್ಲ. ನಾವ್ಯಾಗಲು ನಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಹುದಾದ ಯಂತ್ರವೊಂದನ್ನು ಅಮೇರಿಕದ ವಿದ್ಯುಚ್ಛಕ್ತಿಜ್ಞರು ಅಂಜಸಿಯರುಗಳು ಕೂಡಿ ಹಿಡಿದಿರುವರು. ಸೂರ್ಯನ ಪ್ರಕಾಶದ ಐನೂರು ಒಂದು ಭಾಗವನ್ನು ಸ್ವೀಕರಿಸಿ ಒಂದು ಘಂಟೆಯಷ್ಟು ಕಾಲ ಒಂದು ಸಣ್ಣ ಬೆಳಕು. ಜೇಬಿನಲ್ಲಿ ಕಲ್ಲಿನಿಂದ (ಬೆಳ್ಳಿಯಲ್ಲಿ) ಮಾಡಲ್ಪಟ್ಟ ಒಂದು ಕೊಳವೆಯೊಳಗೆ ಪಾದರಸವನ್ನು ಒಂದು ಪರ್ದಾಳಾಕಾರದ ಭಾಗವಿದ್ದು ಅದರ ಮೂಲಕ ಬರುವ ಕಿರಣಗಳನ್ನು ಕೇಂದ್ರೀಕರಿಸಿ ಪ್ರಕಾಶವನ್ನುಂಟುಮಾಡುವ ದೀಪವಿದು.

ಈ ಜೇಬಿನಲ್ಲಿನ ಕೊಳವೆಯು ಅತ್ಯುಷ್ಣತೆಯಾದಿಗೆ ಶಕ್ತಿ ಪಡೆದಿದ್ದಾಗ್ಯೂ ಅದರ ಸುತ್ತ ತಣ್ಣನೆಯ ಪವನವನ್ನು ಇಟ್ಟರಲಾಗುವುದು. ಇದರಿಂದ ರಕ್ಷಣೆಯ ಮೊರೆತಂತಾಗುವುದು. ಪ್ರತಿ ಮೂರು ನಿಮಿಷಗಳಿಗೊಂದಾವರ್ತಿ ಕಣ್ಣಿನಿಂದ ತಂಪನ್ನು ಕೊಡಬೇಕಾಗುತ್ತದೆ. ಈ ದೀಪವು ಸಾಧಾರಣ ದೀವಗಳ 12 ರಷ್ಟು ಬೆಳ್ಳಿಗೆ ಪ್ರಕಾರವಾಗಿರುವುದಲ್ಲದೆ 1200 'ಕ್ಯಾಂಡಲ್ ಪವರ್' ನಷ್ಟು ಪ್ರಕಾಶವನ್ನೂ ಇರುವುದು. ಆವರೆ ಇದರ ಉದ್ದವು ಮನುಷ್ಯನ ಕೈ ಬೆರಳುಗಳಷ್ಟು ಮಾತ್ರವೇ ಇದ್ದು ಪ್ರಕಾಶವೂನವೋಜ ವಿಳಯ ಬೆಳಕನ್ನೇ ಕೊಡುವುದಾಗಿದೆಯಂತೆ!

ಹಸುಗಳಿಗೆ ಕೃತಕ ಹಲ್ಲು.

ಹಸುಗಳಿಗೆ ಕೆಲವು ಹಲ್ಲುಗಳಲ್ಲಿ ಹುಳುಗಳು ಸೇರಿ ಆ ಮೂಲಕ ರೋಗಕ್ಕೆ ಗುರಿಯಾಗುವುದಲ್ಲದೆ ಆವುಗಳು ಮೇವನ್ನು ಸಹ ತಿನ್ನಲಾರದವಾಗುವುವು. ಆದ ಪ್ರಯುಕ್ತ ರಷ್ಯದ ಜಿಲ್ಲೆಗಳಲ್ಲಿಂದಾವ ಒಪೋಪಿಲ್ಯೋಗ್ರಾಡ್ ಎಂಬಲ್ಲಿ ಈಗ ಒಂದು ತರಹ ಲೋಹದ ಹಸುಗಳ ಹಲ್ಲುಗಳನ್ನು ಕಂಡು ಹಿಡಿದಿರುವರು. ಇದರ ಸಹಾಯದಿಂದ ಹಸುಗಳು ಆಹಾರ ಸ್ವೀಕರಿಸಬಲ್ಲವೆಂದು ಕಂಡು ಬಂದಿದೆ.

—೦೦—

(ಶತಮಾನಗಳ ಪ್ಯಾಜೀನ ಬಾವಿ.

ಪುರಾತನ ಪ್ರಸಿದ್ಧವಾದ ಬಾಬಿಯೊಂವರ ಚರಿತ್ರೆಯಿದು. ಇಟಲಿಯಲ್ಲೆಲ್ಲಾ ಪ್ರಸಿದ್ಧವಾದ ಸೋಪುರಗಳ ನಗರವೆಂದು ಪ್ರಖ್ಯಾತವಾದ ಸಾನ್‌ಗಿಮಿನ್ನಾನೋ ಎಂಬ ಊರಿನಲ್ಲಿ ಒಂದು ಪುರಾತನ ಬಾವಿಯಿದೆ. ಈ ಬಾವಿಯು ಸುಮಾರು 1373 ರಲ್ಲಿ ತೋಡಲಾಯಿತೆಂದೂ, ಜನರು ಆದರಿಂದೀಚೆಗೆ ಒಂದೇ ಸಮನೆ ನೀರು ಸೇದುತ್ತಿದ್ದರೂ ಯಾವತ್ತೂ ನೀರು ಕಡಿಮೆಯಾಗಿಲ್ಲವೆಂದು ಹೇಳಲಾಗಿದೆ. ಕಟ್ಟಿಸಿದರೆ ಇಂಥಾ ಭಾವಿಯನ್ನು ಕಟ್ಟಿಸಬೇಕು; ಮತ್ತು ಕಟ್ಟಿಸುವವರ ಮನಸ್ಸೂ ಆವರಂತೆಯೇ ಇರಬೇಕು ಹೇಳಿ.

—೦೦—

ಮೂರು ಆಣೆಗೆ ಮಳೆ.

ಪ್ರಪಂಚದ ಅನೇಕ ಭಾಗಗಳಲ್ಲಿ ಮಳೆ ಬಾರದೆ ರೈತರು ಬಹಳ ನಷ್ಟ ಹೊಂದುತ್ತಾರೆ. ಆದೇ ರೀತಿ ಹಂಗೇರಿಯಲ್ಲಿಯೂ ಕೆಲವು ವೇಳೆ ಮಳೆ ಇಲ್ಲದೆ ಜನರು ಕಷ್ಟಕ್ಕೀಡಾಗುತ್ತಾರೆ. ಈಗ ಅತ್ಯಲ್ಪ ಖರ್ಚಿನಿಂದ ಕೃತಕ ಮಳೆ ಬರುವಂತೆ ಮಾಡಬಹುದೆಂದು ಹಂಗೇರಿಯ ಇಬ್ಬರು ವೈಜ್ಞಾನಿಕರು ತಿಳಿಸುತ್ತಿರುವರು ರಂಗೂನ್ ಗಜೆಟಿನ ಬಾತ್ಮಿದಾರರೊಬ್ಬರು ಒದಿದವರು.

ಪ್ರಜೆಂಡ ಬೆಂಕಿಯಿಂದಲೂ ತಥವಾ ಜ್ವಾಲಾಮುಖಿಯು ಉರಿಯುತ್ತಿದ್ದರೆ ಆ ಪ್ರದೇಶವೂ ಮಳೆ ಉಂಟಾಗುವುದು ಕಂಡು ಬರುತ್ತದೆ. ಇವರಿಂದ ಬೆಂಕಿ ವಿಶೇಷವಾಗಿ ಉರಿದಲ್ಲಿ ಮಳೆ ಬರುತ್ತದೆಂದು ಮೇಲಿನ ವಿಜ್ಞಾನಿಗಳ ಅಭಿಪ್ರಾಯ. ಇದರಿಂದ ಆವರು ಈ ಅಭಿಪ್ರಾಯ ಮೂಡಿದ್ದಾರೆ; ಬೆಂಕಿಯನ್ನು, ಒಂದು ಸದೋಪರಿ, ನದಿಯ ಆಥವಾ ಕಾಲುವೆಯ ನೀರಿನ ಹೊಲ್ಲಾಗದಲ್ಲಿ ಉರಿಯುವಂತೆ ಮಾಡುವುದರಿಂದ ಮಳೆ ಬರುತ್ತದೆಂದು ತಿಳಿಸಿದ್ದಾರೆ. ಈಗ ಇವರ ಸೂಚನೆಯ ಮೇರೆಗೆ ಪ್ರಯೋಗಗಳು ನಡೆಯುತ್ತಿವೆಯಂತೆ. ಒಂದು ಏಕ್ರೆ ಭೂಮಿಗೆ ಬೇಕಾದಷ್ಟು ಮಳೆ ಬರುವಂತೆ ಮಾಡಲು 2½ ಪೌಂಡ್ [ಆಣೆಗಳು] ಗಳಷ್ಟು ಬೇಕಾಗಬಹುದಂತೆ. ಇದು ಜಾರಿಗೆ ಬಂದರೆ 1 ರೂಪಾಯಿಗೆ ಅನೇಕ ಬಾರಿ ಮಳೆ ಬರುವಂತೆ ಮಾಡಬಹುದು. ಈಗ ಹಂಗೇರಿಯ ರೈತರು ತೆರುವ 25 ರೂಪಾಯಿಗಳಿಗೆ ಕರವನ್ನು ರೈತರಿಗೇನೇ ಉಳಿಯುವುದು. ಈ ಯೋಜನೆಯು ಕೊಡಗಿಗೆ ಬಂದಿದ್ದರೆ ಉಪಕಾರವಿತ್ತಲ್ಲವೇ?

ಠರಾವುಗಳು.

6. '1935ನೇ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಮೇರೆ ಚಾರಿಯಲ್ಲಿ ಬರತಕ್ಕ ಸಂಯುಕ್ತ ರಾಜ್ಯ ಘಟನೆಯ ಯೋಜನೆಗಿರುವ ವಿರೋಧವನ್ನು ಮತ್ತು ಭಾರತದ ಭವಿತ್ಯವನ್ನು ನಿರ್ಣಯಿಸುವರಿ ಒಂದು ಮೂಲ ಭೂತ ಸಂಸ್ಥೆಯನ್ನು ಏರ್ಪಡಿಸಲು ಒಡನೆ ತಕ್ಕ ಕ್ರಮಗಳನ್ನು ತೆಗೆಯಲು ಸೂಚನೆಸೂಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಎಚ್ಚಾರಸ್ಸನ್ನು ಮಾಡುತ್ತದೆ.' ಎಂಬ ಠರಾವನ್ನು ಶ್ರೀ ಕೋರನ ದೇವಯ್ಯನವರು ಸೂಚಿಸಿ ಈ ಸಂಯುಕ್ತ ರಾಜ್ಯಘಟನೆಯು ಭಾರತವನ್ನು ಇನ್ನೂ ಪಾರತಂತ್ರ್ಯದಲ್ಲಿ ಶಿಲುಕಿಸುವಂಧಾದ್ದೆಂದೂ, ಜನಪ್ರತಿನಿಧಿಗಳಿಗೆ ಅಲ್ಲಿ ಬಹುಮತವಿಲ್ಲವೆಂದೂ, ಸಂಸ್ಥಾನಗಳ ನೇಮಿತ ಮೆಂಬರಿಂದ ಕೂಡಿದ ಇದರಲ್ಲಿ ಒಗ್ಗಟ್ಟು ಶಕ್ತಿ ದೀರದಲ್ಲಿ ಕ್ಷೋಭೆಯುಂಟಾಗಬಹುದೆಂದೂ, ಅವಿಲ ಭಾರತ ಕಾಂಗ್ರೆಸ್ ಮೂಲ್ಸಲ್ಲು, ಭಾರತದ ಮುಸ್ಲಿಂ ಲೀಗ್ ಸಹ ಇದನ್ನು ವಿರೋಧಿಸಿರುವದೆಂದೂ, ಆದ್ದರಿಂದ ಈ ಘಟನೆಯಿಂದ ಜನಹಿತವನ್ನು ಬಯಸುವದು ಅಸ್ಸಾಧ್ಯವೆಂದೂ ಹೇಳಿದರು.

ಶ್ರೀ ಪಿ. ಜಿ. ಮುದ್ದಮ್ಮಯ್ಯನವರು ಅನುಮೋದಿಸಿದರು

ಫೈನಾನ್ಸು ಮೆಂಬರು ಠರಾವನ್ನು ವಿರೋಧಿಸುತ್ತಾ ಫೆಡರೇಶನ್ ಯೋಜನೆಯನ್ನು ವಿರೋಧಿಸಲು ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟನ್ನೇ ತಿದ್ದುಪಡಿ ಮಾಡಬೇಕೆಂದೂ, ಇವನ್ನು ವಿರೋಧಿಸುವದರಿಂದ ಈ ಘಟನಾ ನಮಿತಿಯಲ್ಲಿ ಕೊಡಗಿಗಿರುವ ಒಂದು ಸ್ಥಳವನ್ನೂ ಕಳಕೊಳ್ಳಬೇಕಾಗುವದೆಂದೂ ಹೇಳಿದರು.

ಶ್ರೀ ಪಿ. ಐ. ಬೆಳ್ಯಪ್ಪನವರು ಠರಾವನ್ನು ಪುಷ್ಟೀಕರಿಸುತ್ತಾ, ಫೆಡರೇಶನು ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನೆಂದೂ, ಆದಕ್ಕೆ ಆರ್ಥಿಕ ನೈನಾಟನ ಮೇರೆ ಅಧಿಕಾರವಿಲ್ಲೆಂದೂ, ಏಳು ಕಾಂಗ್ರೆಸು ಸ್ವಾಂತಗಳೂ ಇದನ್ನು ವಿರೋಧಿಸಿರೆಯೆಂದೂ, ರಾಜ್ಯಘಟನೆಯ ಯೋಜನೆಯಲ್ಲಿ ನಮಗುಗಿರುವ ಪ್ರಾತಿನಿಧ್ಯವು ನಾವು ಚಳವಳಿ ನಡೆಸಿ ಇನ್ನಿಂತ ಉಪಯೋಗಕರವಾದ ಯೋಜನೆಯನ್ನು ಪಡೆಯುವನೆಂದೂ ಹೇಳಿದರು

ಶ್ರೀ ದೇವಯ್ಯನವರು ಉತ್ತರವಿತ್ತ ಮೇಲೆ ಠರಾವನ್ನು ಓಟಿಗೆ ಹಾಕಲಾಗಿ ಚುನಾಯಿತ್ವಮೆಂಬರುಗಳೆಲ್ಲರು ಪರವಾಗಿಯೂ, ಉದ್ಯೋಗಸ್ಥ ಮೆಂಬರರು, ನೇಮಿತ ಮತ್ತು ಯೂರೋಪಿಯನ್ ಮೆಂಬರರು ವಿರೋಧವಾಗಿಯೂ ಓಟು ಮಾಡಿದರು. ಠರಾವು ಪಾಸಾಯಿತು.

7. 'ಬೀರಾಜಪೇಟೆ ಹುಡುಗಿಯರ ಪೈಮರಿ ಶಾಲೆಯನ್ನು ಲೋವರ್ ಸೆಕೆಂಡರಿ ಸ್ಕೂಲಿಗೆ ಮಟ್ಟಕ್ಕೆ ತರಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಎಚ್ಚಾರಸ್ಸನ್ನು ಮಾಡುತ್ತದೆ' ಎಂಬ ಠರಾವನ್ನು ಶ್ರೀ ಐ. ಪಿ. ಕಾರ್ಯಪ್ಪನವರು ಸಭೆಯ ಮುಂದಿಟ್ಟು, ಯಾವದೊಂದು ಜನಾಂಗದ ಅಭಿವೃದ್ಧಿಗೆ ಸ್ತ್ರೀ ವಿದ್ಯಾಭ್ಯಾಸವು ಸಹಕಾರಿಯೆಂದೂ, ಶಾಲೆಯಲ್ಲಿ ಅನರಿಗೆ ಗೃಹಕೃತ್ಯ, ಶಿಕುಸಂರಕ್ಷಣೆ, ಮೊದಲಾದ ಪ್ರಾಮುಖ್ಯ ವಿಚಾರಗಳನ್ನು ಕಲಿಸಬೇಕೆಂದೂ, ಸಿಬ್ಬಂದಿ ಪೋಷಿಯ ನೆವದಿಂದ ಶಾಲೆಯನ್ನು ತೆಗೆದು ಹಾಕುವುದು, ಅಲ್ಪ ಲಾಭಕ್ಕಾಗಿ ಅಮಿತ ಸೌಲಭ್ಯವನ್ನು ಹಾಳುಮಾಡಿದಂತಾಗುವದೆಂದೂ, ಹುಡುಗರ ಶಾಲೆಗೆ ಹುಡುಗಿಯರನ್ನು ತಂದೆ ತಾಯಿಗಳು ಕಳುಹಿಸುವುದು ಕಮ್ಮಿಯೆಂದೂ, ದಕ್ಷಿಣ ಕೊಡಗಿನ ಸ್ತ್ರೀ ವಿದ್ಯಾಭ್ಯಾಸಕ್ಕೆ ಈ ಶಾಲೆಯ ಮೇಲೆ ಹೊಂದಿಕೊಂಡಿದೆಯೆಂದೂ, ಎಲ್ಲರೂ ಈ ಶಾಲೆಯು ಹೈಸ್ಕೂಲಾಗಿ ಮೂರ್ವಡಬಹುದೆಂಬ ಆಶೆಯಿಂದಿರುವಾಗ ಸದ್ಯಕ್ಕೆ ಇರುವ ಶಾಲೆಯನ್ನೇ ಕೆಡಿಸುವದು ಹಿಪವನಿಸಬೆಂದೆರು.

ಶಾಲಾ ಇನ್ಸ್‌ಪೆಕ್ಟರರು ಠರಾವನ್ನು ವಿರೋಧಿಸಿ, ಹುಡುಗಿಯರ ಶಾಲೆಗಳು ಸರಿಯಾಗಿ ಕೆಲಸ ಮಾಡುವುದರಿಂದ ಎಲ್ಲಾ ಹುಡುಗಿಯರ ಶಾಲೆಗಳೂ ಕೆಳೆಯಲ್ಪಡಬೇಕೆಂದೂ, ಈ ಶಾಲೆಗಳನ್ನು ಹುಡುಗರ ಶಾಲೆಯೊಂದಿಗೆ ಸಂಯೋಜಿಸಿದರೆ ಶಾಲೆಗೆ ಬರುವ ಹುಡುಗಿಯರ ಸಂಖ್ಯೆಯು ಕಡಿಮೆಯಾಗುವದಲ್ಲವೆಂದೂ ಹೇಳಿದರು.

ಶ್ರೀ ಪಿ ಐ ಬೆಳ್ಯಪ್ಪನವರು ಹುಡುಡುಗರ ಮತ್ತು ಹುಡುಗಿಯರ ಶಾಲೆಗಳನ್ನು ಒಂದು ಮೂಮುವುದು ಯೋಗ್ಯ ತಪ್ಪವೆಲ್ಲವೆಂದೂ, ಇದರಿಂದ ಹುಡುಗಿಯರ ಸಂಖ್ಯೆಯು ಖಂಡಿತ ಕಮ್ಮಿಯಾಗುವದೆಂದೂ, ಎಲ್ಲಾ ಪೇರಗಳಲ್ಲಿ ಸ್ತ್ರೀ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುತ್ತಿರುವಾಗ ಇಲ್ಲಿ ಹುಡುಗಿಯರ ಶಾಲೆಗಳನ್ನು ಮುಚ್ಚುವದರಿಂದ ಸ್ತ್ರೀ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಿದಂತಾಗುವಲ್ಲಿನೆಂದೂ, ಇದರಿಂದ ವಿದ್ಯಾಭ್ಯಾಸದಲ್ಲಿ ಮುಂದುರುವ ಕೊಡಗು ಹಿಂದೆ ಬೀಳುವದೆಲ್ಲ ನಂದೇ ಹೆವಿಲ್ಲನೆಂದೂ ಹೇಳಿ ಠರಾವನ್ನು ಸಮರ್ಥಿಸಿದರು

ಶಾಲಾ ಇನ್ಸ್‌ಪೆಕ್ಟರು ಜವಾಬಿತ್ತ ಮೇಲೆ ಠರಾವನ್ನು ಓಟಿಗೆ ಹಾಕಲಾಗಿ ಕಾಂಗ್ರೆಸ್ ಮೆಂಬರರು ಪರವಾಗಿಯೂ, ಉದ್ಯೋಗಸ್ಥ ಮೆಂಬರರು ವಿರೋಧವಾಗಿಯೂ ಓಟು ಮಾಡಿದರು. ಠರಾವು ಪಾಸಾಯಿತು. ಬಾಕಿ ಮೆಂಬರರು ಓಟು ಮಾಡಲಿಲ್ಲ.

8. 'ಕೌನ್ಸಿಲಿಸಲ್ಲಿರುವ ಉದ್ಯೋಗಸ್ಥರಲ್ಲದ ಮೆಂಬರುಗಳಿಗೆ ಆನರ ಸದಸ್ಯತನವಿರುವ ವರೆಗೆ ಕೊಡಗು ಗಜೆಟಿನ್ನು ಮುಫತ್ತಾಗಿ ಕೊಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ.' ಈ ಠರಾವನ್ನು ಶ್ರೀ ಏನಂಡ ಕಾರ್ಯಪ್ಪನವರು ಸೂಚಿಸಿ, ಸರಕಾರದವರು ಗಜೆಟಿನ್ನು ಪ್ರಕಟಿಸುವ ಉದ್ದೀಶ್ಯವು ಅವರು ಆಗಾಗ್ಗೆ ಬಡಲ್ಪಾಯಿಸುವ ಖಾನೂನು ಕಾಯಿದೆಗಳ ಪರಿಚಯವು ಜನತೆಗಿರಬೇಕೆಂದಾಗಿದೆಯೆಂದೂ, ಕೌನ್ಸಿಲಿನ ಚುನಾಯಿತ ಮೆಂಬರರಿಗೂ ಸಹ ಸರಕಾರದವರು ಪೂಡುವ ಬದಲಾವಣೆಗಳು ತಿಳಿದಿರುವುದು ಅಗತ್ಯವೆಂದೂ, ಬೇರೆ ಪ್ರಜಾಪ್ರಭುತ್ವ ರಾಜ್ಯಗಳಲ್ಲಿರುವಂತೆ ಇಲ್ಲಿಯೂ ಕಾನೂನ್ನು ಸವಸ್ಯರಿಗೆ ಮುಫತ್ತು ಒದಗಿಸಿಕೊಡಬೇಕೆಂದೂ, ಇವರಿಂದ ಸರಕಾರಕ್ಕೇನೂ ಹೆಚ್ಚಿನ ನಷ್ಟವಾಗದೆಂದೂ, ಹೇಳಿದರು

ಶ್ರೀ ಪಿ. ಜಿ. ಮುದ್ದಮ್ಮಯ್ಯನವರು ಅನುಮೋದಿಸಿದರು

ಫೈನಾನ್ಸು ಮೆಂಬರು -ಜೇರೆ ಯಾನ ಪ್ರಾಮ್ಯಗಳಲ್ಲೂ ಗಜೆಟ್ ಕಾಯಿತ್ತಾಗಿ ಕೊಡಲ್ಪಡುತ್ತಿಲ್ಲವೆಂದೂ, ಕೌನ್ಸಿಲು ಸದಸ್ಯರಿಗೆ ನಾವು ಕೊಟ್ಟಂತೆ ಮುನ್ಸಿಪಲ್ ಮೆಂಬರುಗಳಿಗೂ, ಡಿ. ಬೋರ್ಡ್ ಮೆಂಬರುಗಳಿಗೂ ಕೊಡಬೇಕಾಗುವದೆಂದೂ, ಹೇಳಿ ಠರಾವನ್ನು ವಿರೋಧಿಸಿದರು.

ಶ್ರೀ ಬಿ. ಯಂ. ಕಾರ್ಯಪ್ಪನವರು ಠರಾವನ್ನು ಅನುಮೋದಿಸಿ ಜೇರೆ ಪ್ರಾಂತದ ಸದಸ್ಯರಿಗೆ ಸಂಬಳವಿದೆಯೆಂದೂ, ಇಲ್ಲಿ ಚುನಾಯಿತ ಸದಸ್ಯರ ಸಂಖ್ಯೆಯು ಬಹು ಕಮ್ಮಿಯಾಗಿರಿಂದ ಅವರಿಗೆ ಗಜೆಟ್ಟನ್ನು ಮುಫತ್ತು ಕೊಡುವುದರಲ್ಲಿ ಸರ್ಕಾರಕ್ಕೆ ಏನೂ ತೊಂದರೆ ಇಲ್ಲ ಎಂದೂ ಹೇಳಿದರು.

ಠರಾವಿನ ಪರ ಶ್ರೀ ಮನೆಯಪಂದ ಬೆಳ್ಯಪ್ಪನವರಲ್ಲದ ಎಲ್ಲಾ ಚುನಾಯಿತ ಯೂರೋಪಿಯನ್ ಮತ್ತು ನೇಮಿಯ ಮೆಂಬರುಗಳೂ, ಅಬ್ದುಲ್ ರಹಮಾನ್ ಖಾನರೂ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

9. 'ಇಂಪೀರಿಯಲ್ ಬ್ಯಾಂಕಿನ ಶಾಖೆಯೊಂದನ್ನು ಮಡಿಕೇರಿಯಲ್ಲಿ ತೆರೆಯುವಂತೆ ಆ ಬ್ಯಾಂಕಿನ ಅಧಿಕಾರಿಗಳನ್ನು ಕೇಳಲು ಚೀಫ್ ಕಮಿಷನರರಿಗೆ ಈ ಕೌನ್ಸಿಲು ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಶ್ರೀ ಮನೆಯಪಂಡ ಬೆಳ್ಯಪ್ಪನವರು ಸಭೆಯ ಮುಂದಿಟ್ಟು, ಇಲ್ಲಿ ಬ್ಯಾಂಕಿಂಗ್ ಅನುಕೂಲತೆಗಳೇನೂ ಇಲ್ಲವೆಂದೂ, ಟ್ರೈನಂಕೂರ್ ನೇಶನಲ್ ಮತ್ತು ಫೆಲಾನ್ ಬೇಂಕಿನ ಮುಚ್ಚುವಿಕೆಯಿಂದ ಕೊಡಗಿಗೆ 3 ಲಕ್ಷ ರೂಪಾಯಿ ನಷ್ಟ ಸಂಭವಿಸಿದೆಯೆಂದೂ, ಆದ್ದರಿಂದ ಇಂಪೀರಿಯಲ್ ಬ್ಯಾಂಕಿನ ಶಾಖೆ ಅಗತ್ಯವೆಂದೂ ಪೂತಾಡಿದರು.

ಫೈನಾನ್ಸ್ ಮೆಂಬರರು 1890 ರಲ್ಲಿ ಇಲ್ಲಿ ಒಂದು ಶಾಖೆಯಿಟ್ಟು ಪ್ರಯತ್ನ ಮಾಡಿ ಜಯಪ್ರದವಾಗದ್ದರಿಂದ ನಷ್ಟ ಮಾಡಲಾಯಿತೆಂದೂ, 1919 ಮತ್ತು 1927 ರಲ್ಲಿ ಬ್ಯಾಂಕಿನವರನ್ನು ಕೇಳಲು ಅವರು ಶಿರಸ್ಕರಿಸಿರುವರೆಂದೂ, ಆದ್ದರಿಂದ ಇದಕ್ಕೆ ಅನುಮ ಒಪ್ಪಲಿಕ್ಕೆಲ್ಲನೆಂದೂ ಹೇಳಿದರು.

ಓಟಿಗ ಹಾಕಲಾಗಿ ಕಾಂಗ್ರೆಸ್ ಪರ ಮೆಂಬರರಲ್ಲದ ಎಲ್ಲಾ ಚುನಾಯಿತ ದೇಶೀಯ ಮೆಂಬರುಗಳೂ, ಅಬ್ದುಲ್ ರಹಮಾನ್ ಖಾನರೂ ವರವಾಗಿಯೂ, ಯೂರೋಪಿಯನ್ ಚುನಾಯಿತ ಮೆಂಬರರಲ್ಲದೆ ಬಾಕಿ ಮೆಂಬರುಗಳು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಂಜೂರಾಗಲಿಲ್ಲ.

27-10-'38.

ಎರಡನೇ ದಿನ.

10 ಶ್ರೀ ಯಂ ಯಂ. ಬೆಳ್ಯಪ್ಪನವರು 'ನಾಗರ ಹೊಳೆ ರೇಂಜಿನ ಪೂರ್ವ ಭಾಗದ ಫಾರೆಸ್ಟ್‌ಗಳನ್ನು ಈಗ ನಿಶ್ಚಯಿಸಿರುವಂತೆ ಒಪ್ಪಂದಿಂದ ಕಂಟ್ರಾಕ್ಟು ಕೊಡುವನನ್ನು ರದ್ದು ಮಾಡಬೇಕು. ಇದರ ಬಗ್ಗೆ ದಕ್ಷಿಣ ಇಂಡಿಯಾದ ಪ್ರಾಮುಖ್ಯ ಪತ್ರಿಕೆಗಳಲ್ಲಿಯೂ, ಸ್ಥಳೀಯ ಗಜೆಟ್ಟಿನಲ್ಲಿಯೂ ಪ್ರಕಟಣೆಯನ್ನು ಮಾಡಿ ದರಕಾಸ್ತುಗಳನ್ನು ತರಿಸುವದಲ್ಲದೆ ಈಗ ಕಡಿದು ಡ್ರೈಸ್ ಮಾಡಿದ ತೊಲೆ ಮರಗಳನ್ನು ಹುಣಸೂರು ಡಿಪೋವಿಗೆ ಸಾಗಿಸಿ ಇಲಾಖೆಯವರು ಮೂರಾಟ ಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ.' ಎಂಬ ಠರಾವನ್ನು ಸೂಚಿಸಿ ಈ ವರೆಗೆ ತೊಲೆ ಮರಗಳು ಫಾರೆಸ್ಟು ಇಲಾಖೆಯವರಿಂದ ಮೂರಬ್ಬಡುತಿದ್ದವೆಂದೂ, ಈ ಪರ್ಚ ಅವರು ಕೂಪ್ (Coup) ಯೋಜನೆಯ ಪ್ರಕಾರ ಕೊಡಲು ಪ್ರಯತ್ನಿಸುತ್ತಿರುವರೆಂದೂ, ನಾಗರ ಹೊಳೆ ರೇಂಜಿನಲ್ಲಿ ಕೆಲವು ಸ್ವಂತ ಕಂಟ್ರಾಕ್ಟುದಾರರಿಗೆ ಕೊಡಲ್ಪಟ್ಟಿದಯೆಂದೂ, ಗವರ್ನಮೆಂಟಿನವರು ಪತ್ರಿಕೆಯಲ್ಲಿ ಪ್ರಕಟವಡಿಸಿ ದರಕಾಸ್ತುಗಳನ್ನು ತರಿಸುವ ವಿಧಾನಕ್ಕೆ ಒಪ್ಪಿದ್ದರೂ, ಅದಕ್ಕೆ ವ್ಯತಿರಿಕ್ತ ಮಾಡುವುದರಿಂದ ಗವರ್ನಮೆಂಟಿಗೆ ನಷ್ಟವಾಗುವದೆಂದೂ ಹೇಳಿದರು.

ಶ್ರೀ. ಎಸ್. ರಾಮಸ್ವಾಮಿಯವರು ಅನುಮೋದಿಸಿದರು.

ಫೈನಾನ್ಸ್ ಮೆಂಬರರು ಇನ್ಸ್‌ಪೆಕ್ಟರ್ ಜನರಲರವರು ಈ ಯೋಜನೆಗೆ ವಿಫಾರಸ್ಸು ಮಾಡಿರುವರೆಂದೂ, ಈ ಯೋಜನೆಯಿಂದ ಸ್ಥಳೀಯ ಜನರಲ್ಲಿ ನಹಿವಾಟಿಗೆ ಅನುಕೂಲ ಕಲ್ಪಿಸಿವಂತಾಗುವದೆಂದೂ ಹೇಳಿ ಠರಾವನ್ನು ವಿರೋಧಿಸಿದರು.

ಶ್ರೀ ಸೋಮಣ್ಣನವರು ಮತ್ತು ಮಲ್ಲಪ್ಪನವರು ಠರಾವನ್ನು ಪುಷ್ಟೀಕರಿಸಿ ಮಾತಾಡಿದರು.

ಶ್ರೀ ಬಿ. ಯಂ. ಕಾರ್ಯಪ್ಪನವರು ಠರಾವನ್ನು ವಿರೋಧಿಸಿದರು.

ಶ್ರೀ ಯಂ. ಯಂ. ಬೆಳ್ಯಪ್ಪನವರು ಉತ್ತರವಿತ್ತ ಮೇಲೆ ಠರಾವನ್ನು ಓಟಿಗೆ ಹಾಕಲಾಗಿ ಮೂರು ಆಯರು ಮೆಂಬರುಗಳೂ, ಯಂ. ಯಂ. ಬೆಳ್ಯಪ್ಪನವರು ಮತ್ತು ಚೌದ್ದು ಕಾಳಪ್ಪನವರು ವರವಾಗಿಯೂ, ಕೆ. ಯಂ. ದೇವಯ್ಯನವರು ಮತ್ತು ಐ. ಪಿ. ಕಾರ್ಯಪ್ಪನವರಲ್ಲದೆ ಬಾಕಿ ಮೆಂಬರರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಬಿದ್ದು ಹೋಯಿತು.

ಕೌನ್ಸಿಲು ಮೀಟಿಂಗು.

ಸಂಯುಕ್ತ ರಾಜ್ಯ ಘಟನೆಗೆ ತೀವ್ರ ವಿರೋಧ.

ಭೂಮಿ ಅಡಮಾನ್ ಬ್ಯಾಂಕ್ ಸ್ಥಾಪಿಸಲು ಸರ್ಕಾರಕ್ಕೆ ಅಸಾಧ್ಯ.

ಸಂತೆ ದಿನಗಳಲ್ಲಿ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ಮುಚ್ಚಬೇಕು.

ಶಾಲಾ ಪಠ್ಯ ಪುಸ್ತಕಗಳನ್ನು ಆರಿಸಲು ಕಮಿಟಿಯು ನೇಮಕವಾಗಬೇಕು.

11 'ಕ್ಲುಪ್ತ ಸಮಯದೆ ರಂದಾಯ ವಿ ಪರಿಷ್ಕರಣವು ನಡಾಸಲ್ಪಡಬೆ ಕೆಂದು ಈ ಕೌನ್ಸಿಲು ಚೀಫ್ ಕಮಿಷನರಿಗೆ ವಿಫಾರಸ್ಸು ಮಾಡುತ್ತದೆ' ಎಂಬ ರಾವಪನ್ನು ಶ್ರೀ ಯಂ ಯಂ ಬೆಳ್ಯಪ್ಪನವರು ಸಭೆಯ ಮುಂಬಿಟ್ಟು ಆಗಾಗ್ಯೆ ಈ ವೀತಿಯ ಪರಿಷ್ಕರಣವನ್ನು ನಡಯಿಸುವುದರಿಂದ ಜನರಿಗೆ ತೊಂದರೆಯಲ್ಲುಂ, ಇದು ಸೂಲ್ಪ ಸಲು ನ ಲೈಕ್ಷಿಸಿ ಪರಿಷ್ಕರಣಕ್ಕೆಷ್ಟು ಸಮಯ ತೆಗೆದುಕೊಳ್ಳಬಹುದೆಂದು ಆರ್ಥಿಕ ನಿಪುಣರಿಂದ ಜನ್ಮಾಂತರ ಲಿಪಿಯಿಂತಿಯ ಮಿಗಳಿಗೆ ಮತ್ತೆ ಒಂದೆಸೆಂದೂ, ಆದ್ದರಿಂದ ರಾವನ್ನು ವಿರೋಧಿಸುತ್ತೇನೆಂದೂ ಹೇಳಿದರು

ಶ್ರೀ ಕೆ ಮಲ್ಲಪ್ಪನವರು, ಭೂಮಿ ಆಡಮಾನ ಬ್ಯಾಂಕು ನ್ಯಾಜಾ ಒಬಾಬ್ದಾರಿಯುಳ್ಳದಲ್ಲವೆಂದೂ, ಸೆಂಟ್ರಲ್ ಬ್ಯಾಂಕಿಗೂ, ಇದಕ್ಕು ಸ್ಪರ್ಧ ಬರಲಿಕ್ಕಿಲ್ಲವೆಂದೂ, ಸಗು ರೈತರಿಗೂ ಇದರಿಂದ ತುಂಬಾ ಪ್ರಯೋಜನವಿದೆಯೆಂದೂ, ಆದ್ದರಿಂದ ರಾವನ್ನು ಸಮರ್ಥಿಸುತ್ತೇನೆಂದು ಹೇಳಿದರು

ಶ್ರೀ ಪಿ ಐ ಪೆಲ್ಯಪ್ಪನವರು ಇಡೀ ಕೊಡಗೇ ಭೂಮಿ ಆಡಮಾನ ಬ್ಯಾಂಕಿಗೆ ಸಣ್ಣದಾಗಿರುವಾಗ, ಸಾಗುವಳಿಗೆ ಸಾಲ ಸೌಕರ್ಯವನ್ನು ಅನುಕೂಲಗಳಿಗೆ ಸೀಲಕಾಯ್ದು ತಿರಸ್ಕರಿಸಿಯೆ ನ್ನು ಹೇಳಿ ಕೂಡುವುದು ಸರಿಯಲ್ಲವೆಂದೂ, ಈ ಬ್ಯಾಂಕನ್ನು ಸ್ಥಾಪಿಸಿದರೆ ಎಂಡಿಪೆಷನಾಗಿಯೂ ಸಂಬ್ಯಲ ಬ್ಯಾಂಕಿನೊಂದಿಗೆ ಸ್ಪರ್ಧ ಬರಲೆಂದೂ, ಆದ್ದರಿಂದ ರಾವನ್ನು ವಿರೋಧಿಸುತ್ತೇನೆಂದೂ ಹೇಳಿದರು

ಶ್ರೀ ಪಿ ಯಂ ಕಾರ್ಯಪ್ಪನವರು ರಾವನ್ನು ವಿರೋಧಿಸಿ ಮಾತಾಡಿದರು

ಶ್ರೀ ಎಸ್ ಸಂ ಪೂಣ್ಣನವರು ಆರ್ಥಿಕ ಏಜನರಾಗಿ ಸಮಿತಿಯ ಕೆಲವು ಷರತ್ತುಗಳನ್ನು ಓದಿ ರಾವನ್ನು ಪುಷ್ಟೀಕರಿಸಿದರು

ಶ್ರೀ ಯಂ ಯಂ ಬೆಳ್ಯಪ್ಪನವರು ಜವಾಬ್ದಿಸಿದರು

ಫೈನಾನ್ಸು ಮಂಬರು ಎಲ್ಲಾ ಫೈರ ನ ಲಗಳನ್ನು ನಿವಾರಿಸುವುದು ಅಸಾಧ್ಯ ನೆಂದೂ, ಸಂಚಾರಿ ಮತ್ತು ದೊಂಜ ಯಿಯಲ್ಲಿ ಭೂಮಿ ಆಡಮಾನ ಬ್ಯಾಂಕು ಜಯಪ್ರದವಾಗಿಲ್ಲವೆಂದೂ, ಇಲ್ಲಿ ಆರ್ಥಿಕ ತೊಂದರೆಯಿರುವುದರಿಂದ ರಾವನ್ನು ನಿರೋಧಿಸುತ್ತೇನೆಂದರು

ಓಟಿಗೆ ಹಾಕಲಾಗಿ ರಾಂಗ್ರೆಸ್ ಪರ ನೆಂಬರುಗಳು ಕೆಲವು ಯೂರೋಪಿಯನ್ ಮೆಂಬರುಗಳು ವಿರೋಧವಾಗಿಯೂ, ಚಾ ಕಿ ಚುನಾಯಿತ ದೇಶೀಯ ಸೆಂಬರುಗಳು ಪರವಾಗಿಯೂ ಓಟು ಕೊಡಿದ್ದರಿಂದ ರಾವು ಬಿದ್ದು ಹೋಯಿತು

13 ಶ್ರೀ ಯಂ ಯಂ ಬೆಳ್ಯಪ್ಪನವರು 'ಸ್ಯಾಂತೀಕ ಮೊರ್ಕಟಿಂಗ್ ಸೂಸೈಟಿಯನ್ನು ಸ್ಥಾಪಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಂದು ಈ ಸಭೆಯು ಚೀಫ್ ಕಮಿಷನರಿಗೆ ಸುಪಾರಿಸುತ್ತದೆ' ಎಂಬ ರಾವನ್ನು ಮಂಡಿಸಿದ್ದು, ಕೊಡಗಿನಲ್ಲಿ ಮೊರ್ಕಟಿಂಗ್ ಸೂಸೈಟಿ ಇರುವುದು ಅತ್ಯಾವಶ್ಯಕವೆಂದೂ, ವಿರಾಜಪೇಟೆಯಲ್ಲಿರುವ ಮೋಲ ಸೇಲ್ ಸೊಸೈಟಿಯು ಜಯಪ್ರದವಲ್ಲವೆಂದೂ, ಆದ್ದರಿಂದ ಒಂದು ಮೊರ್ಕಟಿಂಗ್ ಸೊಸೈಟಿ ನಾಡಿದರೆ ಹಿತವೆಂದೂ, ಸೀನಿಯರ್ ಇನ್ಸಪೆಕ್ಟರರ ಕೆಲಸದಿಂದ ಸ್ಟೋರುಗಳೇನೂ ಯಶಸ್ವಿಯಾಗಿಲ್ಲವೆಂದೂ ಹೇಳಿದರು

ಶ್ರೀ ಕೆ ಮಲ್ಲಪ್ಪನವರು ಅನುಮೋದಿಸಿದರು

ಫೈನಾನ್ಸು ಮೆಂಬರೇ, ಸೊರ್ಕಟಿಂಗ್ ಸೊಸೈಟಿಯು ಆರ್ಥಿಕವಾಗಿ ಹೊಣೆಯಾಗಿರುವುದೆಂದೂ ಹೇಳಿದರು

ಒಟಿಗೆ ಹಾಕಲಾಗಿ ಎಲ್ಲಾ ಬುಸಾಯಿ ಸೆಂಬರುಗಳೂ ಸರಕಾರಿ ಓಟು ಕೊಡಿದ್ದರೀಂದ ರಾವ್ನು ಪಾಸಾಯಿತು

14 'ಎಲೆಕೆಂಬಿ ಮತ್ತು ಹೈಸ್ಕೂಲುಗಳಿಗೆ ಪರೀಕ್ಷಾರ್ಥಿಗಳನ್ನು ನಿರ್ಬೈಸಲು ಒಂದು ಟಿಕ್ಕೆಟ್ ಬುಕ್ ಕಮಿಟಿಯನ್ನು ನೇರ್ಪಡಿಸಲು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಕೌನ್ಸಿಲು ಚೀಫ್ ಕಮಿಷನರಿಗೆ ಸುಪಾರಿ ಮಾಡುತ್ತದೆ' ಎಂಬ ರಾವನ್ನು ಶ್ರೀ ಯಂ ಯಂ ಬೆಳ್ಯಪ್ಪನವರು ಸೂಚಿಸಿ, ಕೊಡಗಿನ ಶಿಕ್ಷಣ ಸಂಬಂಧ ಪ್ರಶ್ನೆಗಳು ಆಗಾಗ್ಗೆ ಬದಲಾಗುವುದರಿಂದ ಪೂಸಕರಿಗೆ ಇದೊಂದು ಹೊರೆಯಾಗಿರುವುದೆಂದೂ, ಮದ್ರಾಸು ಗೌರ್ನಮೆಂಟಿನಲ್ಲಿ ಎಸೆಂಪರೆ ಪ್ರಶ್ನೆಪತ್ರಿಕೆಗಳನ್ನು ನಿರ್ಬೈಸಲು ಪಬ್ಲಿಸ್ಸು ಸಂಬಂಧಪಟ್ಟವರನ್ನು ಸಂಪರ್ಕಿಸಿ ಅವಕಾಶ ಮಾಡಿಕೊಳ್ಳುತ್ತಿರುವುದೂ, ಆದ್ದರಿಂದ ಇಲ್ಲಿಯೂ ಪ್ರಶ್ನೆಪತ್ರಿಕೆಗಳನ್ನು ಪಬ್ಲಿಕ್ ಪ್ರೊಪೆಸರುಗಳಾಗಿರುವ ತಮ್ಮ ಆಪ್ತರಿಂದ ಇವಕ್ಕೆ ಒಂದು ಕಮಿಟಿಯನ್ನೇರ್ಪಡಿಸುವುದು ಅಗತ್ಯವೆಂದೂ ಹೇಳಿದರು

ಶ್ರೀ ರಾಮಮೂರ್ತಿಯವರು ಅನುಮೋದಿಸಿದರು

ಎಜ್ಯುಕೇಷನಲ್ ಆಫೀಸರ್ – ರಾವನ್ನು ವಿರೋಧಿಸುವುದಾಗಿಲ್ಲವೆಂದೂ ಆದ್ದರಿಂದ ಇಲ್ಲಿಯೂ ಪ್ರಶ್ನೆಪತ್ರಿಕೆಗಳನ್ನು ಪಬ್ಲಿಕ್ ಪ್ರೊಪೆಸರುಗಳಿಂದ ತಯಾರಿಸಲು ಅಗತ್ಯವೆಂದೂ ಹೇಳಿದರು

ಶ್ರೀ ಎಸ್ ಸಂ ಪೂಣ್ಣನವರು ಈ ರಾವನ್ನು ಪುಷ್ಟೀಕರಿಸಿದರು

ಶ್ರೀ ಯಂ ಯಂ ಬೆಳ್ಯಪ್ಪನವರು ಜವಾಬ್ದಿಸಿದರು

ಫೈನಾನ್ಸು ಮಂಬರು ಎಲ್ಲಾ ಫೈರ ನ ಲಗಳನ್ನು ನಿವಾರಿಸುವುದು ಅಸಾಧ್ಯ ನೆಂದೂ, ಸಂಚಾರಿ ಮತ್ತು ದೊಂಜ ಯಿಯಲ್ಲಿ ಭೂಮಿ ಆಡಮಾನ ಬ್ಯಾಂಕು ಜಯಪ್ರದವಾಗಿಲ್ಲವೆಂದೂ, ಇಲ್ಲಿ ಆರ್ಥಿಕ ತೊಂದರೆಯಿರುವುದರಿಂದ ರಾವನ್ನು ನಿರೋಧಿಸುತ್ತೇನೆಂದರು

ಓಟಿಗೆ ಹಾಕಲಾಗಿ ರಾಂಗ್ರೆಸ್ ಪರ ನೆಂಬರುಗಳು ಕೆಲವು ಯೂರೋಪಿಯನ್ ಮೆಂಬರುಗಳು ವಿರೋಧವಾಗಿಯೂ, ಚಾ ಕಿ ಚುನಾಯಿತ ದೇಶೀಯ ಸೆಂಬರುಗಳು ಪರವಾಗಿಯೂ ಓಟು ಕೊಡಿದ್ದರಿಂದ ರಾವು ಬಿದ್ದು ಹೋಯಿತು

13 ಶ್ರೀ ಯಂ ಯಂ ಬೆಳ್ಯಪ್ಪನವರು 'ಸ್ಯಾಂತೀಕ ಮೊರ್ಕಟಿಂಗ್ ಸೂಸೈಟಿಯನ್ನು ಸ್ಥಾಪಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಂದು ಈ ಸಭೆಯು ಚೀಫ್ ಕಮಿಷನರಿಗೆ ಸುಪಾರಿಸುತ್ತದೆ' ಎಂಬ ರಾವನ್ನು ಮಂಡಿಸಿದ್ದು, ಕೊಡಗಿನಲ್ಲಿ ಮೊರ್ಕಟಿಂಗ್ ಸೂಸೈಟಿ ಇರುವುದು ಅತ್ಯಾವಶ್ಯಕವೆಂದೂ, ವಿರಾಜಪೇಟೆಯಲ್ಲಿರುವ ಮೋಲ ಸೇಲ್ ಸೊಸೈಟಿಯು ಜಯಪ್ರದವಲ್ಲವೆಂದೂ, ಆದ್ದರಿಂದ ಒಂದು ಮೊರ್ಕಟಿಂಗ್ ಸೂ

ಕೊಡಗು

ನವೆಂಬರ್ ತಾರೀಕು ೪ನೇ ಶುಕ್ರವಾರ ೧೯೩೮.

ಡಿಸ್ಟ್ರಿಕ್ಟ್ ಬೋರ್ಡಿನ ಬಜೆಟ್.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ 1938-39 ನೇ ವರ್ಷದ ಬಜೆಟ್ಟನ್ನು ಸರಿಪಡಿಸಲು ಕಳೆದ ತಾ 31 ರಲ್ಲಿ ಬೋರ್ಡಿನ ಮಿಟಿಂಗೊಂದು ನಡೆಯಿತು. ಬೋರ್ಡಿನ ಈ ವರ್ಷದ ಆದಾಯ ವಚ್ಚವನ್ನು ಚರ್ಚಿಸಲು ಮಾಡಿದ ಮಿಟಿಂಗುಗಳಲ್ಲಿ ಇದು ನಾಲ್ಕನೇಯದ್ದಾಗಿದೆ. ನಿಬಂಧನೆ ಪ್ರಕಾರ ಫೆಬ್ರವರಿ ತಿಂಗಳಲ್ಲಿ ಪ್ರಥಮ ಬಜೆಟ್ ಮಿಟಿಂಗು ನಡೆಸಲ್ಪಟ್ಟಿತು. ಆಪೆ ಆಗಿನ ಅಧ್ಯಕ್ಷರ ಮೇಲೆ ಜುನಾಯಿತ ಮೆಂಬರುಗಳಿಗೆ ವಿಶ್ವಾಸವಿಲ್ಲದ ಕಾರಣ ಬಜೆಟ್ಟನ್ನು ಮಂಜೂರು ಮಾಡಲಿಲ್ಲ. ಮಾರ್ಚ್ ತಿಂಗಳಲ್ಲಿ ಕಮಿಷನರವರ ಪತ್ರದ ಮೇರ ವುನಃ ಬೋರ್ಡಿನ ಮಿಟಿಂಗು ನಡೆಸಲಾಯಿತು. ಆ ದರಲ್ಲೂ ಚುನಾಯಿತ ಮೆಂಬರುಗಳು ಬಜೆಟ್ಟನ್ನು ಮಂಜೂರು ಮಾಡಲು ತಿರಸ್ಕರಿಸಿದರು. ನಂತರ ಬೋರ್ಡು ಬರಕಾಸ್ತು ಮಾಡಲ್ಪಟ್ಟು, ಪುನಃ ತಿಂಗಳಲ್ಲಿ ಹೊಸ ಚುನಾವಣೆ ನಡೆಯಿತು. ಜೂನ್ ತಿಂಗಳಲ್ಲಿ ಹೊಸ ಅಧ್ಯಕ್ಷರ ಚುನಾವಣೆ ಆಯಿತು. ಜುಲೈ ತಿಂಗಳಲ್ಲಿ ಬಜೆಟ್ಟನ್ನು ಚರ್ಚಿಸಲು ಹೊಸ ಬೋರ್ಡಿನ ಸಭೆ ಸೇರಿತು. ಆಗ್ಗೆ ಪಾಸು ಮಾಡಿದ ಬಜೆಟ್ಟಿನಲ್ಲಿ ಆದಾಯಕ್ಕೆಂತ ವೆಚ್ಚ ಹೆಚ್ಚಾಯಿತೆಂದೂ, ಅದನ್ನು ಸರಿಪಡಿಸಬೇಕೆಂದೂ ಚೀಫ್ ಕಮಿಷನರು ಕೇಳಿಕೊಂಡ ಮೇರೆ ಈ ಮಿಟಿಂಗು ಸೇರಿದ್ದಾಗಿದೆ

ಜುಲೈಯಲ್ಲಿ ನಡೆದ ಹೊಸ ಬೋರ್ಡಿನ ಪ್ರಥಮ ಬಜೆಟ್ ಮಿಟಿಂಗಿನಲ್ಲಿ, ಕಳೆದ ಫೆಬ್ರವರಿ ತಿಂಗಳಲ್ಲಿ ಹಳೇ ಬೋರ್ಡಿನ ಮೆಂಬರಿಷಿಪ್ಪಟ್ಟದ್ದ ನಾಡಿಕೆಯ ಕೆಲಸಗಳ ಅಂದಾಜು ಬಜೆಟ್ಟನ್ನು ಸಸು ಕೂಡಿದ್ದಲ್ಲದ ಉಳಿಕೆಯ ಇದ್ದ ಸುಮಾರು 28,000 ರೂ ಪೈಕಿ ಸುಮಾರು 9,000 ರೂಪಾಯಿಯನ್ನು ಹೊಸ ಕೆಲಸಗಳಿಗೆ ಮಂಜೂರು ಮಾಡಿದರು ಈ ಬಜೆಟ್ಟು ಚೀಫ್ ಕಮಿಷನರವರಿಗೆ ತಲಪಿದ ನಂತರ ಸರ್ಕಾರದವರು ಬೋರ್ಡಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆ ಸುಮಾರು ರೂ 49,000 ದಲ್ಲಿ ರೂ. 7,000 ಕಡಿಮೆ ಮಾಡಲ್ಪಡುವ ಸಂಭವವಿರುವುದರಿಂದ, ಆ ಪ್ಪರ ಮಟ್ಟಿಗೆ ಬೋರ್ಡಿನ ಖರ್ಚನ್ನು ತೋತೆ ಮಾಡಲು ಒಂದು ಕಮಿಟಿಯನ್ನು ನೇಮಿಸಬೇಕೆಂದು ಚೀಫ್ ಕಮಿಷನರು ಬೋರ್ಡಿಗೆ ಬಿಡಿದು ತಿಳಿಸಿದರು. ಕೂಡಲೆ ಬೋರ್ಡಿನ ಒಂದು ಡೆಪ್ಯುಟೇಶನಿನವರು ಚೀಫ್ ಕಮಿಷನರವರನ್ನು ಭೇಟಿ ಮಾಡಿ, ಬೋರ್ಡಿನ ಆರ್ಥಿಕ ಸ್ಥಿತಿಯು ಬಹಳ ಹೀನಾವಸ್ಥೆಯಲ್ಲಿರುವದರಿಂದ ಸರ್ಕಾರದವರು ಕೊಡುವ ವಂತಿಗೆಯನ್ನು ಶಕಿಮೆ ಮಾಡಬಾರದೆಂದೂ, ಹಾಗೆ ಮಾಡಿದ್ದೇ ಆದರೆ ಜನರಿಗೆ ಬಹು ಉಪಯುಕ್ತವಾಗಿರುವ ಗ್ರಾನೂತರ ರಸ್ತೆ, ಆಸ್ಪತ್ರೆ, ಶಾಲೆ ಮೊದಲಾದವುಗಳನ್ನು ಮುಚ್ಚಬೇಕಾಗುವುದೆಂದೂ, ಗ್ರಾಮಾಂತರ ಜನಗಳ ಕೋರಿಕೆಗಳು ಎಷ್ಟೋ ಇದ್ದರೂ ಕೂಡ ಅವುಗಳಲ್ಲಿ ಬಹು ಸ್ವಲ್ಪವುಗಳಿಗೆ ಮಾತ್ರ ಈ ಸಾರಿ ಹಣ ಮಂಜೂರು ಮಾಡಿರುವುದರಿಂದ ಅವುಗಳನ್ನು ಪಜ ಮಾಡುವುದು ನ್ಯಾಯವಲ್ಲವೆಂದೂ ಮುಂತಾಗಿ ಅವರಿಗೆ ಹೇಳಿದರು ಹಣ ನ ಅಭಾವದಿಂದ ಸರ್ಕಾರದವರೇ ಸಿಟ್ಟಂದಿ ಯೋತೆ ಮಾಡುತ್ತಿರುವದರಿಂದ ಬೋರ್ಡಿಗೆ ಕೊಡುವ ಗ್ರಾಂಟನ್ನು ಕಡಿಮೆಮಾಡಬೇಕಾಗುವದೆಂದೂ, ಬೋರ್ಡಿನವರೂ ತಮ್ಮ ಖರ್ಚನ್ನು ತೋತೆ ಮಾಡುವ ಪ್ರಯತ್ನ ಮಾಡತಕ್ಕದಂತಲೂ ಚೀಫ್ ಕಮಿಷನರು ಜವಾಬ್ದಿತ್ತರು ಅನಂತರ ಚೀಫ್ ಕಮಿಷನರವರು—ಸರ್ಕಾರದವರು ಬೋರ್ಡಿಗೆ ಕೊಡುವ ವಾರ್ಷಿಕ ಗ್ರಾಂಟಿನಲ್ಲಿ ಎಳು ಸಾವಿರ ರೂ ಕಡಿಮೆ ಮಾಡುವ ಸಂಭವವಿರುವುದರಿಂದ ಬಜೆಟ್ಟಿನಲ್ಲಿ ತೋರಿಸಿರುವ 9,000 ರೂಪಾಯಿಯ ತೊಸ ಕೆಲಸಗಳನ್ನೆಲ್ಲಾ ಪಜನೂಡತಕ್ಕ ದ್ದಲ್ಲದೆ, ಬೋರ್ಡಿನ ಈ ವರ್ಷದ (ಹೊಸ ಕೆಲಸಗಳು ಸೇರಿ) ಖರ್ಚು ಆದಾಯ ನನ್ನು ಸುಮಾರು 18,000 ದಷ್ಟು ವಿರುವುದರಿಂದ ನಾಡಿಕೆಯ ವೆಚ್ಚದಲ್ಲಿಯೂ ಸಾಧ್ಯಸಾದಷ್ಟು ತೋತೆ ಮಾಡಬೇಕೆಂದು ತೋರ್ಡಿಗೆ ಪುನಹ ಪತ್ರ ಬರದರು

ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಪಾನಾನಿನ ಮೇರೆ ಖರ್ಚಾಯಿಸಿಗಾಗಿ ಇಡಬೇಕಾದ ಉಳಿಕೆ ಹೆಸ್ತು ಸಾವಿರ ರೂಗಾಗಿ. ಇದಲ್ಲದ 1927-28 ರಲ್ಲಿ ಬೋರ್ಡಿನಲ್ಲಿ ಸುಮಾರು ಅರವತ್ತು ಸ ಸಾವಿರ ರೂಗಾಯಿ ಉಳಿಕೆಯ ಇತ್ತು ಇದನ್ನು ಬೋರ್ಡಿನವರು ಹೊಸ ಶಾಲೆ, ಆಸ್ಪತ್ರೆ, ಗ್ರಾಮಾಂತರ ರಸ್ತೆ ಮೊದಲಾದವುಗಳನ್ನು ತೆರೆಯಲು ಉಪಯೋಗಿಸಿ, ಅವುಗಳ ನರ್ವಹಣೆಯ ಖರ್ಚನ್ನೂ ಆವರಿಂದಲೇ ನಡೆಸುತ್ತಾ ಬಂದರು ಈಗ ಆ ಉಳುವರಿಯು ತೀರುತ್ತಾ ಬಂದು ಈ ವರ್ಷದ ಅಂತ್ಯದಲ್ಲಿ ಆರು ಸಾವಿರವೇ ನಿಲ್ಲುವುದು ಜುಲೈ ತಿಂಗಳ ಮಿಟಿಂಗಿನಲ್ಲಿ ಪಾಸು ಮಾಡಿದ ಬಜೆಟ್ಟಿನ ಮೇಲೆ ಬೋರ್ಡಿನ ಈ ವರ್ಷದ ಉತ್ಪತ್ತಿ ರೂ. 1,62,000: ಖರ್ಚು ರೂ 1,80,000; ಆಂದರೆ ವೆಚ್ಚವು ಆದಾಯಕ್ಕಿಂತ 18,000 ಹೆಚ್ಚು. ಇದರಲ್ಲಿ ಹೊಸ ಕೆಲಸಗಳಿಗಾಗಿ ಇಡಲ್ಪಟ್ಟ ರೂ. 9,000 ವಜ ಮಾಡಿದರೂ ಕೂಡ ವಾಡಿಕೆಯ ಕೆಲಸಗಳ ವೆಚ್ಚವು ಉತ್ಪತ್ತಿಯನ್ನು ರೂ. 9,000 ದಷ್ಟು ವಿರುತ್ತದೆ. ಈ ರೀತಿ ಬೋರ್ಡಿನ ಕೆಲಸಗಳನ್ನು ಬರುವ ವರ್ಷದಿಂದ ನಡೆಸಲು ಸಾಧ್ಯವಾಗುವುದೇ ಇಲ್ಲ. ಇದರಿಂದಿಗೆ ಸರ್ಕಾರದವರು ಕೊಡುವ ಗ್ರಾಂಟಿನಲ್ಲಿ ರೂ. 7,000 ಕಡಿಮೆ ಮಾಡಿ ಬಿಟ್ಟರೆ ವಾಡಿಕೆಯ ಖರ್ಚು ಆದಾಯವನ್ನು ರೂ 16,000 ದಷ್ಟು ವಿರುವುದು ಇವನ್ನು ಸರಿಪಡಿಸುವ ಬಗೆ ಹೇಗೆ? ಇದೀಗ ಬೋರ್ಡಿನ ಮುಂದೆ ನಿಂತಿರುವ ಕರಿಣ ಸಮಸ್ಯೆಯಾಗಿದೆ.

ಮೊತ್ತವಾಗಿ ನಿಂತಿರುವ ಉಳುವರಿಯನ್ನು ಕಟ್ಟಡ ಕಟ್ಟಿಸುವುದು, ಬಾವಿ-ಕೆರೆ ತೋಡಿಸುವುದು, ನೇತುವೆ-ಕಟ್ಟೆ ಕಟ್ಟಿಸುವುದು ಮೊದಲಾದ ಒಮ್ಮೆ ಮಾತ್ರ ಖರ್ಚು ತಗಲುವಂಥ ಕೆಲಸಗಳಿಗೆ ಉಪಯೋಗಿಸಬೇಕಲ್ಲದೆ ವರ್ಷಂಪ್ರತಿ ಖರ್ಚು ತಗಲುವ ಶಾಲೆ, ಆಸ್ಪತ್ರೆ, ರಸ್ತೆ ಮೊದಲಾದವುಗಳನ್ನು ತೆರೆಯಲು ವಿನಿಯೋಗಿಸುವುದು ಬಜೆಟ್ಟಿನ ನರಿಯೊದ ತತ್ವವಲ್ಲ. ವರ್ಷಂಪ್ರತಿ ಖರ್ಚು ತಗಲುವ ಕೆಲಸಗಳಿಗೆ ವರ್ಷಂಪ್ರತಿ ಬರುವ ಉತ್ಪತ್ತಿ ಇರಬೇಕು. ಇಲ್ಲವಾದರೆ, ಮೊತ್ತವಾವ ಉಳುವರಿಯು ಸುಗಿದು ಹೋದ ಮೇಲೆ ಆ ಕೆಲಸಗಳನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ ಈ ತತ್ವವನ್ನು ಅರಿತು ಕೊಳ್ಳದೆಯೋ ಅಥವಾ ಅರಿತ್ತಿದ್ದರೂ ಮುಂದೆ ಬರುವ ಬೋರ್ಡಿನವರು ಹೇಗಾದರೂ ಸಾಡಿಕೊಳ್ಳಲಿ ಎಂಬ ಜೇಜವಾಬ್ದಾರಿಯ ಭಾವನೆಯಿಂದಲೋ, ಹಿಂದಿನ ಬೋರ್ಡಿನವರು ಹೀಗೆ ಮಾಡಿದ್ದು ವ್ಯಸನಕರ. ಬೋರ್ಡಿನವರು ಹೀಗೆ ಮಾಡಿದರೂ, ಅದನ್ನು ಚೀಫ್ ಕಮಿಷನರು ಹೇಗೆ ಅಂಗೀಕರಿಸಿದರೋ ತಿಳಿಯದು ಆರೂಯ ವರ್ಷದ ನೆಚ್ಚತ್ತ ಆದಾಯವನ್ನು ನಿಖರಕೂಡದೆಂದು ಈಗ ಹೇಳುವಂಥ ಸರ್ಕಾರದವರು ಈ ಮೂದಲು ಯಾಕ ಹೇಳಿಲಿಲ್ಲ? 1927-28 ರಿಂದಲೇ ಬೋರ್ಡಿನವರು ಈ ತತ್ವವನ್ನನುಸರಿಸಿ ನಡೆಯುವಂತೆ ಸರ್ಕಾರದವರು ನೂಡಿದ್ದರೆ ಈಗ ಇಂಥಾ ಬಿಕ್ಕಟ್ಟಿನ ಸರಿಸ್ಥಿತಿಗೆ ಬರುವಿತ್ತಿಲ್ಲ ಈ ಸೊಪಲಿಸಿ ಬೋರ್ಡಿನವರೂ ಹಾಗೂ ಸರ್ಕಾರದವರೂ ನೂನಿನ ತಪ್ಪಿಗಾಗಿ ಈಗಿನ ಬೋರ್ಡಿನವರು ಸ್ವಾಯತ್ತಿತ್ತ ಮಾಡಬೇಕಾಗಿ ಬಂದಿದೆ.

ಆಂಧಾ ವ್ರಾಯತ್ತಿತ್ತವಾದರೂ ಏನು? ಬಜೆಟ್ಟನ್ನು ಪರಿಗಟ್ಟಬೇಕಾದರೆ, ಈ ಮೊದಲು ಉಳಿವರಿಯ ಮೊಬಲಗಿನಿಂದ ನಡೆಸುತ್ತಾ ಬಂದ ಆಸ್ಪತ್ರೆ, ಶಾಲೆ, ರಸ್ತೆ ಮೊದಲಾದವುಗಳನ್ನು ಮುಚ್ಚಬೇಕಾಗುವುದು ಇಲ್ಲವೆ, ಜನರ ಮೇಲೆ ಹೊಸ ತೆರಿಗೆಯನ್ನು ಹಾಕಬೇಕಾಗುವುದು; ಅಥವಾ ಬಡ ಉಪಾಧ್ಯಾಯರುಗಳ ವಂತ್ತು ಇತರ ಉದ್ಯೋಗಸ್ಥರ ಸಂಬಳ ಕಡಿಮೆ ಮಾಡಬೇಕಾಗುವುದು ಇವುಗಳಲ್ಲಿ ಯಾವುದನ್ನು ಮಾಡಿದರೂ ಈಗ ಬೋರ್ಡಿನಲ್ಲಿ ಬಹುಮತದಲ್ಲಿರುವ ಕಾಂಗ್ರೆಸು ಪಕ್ಷದವರ ಮೇಲೆ ಆರೋಪಣೆಗಳ ಸುರಿಮಳೆಯಾಗದಿರದು. ಆವರೆ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಪಕ್ಷದವರು ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಎದೆಗುಂದದೆ ಮುಂದುವರಿಯಬೇಕಾದದ್ದು ಅವರ ಕರ್ತವ್ಯ. ದೇಶದ ಹಿತವ ದೃಷ್ಟಿಯಿಂದ ಜೆನ್ನಾಗಿ ಆಲೋಚಿಸಿ ಯಾವದು ಉತ್ತಮವಾಗಿ ತೋರುತ್ತೋ, ಅದನ್ನು ನಡಿಸಲು ಹಿಂಜರಿಯಬಾರದು.

ಮೊನ್ನೆ ನಡೆದ ಮಿಟಿಂಗಿನಲ್ಲಿ ಆಯಾಯ ಇಲಾಖೆಗಳ ಮೇಲಧಿಕಾರಿಗಳ ಸಹಕಾರದಿಂದ, ಕಾರ್ಯಸಾಧಕತ್ವಕ್ಕೂ, ಜನರ ಕೋರಿಕೆಗೂ ಕುಂದಕ ಉಂಟಾಗದಂತೆ ವಾಡಿಕೆಯ ಖರ್ಚಿನಲ್ಲಿ ವಿದ್ಯಾ ಇಲಾಖೆಯಲ್ಲಿ ರೂ 2,800, ಪಿ. ಡಬ್ಲ್ಯು. ಇಲಾಖೆಯಲ್ಲಿ ರೂ. 1,500, ಪಶು ವೈದ್ಯ ಇಲಾಖೆಯಲ್ಲಿ ರೂ. 1000 ತೋತೆ ಮಾಡುವಂತೆಯೂ, ಹೊಸ ಕೆಲಸಗಳಲ್ಲಿ ಅತಿ ಮುಖ್ಯವಾದವುಗಳನ್ನು ಮಾತ್ರ ಈ ವರ್ಷ ನಡಿಸಿ, ಉಳಿದವುಗಳನ್ನು ಬರುವ ವರ್ಷಕ್ಕೆ ಇಡುವಂತೆಯೂ ನಿಶ್ಚೈಸಿ ಸುಮಾರು ರೂ. 11,000 ಖರ್ಚು ಕಡಿಮೆ ಮಾಡುವಂತೆ ತೀರ್ಮಾನಿಸಿರುವರು. ಇಷ್ಟು ಮಾಡಿದರೂ ಕೂಡ ಈ ವರ್ಷ ವೆಚ್ಚವು ಆಯಾಯನ್ನು ರೂ 7,000 ದಷ್ಟು ಮಿರುವುದು. ಆದುದರಿಂದ ಬರುವ ವರ್ಷದ ಬಜೆಟ್ಟನ್ನು ಸರಿಗಟ್ಟಲು ಮಾತ್ರವಲ್ಲ; ಜನರ ಕೋರಿಕೆಗಳ ಪ್ರಕಾರ ದೇಶಕ್ಕೆ ಉಪಯುಕ್ತವಾದ ಹೊಸ ಕೆಲಸಗಳನ್ನು ನಡಿಸಲು ಬೇಕಾದ ಉತ್ಪತಿಯ ದಾರಿಯನ್ನು ಕಂಡು ಹಿಡಿಯಲಿಕ್ಕಾಗಿಯೂ, ಖರ್ಚನ್ನು ಯೋತೆ ಮಾಡುವ ವಿಧಾನವನ್ನು ಸೂಚಿಸಲಿಕ್ಕಾಗಿಯೂ ಬೋರ್ಡಿನವರ ಒಂದು ಕಮಿಟಿಯು ನೇಮಿಸಲ್ಪಟ್ಟದ್ದು ಯುಕ್ತವಾಗಿದ

ಬೋರ್ಡಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆಯನ್ನು ಕಡಿಮೆ ಮಾಡಬಾರದೆಂದು ಸರ್ಕಾರದವನ್ನು ಕೇಳಿಕೊಳ್ಳುವರೆಂದು ಸೂಂಗು ಸೂಂಜೂರಾಯಿತು. ಬೋರ್ಡಿನ ಇಂದಾ ಆರ್ಥಿಕ ಬಿಕ್ಕಟ್ಟಿನ ಸ್ಥಿತಿಯಲ್ಲಿ ಸರ್ಕಾರದವರು ಗ್ರಾಂಟನ್ನು ಕಡಿಮೆ ಮಾಡುವುದರಲ್ಲಿ ಅರ್ಥವಿಲ್ಲ ಬೋರ್ಡನ್ನು ಇಂಥಾ ಬಿಕ್ಕಟ್ಟಿನ ಸ್ಥಿತಿಗೆ ಇಳಿಸಲು ಮೇಲೆ ಹೇಳಿದಂತೆ ಸರ್ಕಾರದವರೂ ಜವಾಬ್ದಾರರಾಗಿರುವರು. ಅಲ್ಲದೆ ಬೇರೆ ಪ್ರಾಂತ್ಯಗಳ ಜಿಲ್ಲಾ ಬೋರ್ಡುಗಳ ಖರ್ಚುಗಳಲ್ಲಿ ಅರ್ಧಕ್ಕರ್ಧ ಸರ್ಕಾರದವರು ಸಂತೆಗೆ ರೂಪದಲ್ಲಿ ಕೊಡುತ್ತಿರುವರು. ಆದರೆ ಇಲ್ಲಿ ಮೂರರಲ್ಲಿ ಒಂದು ಭಾಗವಷ್ಟು ಕೂಡ ಕೊಡುತ್ತಿಲ್ಲ ಇತರ ಪ್ರಾಂತ್ಯಗಳಲ್ಲಿ ಮೋಟಾರು ವಾಹನಗಳ ತೆರಿಗೆಯಿಂದ ಸುಮಾರು ಅರ್ಧದಷ್ಟು ಜಿಲ್ಲಾ ಬೋರ್ಡಿಗೆ ಪಂತಿಗೆ ಕೊಡುತ್ತಿರುವರು. ಇಲ್ಲಿ ನಾಲ್ಕರಲ್ಲಿ ಒಂದೂಶೆವಸ್ಟೂ ಕೊಡುತ್ತಿಲ್ಲ ಅವಕಾರಣ ಸರ್ಕಾರದವರು ಇಲ್ಲಿಯ ಜಲ್ಲಾ ಬೋರ್ಡಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆಯನ್ನು ಹೆಚ್ಚಿಸಬೇಕಾದದ್ದು ತಿರ ಧರ್ಮವಾಗಿದ. ಆದರ ಬದಲು ಆರೋಗ್ಯಇಲಾಖೆಯಖರ್ಚಿಗಾಗಿ ಬೋರ್ಡಿನಿಂದ ರೂ 5,000 ವಂತಿಗೆ ತೆಗೆದು ಕೊಳ್ಳುತ್ತಿರುವುದೂ, (ಹೀಗೆ ಬೇರೆ ಎಲ್ಲಿಯೂ ನಡೆಯುತ್ತಿಲ್ಲ), ಬೋರ್ಡಿಗೆ ಇಷ್ಟರ ವರೆಗೆ ಕೊಡುತ್ತಿರುವ ವಂತಿಗೆಯನ್ನು ಕಡಿಮೆ ಮಾಡುವ ಆಲೋಚನೆಯಲ್ಲಿರುವುದೂ ಎಂದೂ ನ್ಯಾಯವಲ್ಲ. ಇನೆರಡು ವಿಚಾರಗಳಲ್ಲಿ ಸರ್ಕಾರದವರು ಜೆನ್ನಾಗಿ ಆಲೋಚಿಸಿ, ನ್ಯಾಯವಾದ ತೀರ್ಮಾನಕ್ಕೆ ಬಂದು ಇಲ್ಲಿಯ ಜಲ್ಲಾ ಬೋರ್ಡಿಗೆ ತಕ್ಕ ಸಹಾಯವನ್ನು ಮಾಡುವರಾಗಿ ನಂಬುತ್ತೇವೆ.

ಒಳದೇಶ.

ಚೀಫ್ ಕಮಿಷನರವರು ಈ ತಾ 2 ರಲ್ಲು ಬೆಂಗಳೂರಿಗೆ ವಾಪಸು ಹೋದರೆಂದು ತಿಳಿಯುತ್ತೇವೆ

ಈ ವಾರ ಕೆಲವು ದಿನ ಆಕಾಶವಲ್ಲಿ ಮೋಡ ಕವಿದುಕೊಂಡಿದ್ದು, ದೇಶದ ಕೆಲವು ಬಾಗಗಳಿಗೆ ಸುಳಿ ಬಿದ್ದಿರುವುದಾಗಿ ತಿಳಿಯಬರುತ್ತದೆ

ತಾರೀಕು 15—10—1938ರಲ್ಲಿ ಸೂಲಗಿತ್ತಿ ತರಬೇತು ಕ್ಲಾಸಿಗೆ ನಡೆದ ಚುನಾವಣೆಯಲ್ಲಿ ಮಿನೆಸ ಮೋಟೆಟೆ ಅಚ್ಚಮ್ಮ, ಪ್ರಸುತಿಯರಾದ ಸುಗಂಚಿಂಡ ಸೋಮಮ್ಮ, ಕೇಚಮಾಡ ಅಕ್ಕಮ್ಮ ಸುತ್ತು ಯಂ. ಸೀತಾ—ಇವರುಗಳು ಆಯಲ್ಪಟ್ಟಿರುವರೆಂದು ತಿಳಿಯುತ್ತೇವೆ

ಕಳೆದ ಬಿ ಎ ಪರೀಕ್ಷೆಯಲ್ಲಿ ಶ್ರೀಯುತರುಗಳಾದ ಯಂ ಯೆಸ್ ನಂಜಪ್ಪ ಸುಬ್ಬರಾವ್, ಬೊಳ್ಳೇರ ಸಿ ಸೋಮಣ್ಣ ಸುತ್ತು ಬೊಳ್ಳೇರ ಸಿ. ಅಪ್ಪಯ್ಯನವರು ಪೂರ್ತಿಯಾಗಿಯೂ, ಶ್ರೀ ಪಾಂಡಂಡ ಟಿ ಒನ್ನಪ್ಪಯವರು ಒಂಪತ್ತನೇ ಮತ್ತು ಎರಡನೇ ಭಾಗಗಳಲ್ಲಿಯೂ ತೇರ್ಗಡೆಯಾಗಿರುವರೆಂಬುದು ತಿಳಿಯಬರುತ್ತದೆ ಇವರಿಗೆ ನಮ್ಮ ಅಭಿನಂದನೆಗಳು

ಮಡಿಕೇರಿ

ಆಡ್ಜುಟೆಂಟ್ ಎಫ್ಟಯಿಸರಿ ಬೋರ್ಡಿನ ಮೀಟಿಂಗು ಈ ತಾ 1 ರಲ್ಲಿ ಇಲ್ಲಿ ಅಸಿಸ್ಟೆಂಟ್ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು

ಕಳೆದ ತಾ. 26 ರಲ್ಲಿ ಪ್ರಾರಂಭವಾದ ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗು ಇವೇ ತಾ 29ರ ಮಧ್ಯಾಹ್ನದವರೆಗೆ ನಡೆಯಿತು.

ಈ ವಾರ ಇಲ್ಲಿ ಯೂಲಕ್ಕಿ ಅಣಕ್ಕೆ 23 ರೂಪಾಯಿಯೂ, ಕಾಫಿ ಬಿಂಡಿಗೆ 114 ರೂಪಾಯಿಯೂ ಸುತ್ತು ಪಾರ್ಚ್‌ಮೆಂಟ್ ಕಾಫಿ ಹಿಂಡ್ರೆಡ್ ವೈಟಿಗೆ ರೂ 32 ಕ್ರಯವಿರುವದಾಗಿ ತಿಳಿಯುತ್ತೇವೆ

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ತಾರೀಕು 31-10-38 ಮತ್ತು 1-11-38 ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಬೋರ್ಡಿನ ಪ್ರಸಿಡೆಂಟರ ಅಧ್ಯಕ್ಷತೆಯಲ್ಲಿ ನಡೆಯಿತು

ಹಾಕಿ ಪಂಥದಾಟಕ್ಕಾಗಿ ಶ್ರೀ ಕೊಡಂದೇರ ಸಂಜಪ್ಪ ಬಿ ಎ ಯವರು ಒಂದು ಬೆಳ್ಳಿಯ ಕಪ್ಪನ್ನು ಕೊಟ್ಟಿರುವರೆಂದೂ, ಈ ಪಂಥದಾಟವು ಕೊಡಗು ಎಜ್ಜೆಟಿಕ್ ಸಂಸ್ಥೆಯ ಆಶ್ರಯದಲ್ಲಿ ಜನವರಿ ತಾ 15ರ ನಂತರ ನಡೆಯಬಹುದೆಂದೂ ಆ ಸಂಸ್ಥೆಯ ಕಾರ್ಯದರ್ಶಿಯವರು ತಿಳಿಸುತ್ತಾರೆ

ಸರಕಾರದಿಂದ ಕೊಡುವ ಡೀಸೆಂಟಿನ ಸಾಲಗಳಿಗೆ ಅರ್ಜಿ ಮಾಡುವ ಕಡೇ ತಾರೀಕು ಅಕ್ಟೋಬರ್ ಅಂತ್ಯದವರೆಗಿತ್ತು ಆದರೆ ಎಸ್ಟೋ ಜನರಿಗೆ ಅರ್ಜಿ ಫಾರಂಗಳು ಸಿಕ್ಕದೆ ಸಕಾಲದಲ್ಲಿ ಅರ್ಜಿ ಮಾಡಲು ತೊಂದರೆಯಾದ್ದರಿಂದ ಈ ಅವಧಿಯನ್ನು ನವಂಬರು 15ರ ವರೆಗೆ ಮುಂದರಿಸಿರುವರೆಲ್ಲದೆ ಈ ಅರ್ಜಿ ಫಾರಂಗಳು ಎಲ್ಲಾ ನಾಡು ಬಿಜೀರಿಗಳಲ್ಲಿ ಸಿಗುವವೆಂದೂ ಪ್ರಕಟಿಸಲಾಗಿದೆ.

ವರ್ತಮಾನ ಸಂಗ್ರಹ.

ಪೊಲೀಸ್ ಸುವರಿಂಟೆಂಡೆಂಟರ ಆಫೀಸಿನ ಹೆಡ್ ಗುಮಾಸ್ತರಾದ ಶ್ರೀ ಬಡುವಸಂಡ ಕುಶಲಪ್ಪನವರು ತಾರೀಕು 1-5-39 ರಿಂದ ತಮ್ಮ ಉದ್ಯೋಗದಿಂದ ನಿವೃತ್ತರಾಗುವ ಕಾರಣ ಈ ತಾ 1ರಿಂದ ಆರು ತಿಂಗಳು ರಜೆಯಲ್ಲಿ ಹೋಗಿರುವರೆಂದೂ, ಕಳೆದ ತಾ 31 ರಲ್ಲು ಇವರಿಗೆ ಇವರ ಸಹೋದ್ಯೋಗಿಗಳು ಸುತ್ತು ಸ್ನೇಹಕೂಟ ಒಂದು ಸತ್ಕಾರ ಕೂಟ ಏರ್ಪಡಿಸಿದ್ದರೆಂತಲೂ, ಎ ಲಿಯೊಪ ಈ ಸ್ಥಳವನ್ನು ಬರುವ ನೊರ್ಬ ತಿಂಗಳ ವರೆಗೆ ಪರ್ತಿಸುವುದಿಲ್ಲವೆಂದೂ ವರ್ತಮಾನ

ವೀರಾಜಪೇಟೆ.

ಈ ವಾರ ಇಲ್ಲಿ ಭತ್ತ ಗಾವಣಿಗೆ ರೂ 16ರ ವರೆಗೆ ಕ್ರಯವಾಗುತ್ತೆಂದು ತಿಳಿಯಬರುತ್ತದೆ

ನಾಂಗಾಲ ಗ್ರಾಮದ ಮೆ ಕಂಬಿರಂಡ ಗಣಪತ್ತಿಯವರು ಕಳೆದ ತಾ 27 ರಲ್ಲಿ ವೀರಾಜಪೇಟೆ ಆಸ್ಪತ್ರೆಯಲ್ಲಿ ಎಂ ಡಿ ಆದೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ

ಹುದಿಕೇರಿ

ತಾ 31-10-38 ರಲ್ಲಿ ಶ್ರೀ ಇಟ್ಟೇರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಮೀಟಿಂಗು ಇಲ್ಲಿ ನೆರೆದು, ಕೊಡಗು ದೇಶದ ಪಬೇಲರುಗಳ ಸಂಬಳದ ಪೂತೆ ಬಗ್ಗೆ ಗಜೆಟಿನಲ್ಲಿ ಪ್ರಕಟವಾದ ಇತ್ತೀಹಾರುನಾಮೆಯನ್ನು ವಿರೋಧಿಸಿ ಅದನ್ನು ರದ್ದು ಮಾಡಬೇಕೆಂದು ಜೀಫ್ ಕಮಿಷನರನ್ನು ಕೇಳಿಕೊಳ್ಳಲು ರಾಜ್ಯ ಮಂಜೂರು ಮಾಡಲಾಯಿತು

ಭಾಗಮಂಡ್ಲ.

ಈ ತಾ 7 ರಲ್ಲಿ ಇಲ್ಲಿಯ ಶ್ರೀ ಭಾಗಂಡೇಶ್ವರ ದೇವಸ್ಥಾನದಲ್ಲಿ ಟಂಪಲ್ ಕಮಿಟಿ ಸ್ಪೆಸಿಡೆಂಟರಾದ ಶ್ರೀ ಕೆ ಕಾಳಪ್ಪನವರ ಅಧ್ಯಕ್ಷತೆಯಲ್ಲಿ 'ತ್ರೀಮೂಲ ಕಾವೇರಿ ಸನಾತನ ಧರ್ಮ ಸಾರ ಶಿಲಾ' ಎಂಬ ಸಂಸ್ಥೆಯನ್ನು ತೆರೆಯುವ ಉದ್ದಿಶ್ಯ ಒಂದು ಸಾರ್ವಜನಿಕ ಮೀಟಿಂಗು ಸೇರುವದೆಂದೂ, ಎಲ್ಲರೂ ಭಾಗಿಗಳಾಗಬಹುದೆಂದೂ ತಿಳಿಸುತ್ತಾರೆ

ಫ್ರೈಜರ್‌ಪೇಟೆ

ಇಲ್ಲಿಯ ಸಿದ್ಧವಿನಾಯಕ ದೇವಾಲಯದ ರಥೋತ್ಸವವು ತಾ 9 ರಿಂದ 14ರ ವರೆಗೆ ನಡೆಯುವದಂದೂ, ತಾರೀಕು 11 ರಿಂದ 14ರ ವರೆಗೆ ನಸಗಳ ಪ್ರದರ್ಶನ ನಡೆಯುವದಂದೂ, ಎಲ್ಲರಿಗೂ ಆಹ್ವಾನವಿದೆಯೆಂದೂ ತೀರ್ಮಾನಿಸಲಾಗಿದೆ

ಗಜೆಟ್ ವರ್ತಮಾನ.

ಕಳೆದ ತಿಂಗಳಲ್ಲಿ ಕೊಡಗಿನಲ್ಲಿ 361 ಜನನಗಳೂ, 338 ಮರಣಗಳೂ ಸಂಭವಿಸಿದವಂದು ಪ್ರಕಟವಾಗಿದೆ

ವೈಸಾಯಗಾರರ ಸಾಲ ನಿವಾರಣೆಗಾಗಿ ಕೊಡುವ ಸರ್ಕಾರಿ ನಿಲಪ ಅರ್ಜಿಗಳನ್ನು ವಿಚಾರಿಸುವ ಹಕ್ಕು ಅಲ್ಲಲ್ಲಿಯ ಸುಭೇದಾರರಿಗೂ, ಪಾರುಪತ್ಯಗಾರರಿಗೂ ಕೊಡಲಾಗಿದೆ.

ಕೊಡಗು ಬ್ಯಾಂಡ್ ಮತ್ತು ರಿವನ್ನು ರಿಗ್ಯುರೇಶನಿನ ನಿಬಂದನೆಗಳಿಗೆ ಪಲವು ಕರಡು ತಿದ್ದುಪಡಿಗಳು ಈ ತಿಂಗಳ ಗಜೆಟಿನಲ್ಲಿ ಪ್ರಕಟವಾಗಿವೆ ಆಪ್ತರಿಗೆ ಆ ಕ್ಲೈಸಣ ಯಾ ಸಲಹೆಗಳನ್ನು 2 ತಿಂಗಳೊಳಗೆ ಜೀಫ್ ಕಮಿಷನರರಿಗೆ ಕಳುಹಿಸಿದರೆ ಆಲೋಚಿಸಲಾಗುವದೆಂದೂ ಸೂಚಿಸಲಾಗಿದೆ

1939 ನೇ ಏಪ್ರಿಲ್ 1 ರಿಂದ ಕೊಡಗಿನ ಶಾಲೆಗಳಲ್ಲಿ ಈ ಕೆಳಗಿನ ಮೇರ್ಕಾಲ್ ಸೀಜು ಹೆಚ್ಚಿಸಲ್ಪಡುವದೆಂದೂ—ಹೈಸ್ಕೂಲ ಗಳಲ್ಲಿ 1, 3 ಮತ್ತು 6 ನೇ ಫಾರ್ಮುಗಳಿಗೆ ಪರ್ಷಕ್ಕೆ ರೂ 31, 1, 2, ಮತ್ತು 3 ನೇ ಫಾರ್ಮುಗಳಿಗೆ-ವರ್ಷಕ್ಕೆ ರೂ 22, ಹಯರ್ ಎಲಿಮೆಂಟರಿ ಶಾಲೆಗಳಲ್ಲಿ-8 ನೇ ಸ್ಟಾಂಡರ್ಡಿಗೆ-ವರ್ಷಕ್ಕೆ ರೂ 10, 6 ಮತ್ತು 7 ನೇ ಸ್ಟಾಂಡರ್ಡುಗಳಿಗೆ-ವರ್ಷಕ್ಕೆ ರೂ 6 ಹೊಸದಾಗಿ ಸೇರುವ ವಿದ್ಯಾರ್ಥಿಗಳಿಗೆ ಮೇಲಿನ ಫಾರ್ಮುಗಳಿಗೆ ಪ್ರವೇಶ ಫೀಸು ರೂ 2, ಕೆಳಗಿನ ಫಾರ್ಮುಗಳಿಗೆ ರೂ 1 8 0

ಹಿಂದೂದೇಶ.

ಕುಂಭಕೋಣ ಗ್ರಾಮದಲ್ಲಿ ಮನೆ ಇಲ್ಲದ ಹಾಹಾಕಾರವನ್ನು ನಿವ್ಯವಗದವರು ಕಲವರು ಕಾನೇರಿಯಲ್ಲಿ ಸೂಟಿಟ್ಟವರ ನೀರಲ್ಲಿ ನಿಂತು, ಮಲಿ ಬರುವಂತೆ ಸರಣಾಜದಕ್ಕೆ ಆರಂಭಿಸಿದ್ದಾರೆ

ಹೈದರಾಬಾದು ಸಂಸ್ಥಾನದಲ್ಲಿ ಆಲ್ ಇಂಡಿಯ ಸ್ಟೇಟ್ ಕಾಂಗ್ರೆಸಿನ ವ್ಯವಸ್ಥಾಪಕ ಸರ್ವಾಧಿಕಾರಿಗಳ ಪಸ್ತಾವನೆ ರೂಪಂದ ತೀರ್ಮಾನ ಕೈಬಾಗಿ ತಲ್ಲಪ 19 ಮಂದಿ ಆರ್ಯಸಮಾಜದವರನ್ನು ಬಿಡುಗಡೆಯೂ ಮಾಡಿದೆ

ಮಂಡಿತ ಜವಾಹರಲಾಲ್ ನೆಹರುಗಳು ಪೂರ್ವಿಯೊಂದಿಗೆ ಸ್ಯಾಮಿಸ್ ಸೊಗಸಾಗಿ ಕೈಲೋ ನಗರಕ್ಕೆ ವಿಮಾನದ ಮೂಲಕ ಹೊರಟರು ಇವರು ಎಷ್ಟು ದಿನ ಮಿಸ್ರದಲ್ಲಿ ಸಮಾಜಸಾರ ಅತಿಥಿಗಳಾಗಿರುವರು

ಕಲ್ಕತ್ತ ನಗರನಲ್ಲಿಯ ಕೈಕೆಳಗಿದ್ದ ಮುತ್ತು ದಿಕ್ಕಿಂಭಿಸರಾದ ಪೆಪಿಸ್ಟ್ಯೂಗ್ಯುನ್ನು ನಗರ ಸಭೆಯ ಕೆಲಸಕ್ಕೆ ಪುನಹ ತೆಗೆದು ಕೊಳ್ಳಬೇಕಾಗಿಯೂ, ಅವರಿಗೆ ಏಂದ ಸಂಬಳವನ್ನು ತೆರಬೇಕಾಗಿಯೂ ನಿರ್ಧಾರವಾಯಿತು

ಮುಂಬರುವ ಮಾರ್ಚ್ ತಿಂಗಳಲ್ಲಿ ಮಹಾತ್ಮ ಗಾಂಧಿಯವರು ಗಡಿನಾಡಿಗೆ ಇನ್ನೊಂದಾವರ್ತಿ ಭೇಟಿ ಕೊಡುವರೆಂದೂ, ಆ ಸಂಬರ್ಭದಲ್ಲಿ ಕೆಂಪುಂಗಿಗಳ ತರಬೇತಿಯ ಕೇಂದ್ರವನ್ನು ಉದ್ಘಾಟನ ಮಾಡುವರೆಂದೂ ತಿಳಿಯಬರುತ್ತದೆ

ಗವರ್ನರಾಯಿಲ ಡಿ ಎರಿಕ್ಸೈನ್ ರವರು ಮಧುರಾ ಜಿಲ್ಲೆಯ ತಮ್ಮ ಪ್ರವಾಸ ಕಾಲದಲ್ಲಿ ಕಾಂಗ್ರೆಸ್ ಮಂತ್ರಿ ವರ್ಗದ ಕೆಲಸ ಕಾರ್ಯಗಳನ್ನೂ, ಇವರ ಅತ್ಯುನ್ನತ ಕರ್ತವ್ಯ ವೈಖರಿಯನ್ನೂ ಕೊಂಡಾಡಿ ತಾವು ತಮ್ಮ ಪ್ರೋತ್ಸಾಹ ಮತ್ತು ಸಹಕಾರವನ್ನು ಅವರಿಗೆ ಕೊಟ್ಟಿದ್ದೇನೆ ಎಂದು ನುಡಿದರು.

ಸಂಯುಕ್ತ ಪ್ರಾಂತದಲ್ಲಿ ಗ್ರಾಮೋಫೋನ್ ವ್ಯಾಪಾರವನ್ನು ಆಚರಿಸುವ ಕ್ರಮವನ್ನು ಟ್ಯಾರಿಫ್ ಬೋರ್ಡಿನವರು ಈ ವಾರದಲ್ಲಿ ಉದ್ಯೋಗ ಸ್ಥರೂ, ಉದ್ಯೋಗಸ್ಥರಲ್ಲದವರೂ, ಸಹ ಗ್ರಾಮೋಫೋನಿಗೆ ಹೋಗಿ ಗ್ರಾಮೋಫೋನ್ ವ್ಯಾಪಾರ ಕೆಲಸ ಕೈಕೊಳ್ಳಬೇಕು ಈ ವಾರವು ತಾರೀಕು 1ರಿಂದ ಪ್ರಾರಂಭವಾಗಿದೆಯೆಂದೂ, ಪಟ್ಟಣವಾಸಿಗಳು ಗ್ರಾಮೋಫೋನಿಗಳ ಕಡೆ ಗಮನ ಹರಿಸುವರೆಂದೂ, ಗ್ರಾಮವಾಸಿಗಳೂ ಅವರನ್ನು ಹಿಂಬಾಲಿಸಿ ಕೆಲಸ ಮಾಡುತ್ತಿರುವರೆಂದೂ ತಿಳಿಯಬರುತ್ತೆ

ಕಾಂಗ್ರೆಸ್ ಸಚಿವರುಗಳು ಚೀನಾ ದೇಶದ ಯುದ್ಧ ರಂಗಕ್ಕೆ ವೈದ್ಯ ಸಮೂಹವನ್ನು ಹೇಗೆ ಕಳುಹಿಸಿಕೊಟ್ಟಿರುವರೋ ಅದರಂತೆಯೇ ಹೈದರಾಬಾದ್ ಸಂಸ್ಥಾನದ ಸತ್ಯಾಗ್ರಹ ಸಂಘಟನೆಯವರು ಅಲ್ಲಿ ಯುದ್ಧರಂಗಕ್ಕೆ ವೈದ್ಯರುಗಳನ್ನು ಕಳುಹಿಸಬೇಕೆಂದು ನಿರ್ಣಯಿಸಿರುತ್ತಾರೆ ಅದಕ್ಕಾಗಿ ಚೀನಾ ದೇಶದ ಪ್ರಧಾನ ರಾಜಕೀಯ ಡಿಪಾರ್ಟಮೆಂಟಿನ ಸಕ್ರೆಟ್ರಿಯವರಿಗೆ ಸದಿಸುತ್ತಿದ್ದಾರೆ ಈ ವೈದ್ಯ ಪರಿಜಿಗರು ಚೀನಾ ಯುದ್ಧರಂಗದಲ್ಲಿ ಆವಶ್ಯಕತೆಗೆ ಗುರಿಯಾದವರಿಗೆ ಉಪಯೋಗವಾಗುವ ವೈದ್ಯದಲ್ಲಿ ರೀತ್ಯಾ ಚಿಕಿತ್ಸೆ ನಡಾಯನವರಾಗಿದ್ದಾರೆ

ಈ ವರ್ಷದ ಕಾಂಗ್ರೆಸ್ ಮಹಾಧಿವೇಶನವನ್ನು ಮಹಾಕೋಪಲದ ತ್ರಿಪುರಿಯಲ್ಲಿ ನಡೆಯುವುದಕ್ಕೆ ಇದರ ನಿಪ್ತೆಗಳಿಗಾಗಿ ತಾ 1ರಿಂದ ಚಂದಾ ಹಣ ಎತ್ತಲು ಪ್ರಾರಂಭಿಸಿರುವರು ತಾ. 10ರಿಂದ ಕಾಂಗ್ರೆಸ್ ವಾರ ಎಂಬವನ್ನು ಆಚರಿಸುವರು ಈ ಸಂದರ್ಭದಲ್ಲಿ ಲಕ್ಷೋಪಲಕ್ಷ ರೂ ಗಳು ಸಂಗ್ರಹವಾಗಬಹುದೆಂದೂ, ಪ್ರತಿ ಅಧಿವೇಶನವನ್ನು ಬ್ರಿಟಿಷರ ನೆರಲ್ಲಿ ಅಥವಾ ಸೂಜ್ ಕಾಲ್ವೆಯಲ್ಲಿ ನಡೆಸಬೆಕೆಂದೂ ಮದ್ರಾಸು ಕಾಂಗ್ರೆಸ್ ಕಮಿಟಿಯವರು ನಿರ್ಣಯಿಸಿದೆಯೆಂದೂ ತಿಳಿದುಬಂದಿರುತ್ತದೆ.

ವಿದೇಶ

ಜರ್ಮನಿಯು ಹಿಂದೆ ಕಾಲನಿಗಳನ್ನು ಕೇಳಿಕೆ ಇದ್ದು ಎಂದು, ಫ್ಯೂಹರ್‌ರವರು ಜರ್ಮನಿಯ ಕಡೆ ನಿಂತಿದ್ದಾರೆ ಈ ಚರ್ಚೆಗಳಿಲ್ಲಿನ ಸಮಾಜಮೂಹ ಎತ್ತ ಕಡೆ ಎಂಬುದು ಸ್ಪಷ್ಟವಾಗಿಲ್ಲವಾದರೂ, ಯಿಲ್ಲಿ ಏನೂ ಒಂದು ಗಾಳಿಗಂಬು ನಡೆಯುವಂತೆ ತೋರುತ್ತದೆ ಈ ಮಧ್ಯ, ತ್ಯಾಗಿಗಳು, ಬ್ರಿಟಿಷರ ಕೈಕಳಗೇ ಉಳಿಯಬೇಕೆಂದು ಅಲ್ಲಿನ ಯೂರೋಸಿಯರ ಚಳವಳಿಪಟ್ಟಿದೆ

ಪೂರ್ವ ದೇಶದಲ್ಲಿ ಬ್ರಿಟಿಷರಿಗಿನ್ನು ಪ್ರಾಮುಖ್ಯತೆ ಇಲ್ಲ! ಹೀಗೆಂದು ಜಪಾನಿನ ಕಡಲು ರಾಯಭಾರಿಗಳೂಬ್ಬರು ಹೇಳುತ್ತಿದ್ದಾರೆ '10 ವರ್ಷಗಳಲ್ಲಿ ಚೀನದ ಆಡಳಿತೆಯ ವ್ಯವಸ್ಥೆಯನ್ನು, ಅಮೇರಿಕದ ರಾಜ್ಯಾಧಾರ ಪದ್ಧತಿಯಂತೆ ಏರ್ಪಡಿಸಲಾಗುತ್ತದೆ ಪಾಶ್ಚಾತ್ಯ ರಾಷ್ಟ್ರಗಳೊಡನೆ, ಈ ವಿಷಯದ ವಿಚಾರವನ್ನು ಹಂಚಿಕೊಂಡು ಫಲಾನ್ನು ಕರೂರಿಲ್ಲ' ಎಂದೂ ಅವರೇ ಪ್ರಕಟಿಸಿರುತ್ತಾರೆ ಸಮ್ಯ, ಜಪಾನೀಯರು ಚೀನದಲ್ಲಿ ಅಕ್ರಮಿಸಿರುವ ಪ್ರದೇಶವು, ಜಪಾನ್ ಸಾಮ್ರಾಜ್ಯದ ಎರಡರಷ್ಟು ಎಂದು ಪ್ರಕಟವಾಗಿದೆ

ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಕಳೆದ ಆಕ್ಟೋಬರು ತಾ. 31ರಲ್ಲಿ ಬೆಳಿಗ್ಗೆ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ಪ್ರಾರಂಭವಾಯಿತು. ಎಲ್ಲಾ ಮೆಂಬರ್ರುಗಳೂ ಹಾಜರಿದ್ದರು. ಬೋರ್ಡಿನ ಪ್ರೆಸಿಡೆಂಟರಾದ ಶ್ರೀಯುತ ಪಿ. ಐ ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ಮೀಟಿಂಗು ಸುರುವಾಗುವುದಕ್ಕೆ ಮೊದಲು ಎಲ್ಲರೂ ಎದ್ದುನಿಂತು 'ವಂದೇ ಮಾತರಂ' ರಾಷ್ಟ್ರೀಯ ಗೀತೆಯು ಹಾಡಲ್ಪಟ್ಟಿತು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. 1938-39ರ ಬಡ್ಜೆಟ್ಟಿನಲ್ಲಿ ಖರ್ಚು ಆದಾಯಕ್ಕಿಂತ 18,000 ರೂ. ಹೆಚ್ಚಾಗಿರುವುದರಿಂದಲೂ, ಸರ್ಕಾರದವರು 7,000 ರೂ. ಗಂತಿಗೆ ಕಡಿಮೆ ಮಾಡುವ ಸಂಭವ ವಿರುವುದರಿಂದಲೂ ಆದರಲ್ಲಿರುವ ಹೊಸ ಕೆಲಸಗಳನ್ನೆಲ್ಲಾ ಬಾಕಿ ಮಾಡಿ, ವಾಡಿಕೆಯ ಖರ್ಚಿನಲ್ಲಿಯೂ ಸಾಧ್ಯವಾದಷ್ಟು ಜೋಕೆ ಮಾಡಬೇಕೆಂದು ಚೀಫ್ ಕಮಿಶನರು ಬರೆದ ಪತ್ರವನ್ನು ಓದಲಾಯಿತು

ಬಡ್ಜೆಟ್ಟನ್ನು ಪುನಹ ಆಲೋಚಿಸಿ, ಕಾರ್ಯ ಸಾಧಕತ್ವಕ್ಕೆ ಕುಂದಕ ಬಾರದಂತೆ ವಿದ್ಯಾ ಇಲಾಖೆಯಲ್ಲಿ ರೂ. 2,800 ಪಿ. ಡಬ್ಲ್ಯು. ಇಲಾಖೆಯಲ್ಲಿ ರೂ. 1,500; ವೈದ್ಯ ಇಲಾಖೆಯಲ್ಲಿ 1,000 ಮತ್ತು ಮೂರ್ನಾಡು ಪಂಚಾಯಿತಿಗೆ ವಜವಾದ ಕಾರಣ ಅವಕ್ಕೆ ಕೊಡುವ ರೂ. 250 ಖರ್ಚು ಕಡಿಮೆ ಮಾಡಲ್ಪಟ್ಟದ್ದಲ್ಲದೆ ಕಳೆದ ಸಾರಿ ಮಂಜೂರು ಮಾಡಿದ್ದ 9,000 ರೂ.ಯ ಹೊಸ ಕೆಲಸಗಳಲ್ಲಿ ಅತ್ಯಪಶ್ಯವಾದವುಗಳನ್ನು ಮಾತ್ರ ಈ ವರ್ಷ ನಡಿಸುವಂತೆ ನಿಶ್ಚಯಿಸಿ, ಆ ಮೊಬಲಗಿನಲ್ಲಿ ರೂ. 6,000 ಕಡಿಮೆ ಮಾಡಲು ತೀರ್ಮಾನಿಸಿ ಒಟ್ಟಾರೆ ರೂ. 11,500 ಖರ್ಚು ಜೋಕೆ ಮಾಡಲಾಯಿತು ಇದರಲ್ಲಿ ಕಳೆದ ಸಾರಿ ನಿಶ್ಚಯಿಸಿದ ಶಾಲೆಗಳಿಗೆ ಕೊಡುವ ಹೊಸ ಗ್ರ್ಯಾಂಟುಗಳು, ಹೊಸ ಆಸ್ಪತ್ರೆಗಳು ಹೆಚ್ಚಿನ ಗ್ರ್ಯಾಮಾಂತರ ರಸ್ತೆಗಳು ಮಂಜೂರು ಮಾಡಲ್ಪಟ್ಟವು.

3. ಬೋರ್ಡಿನ ಈಗಿನ ಆರ್ಥಿಕ ಹೀನ ಸ್ಥಿತಿಯ ಕಾರಣ ಸರ್ಕಾರದವರು ಬೋರ್ಡಿಗೆ ಕೊಡುವ ಗ್ರ್ಯಾಂಟನ್ನು ಸ್ವಲ್ಪವೂ ಕಡಿಮೆ ಮಾಡಬಾರದೆಂದು ಚೀಫ್ ಕಮಿಶನರನ್ನು ಬೋರ್ಡು ಕೇಳಿಕೊಳ್ಳುತ್ತದೆ' ಎಂದು ಮೆ. ರಾ.ಮಶೆಟ್ಟಿಯವರು ಸೂಚಿಸಿದ ರಠಾವನ್ನು ಮೆ. ಎಂ. ಎಸ್. ಸೋಮಯ್ಯನವರು ಮತ್ತು ಸಿ. ಯಂ. ಪೂಣಚ್ಚನವರು ಅನುಮೋದಿಸಿದರು. ರಠಾವಿಗೆ ಜುನಾಯಿತ ಮೆಂಬರುಗಳೆಲ್ಲರೂ ಪರವಾಗಿ ಓಟು ಮಾಡಿ, ಯಾರೂ ವಿರೋಧವಿಲ್ಲದ್ದರಿಂದ ಠರಾವು ಪಾಸಾಯಿತು.

4. 1939-40ನೇ ವರ್ಷದ ಬಡ್ಜೆಟ್ ಮೀಟಿಂಗಿಗೆ ಮುಂಚಿತವಾಗಿ-ಬೋರ್ಡಿನ ಆದಾಯವನ್ನು ಹೆಚ್ಚಿಸುವ ವಿಧಾನ ಮತ್ತು ಖರ್ಚು ಜೋತೆ ಮಾಡುವ ರೀತಿಗಳನ್ನು ಕಂಡು ಹಿಡಿದು ರಿಪೋರ್ಟು ಮಾಡಲು ಏಳು ಮೆಂಬರುಗಳ ಒಂದು ಕಮಿಟಿ ನೇಮಿಸುವಂತೆ ತೀರ್ಮಾನಿಸಲಾಯಿತು.

ಓಟಿನ ಮೂಲಕ್ಕೆ ತಿ ಕೆಳಗಿನ ಮಹಾನೀಯರು ಕಮಿಟಿ ಮೆಂಬರುಗಳಾಗಿ ಆರಿ ಸಲ್ಪಟ್ಟರು:-(1) ಬೋರ್ಡಿನ ಅಧ್ಯಕ್ಷರು (ಕನ್ವೀನರ್), (2) ಬೋರ್ಡಿನ ಉಪಾಧ್ಯಕ್ಷರು, (3) ಅಸಿಸ್ಟೆಂಟ್ ಕಮಿಶನರು, (4) ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರು, (5) ಕಾಕನೂಡ ಗಣಪತಿಯವರು, (6) ಚೆಪ್ಪುಡೀರ ಪೂಣಚ್ಚನವರು, ಮತ್ತು (7) ಹೆಚ್. ಎಂ. ಪುಟ್ಟಣ್ಣನವರು.

5. (1) ಸಂಪಾಜೆ ಸುಂಕವಕಟ್ಟೆ ಕಂಟ್ರಾಕ್ಟರರು (ರೂ. 58), (2) ಸಿದ್ದಾಪುರ ಮೂರ್ಕೆಟ್ ಕಂಟ್ರಾಕ್ಟರರು (ರೂ. 301) (3) ಆನೆಚೌಕೂರು ಟೋಲ್‌ಗೇಟ್ ಕಂಟ್ರಾಕ್ಟರರು (ರೂ. 2,450), (4) ಗದ್ದಿಗೆ ಟೋಲ್‌ಗೇಟ್ ಕಂಟ್ರಾಕ್ಟರರು (ರೂ 685), (5) ಶನಿವಾರಸಂತೆ ಮೂರ್ಕೆಟ್ ಕಂಟ್ರಾಕ್ಟರರು (ರೂ. 50), (6) ನಿಲುವಾಗಲು ಟೋಲ್‌ಗೇಟ್ ಕಂಟ್ರಾಕ್ಟರರು (ರೂ. 100), (7) ಫ್ರೇಜರ್‌ಪೇಟೆ ಟೋಲ್‌ಗೇಟ್ ಕಂಟ್ರಾಕ್ಟರರು (ರೂ. 410), (8) ರಾಂಪುರ ಮೂರ್ಕೆಟ್ ಕಂಟ್ರಾಕರರು (ರೂ. 30) (9) ಶಿರಂಗಾಲ ಟೋಲ್‌ಗೇಟ್ ಕಂಟ್ರಾಕ್ಟರರು (ರೂ. 800), (10) ಹೆಬ್ಬುಲುಸ ಟೋಲ್‌ಗೇಟ್ ಕಂಟ್ರಾಕ್ಟರರು (ರೂ 42), (11) ಮೂವುಕೂಟ ಟೋಲ್‌ಗೇಟ್ ಕಂಟ್ರಾಕ್ಟರರು (ರೂ. 575), (12) ಮೂರ್ನಾಡು ಮೂರ್ಕೆಟ್ ಕಂಟ್ರಾಕ್ಟರರು (ರೂ. 50), (13) ಗೋಣಿಕೊಪ್ಪಲು ಮೂರ್ಕೆಟ್ ಕಂಟ್ರಾಕ್ಟರರು (ರೂ. 200), (14) ಸುಂಟಿಕೊಪ್ಪ ಮೂರ್ಕೆಟ್ ಕಂಟ್ರಾಕ್ಟರರು (ರೂ. 169), ಇವರುಗಳು ಸ್ವಲ್ಪಗುವಗೈರೆಕಾರಣಗಳಿಂದ ತಮಗೆ ನಷ್ಟ ಉಂಟಾದ್ದರಿಂದ ಮೇಲೆ ಕಾಣಿಸಿದ ಮೊಬಲಗುಗಳನ್ನು ಮಾಫಿ ಬಿಡಬೇಕೆಂದು ಬರೆ ಕೊಂಡ ಅರ್ಜಿಗಳು ಪ್ರತ್ಯೇಕವಾಗಿ ಓದಲ್ಪಟ್ಟವು. ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಚರ್ಚಿಸಿ ಯಾರಿಗೂ ಮಾಫಿ ಬಿಡಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಲಾಯಿತು.

6. ಡಿ. ಬೋರ್ಡಿನ ನೌಕರರಿಗೂ ಸರ್ಕಾರಿ ನೌಕರರ ನಡತೆ ಮತ್ತು ಶಿಸ್ತಿನ ನಿಬಂಧನೆಗಳನ್ನೇ ಅನುಸರಿಸುವಂತೆ ಕಮಿಷನರು ಬರೆದ ಸಿಫಾರಸು ಪತ್ರವನ್ನು ಓದಿ ಆಪರ ಸಲಹೆಯನ್ನು ಒಪ್ಪಲಾಯಿತು.

7. ಚಿಕ್ಕ ಪೇಟೆಗಳು ಮತ್ತು ಗ್ರಾಮಾಂತರಗಳಲ್ಲಿ ಶುಚಿತ್ವವನ್ನು ಕುರಿತು ಸಿವಿಲ್ ಸರ್ಜನರು ಕಳುಹಿಸಿದ ಕೆಲವು ನಿಬಂಧನೆಗಳನ್ನು ಓದಿ ಆವ್ಯಗಳನ್ನು ಅಜಮಾಯಿಸಲು ಬೋರ್ಡಿನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸಿವಿಲ್ ಸರ್ಜನರಿಂದ ಕೂಡಿದ ಒಂದು ಕಮಿಟಿಯನ್ನು ನೇಮಕ ಮಾಡಲಾಯಿತು.

8. ಪೆಬ್ಬುಲುಸೆ ಟೋಲ್ ಗೇಟನ್ನು ವಜಾ ಮಾಡುವ ವಿಷಯ ಇನ್ನೊಂದು ಮೀಟಿಂಗಿಗೆ ಮುಂದರಿಸಿಡಲಾಯಿತು.

9. ಹೆಬ್ಬಾಲೆ ಶಾಲೆಯ ಏಳನೇ ತರಗತಿಯಲ್ಲಿ ಮಕ್ಕಳು ಬಹಳ ಕಡಿಮೆಯಾದ ಕಾರಣ, ಆ ತರಗತಿಯನ್ನು ಮುಚ್ಚುವೇಕೆಂದು ಶಾಲಾ ಇನ್ಸ್‌ಪೆಕ್ಟರರು ಬರೆದ ಪತ್ರವನ್ನು ಓದಲಾಯಿತು. ಆಲ್ಲಿಯ ಗ್ರಾಮಸ್ಥರಿಗೆ ಶಾಲೆ ಮಕ್ಕಳನ್ನು ಹೆಚ್ಚಿಸಲು ಮೂರು ತಿಂಗಳು ಸಮಯ ಕೊಟ್ಟು ನಂತರ ಆಲೋಚಿಸುವಂತೆ ತೀರ್ಮಾನವಾಯಿತು.

10. ಕಳೆದ ವರ್ಷ ದೊಡ್ಡ ಬಳ್ಳಾಪುರಕ್ಕೆ ಗ್ರ್ಯಾಮಭಿವೃದ್ಧಿ ವಿಷಯದಲ್ಲಿ ತರಬೇತಿಗೆ ಕಳುಹಿಸಲ್ಪಟ್ಟಿದ್ದ ಇಬ್ಬರು ಉಪಾಧ್ಯಾಯರುಗಳ ಪ್ರಯೋಣದ ಭತ್ಯ ರೂ. 24-14-0 ಮಂಜೂರ್ಮಾಡಲಾಯಿತು.

11. ಸೋಮವಾರಪೇಟೆನಾಡಿನ ತೋಳೂರು ಶೆಟ್ಟಳ್ಳಿ ಶಾಲೆಯಲ್ಲಿ ಮತ್ತಳ ಬಹಳ ಕಡಿಮೆಯೊದ ಕಾರಣ ಅದನ್ನು ಕೂತಿ ಗ್ರಾಮಸ್ಥೆವರ್ಗಾಯಿಸುವುದು ಉತ್ತಮವೆಂದು ಕಮಿಷನರು ಬರೆದ ಪತ್ರವನ್ನು ಓದಲಾಯಿತು. ಮಕ್ಕಳನ್ನು ಪೆಚ್ಚಿಸಲು ಅಲ್ಲಿಯವರಿಗೆ 3 ತಿಂಗಳ ಅವಧಿಕೊಟ್ಟು ನಂತರ ಆಲೋಚಿಸುವಂತೆ ತೀರ್ಮಾನವಾಯಿತು

ಸಾಯಂಕಾಲ 5 ಗಂಟೆಗೆ ಮೀಟಿಂಗನ್ನು ಮುಂದರಿಸಿಡಲಾಯಿತು.

ಮರುದಿನ ಬೆಳಿಗ್ಗೆ 9 ಗಂಟೆಗೆ ಮೀಟಿಂಗು ಪುನಃ ಪ್ರಾರಂಭವಾಯಿತು.

12 ಬೆಟ್ಟದಳ್ಳಿ ರಸ್ತೆಯನ್ನು ಬೋರ್ಡಿನವರು ವಹಿಸಿಕೊಂಡು ಅದರ ವಾರ್ಷಿಕ ಖರ್ಚಿಗೆ ರೂ. 20 ಮಂಜೂರ್ಮಾಡಬೇಕೆಂದು ಆ. ಕಮಿಷನರು ಬರೆದ ಪತ್ರ ಓದಲಾಗಿ ಆದನ್ನು ಬರುವ ಬಡ್ಜೆಟ್ಟು ಮೀಟಿಂಗಿಗೆ ಇಡಲಾಯಿತು

13. ಸುಂಟಿಕೊಪ್ಪನಾಡು ಅಂದಗೋನೆ ಗ್ರಾಮದಲ್ಲಿ ಟಾನಿ ತೋಡಿಸಿದ ಕಂಟ್ರಾಕ್ಟರಿಗೆ ನಷ್ಟವಾದ ಕಾರಣ ಈ ಮೊದಲು ಕೊಟ್ಟ ರೂ. 50 ಅಲ್ಲದೆ ಇನ್ನೂ ರೂ 50 ಕೊಡಬೇಕೆಂದು ಬರೆದ ಕಮಿಷನರವರ ಪತ್ರ ಓದಲಾಗಿ, ಹಾಗೆ ಕೊಡಲಿಕ್ಕಾಗುವದಿಲ್ಲವೆಂದು ತೀರ್ಮಾನಿಸಲಾಯಿತು.

14. ಬಿಳುಗುಂದ ಶಾಲೆಯ ಮಹಮ್ಮದಿಯ ಉಪಾಧ್ಯಾಯರಿಗೆ ರೂ 10 ಎಲೋನೆನ್ಸ್ ಮಂಜೂರ್ಮಾಡಬೇಕೆಂದು ಶಾಲಾ ಇನ್ಸ್‌ಪೆಕ್ಟರರು ಬರೆದ ಪತ್ರ ಓದಲಾಯಿತು. ಬಿಳುಗುಂದ ಮಹಮ್ಮದಿ-ಶಾಲೆಗೆ ಕೊಡುವ ರೂ. 10 ಗ್ರ್ಯಾಂಟನ್ನು ಅಲ್ಲಿಯ ಬೋರ್ಡಿನ ಶಾಲೆಗೆ ವರ್ಗಾಯಿಸಿ ಆದರಿಂದ ಕನ್ನಡ ಮತ್ತು ಉರುದು ಗೊತ್ತಿರುವ ಒಬ್ಬ ಮಹಮ್ಮದೀಯ ಉಪಾಧ್ಯಾಯರನ್ನು ನೇವಿಸುವಂತೆ ತೀರ್ಮಾನವಾಯಿತು.

15. ಡಿ. ಬೋರ್ಡಿನ ಆಡಳಿತದಲ್ಲಿರುವ ಮೂರ್ಕೆಟುಗಳಲ್ಲಿ ಮೂರುವ ಸೂಂಸದ ದರ ನಿಶ್ಚಯಿಸಬೇಕೆಂದು ಸಿವಿಲ್ ಸರ್ಜನರು ಬರೆದ ಪತ್ರ ಓದಲಾಯಿತು. ಒಂದನೇ ತರಗತಿ ಸೂಂಸಕ್ಕೆ 9 ಆಣೆಯಂತೆಯೂ, 2ನೇ ತರಗತಿ ಸೂಂಸಕ್ಕೆ 7 ಆಣೆಯಂತೆಯೂ ದರ ನಿಶ್ಚಯಿಸುವಂತೆ ತೀರ್ಮಾನಿಸಲಾಯಿತು.

16. ನಾಪೋಕ್ಲು ಆಸ್ಪತ್ರೆಯಲ್ಲಿರುವ ಸೂಲಗಿತ್ತಿಗೆ ಅಲ್ಲಿ ಹೆಚ್ಚಿನ ಹೆರಿಗೆ ಕೆಲಸವಿಲ್ಲದ ಕಾರಣ ಆನಳನ್ನು ಮೂರ್ನಾಡಿಗೆ ವರ್ಗಾಯಿಸಬೇಕೆಂದು ಸಿವಿಲ್ ಸರ್ಜನರು ಬರೆದ ಪತ್ರ ಓದಲಾಯಿತು. ಅಲ್ಲಿಗೆ ಪೆಚ್ಚಿನ ಅನುಭವವುಳ್ಳ ಒಬ್ಬ ಸೂಲಗಿತ್ತಿಯನ್ನು ವರ್ಗಾಯಿಸಿ ಆರು ತಿಂಗಳ ವರೆಗೆ ನೋಡಿ ನಂತರ ಈ ವಿಷಯ ತೀರ್ಮಾನಿಸುವಂತೆ ನಿಶ್ಚಯಿಸಲಾಯಿತು.

17. ಫ್ರೇಜರ್‌ಪೇಟೆ ನರ್ಸಿಗೆ ಕೆಲಸ ಕಡಿಮೆಯೊದ ಕಾರಣ ಆವಳನ್ನು ಶನಿವಾರಸಂತೆಗೆ ವರ್ಗಾಯಿಸಬೇಕೆಂಬ ಸೂಚನೆಯು ಚರ್ಚಿಸಲ್ಪಟ್ಟು ಹಾಗೆ ಮಾಡುವದು ಆವಶ್ಯವಿಲ್ಲವೆಂದು ತೀರ್ಮಾನವಾಯಿತು.

18. ಸುಂಟಿಕೊಪ್ಪ ಮೂರ್ಕೆಟಿನ ಬಳಿ ರಸ್ತೆಗೆ ಕಲ್ಲು ಹಾಕಿಸಲು ರೂ. 90 ಮಂಜೂರ್ಮಾಡಬೇಕೆಂದು ಅಲ್ಲಿಯ ವಾರುಸತ್ಯಗಾರರ ಪತ್ರ ಓದಲಾಗಿ, ಅದನ್ನು ಬರುವ ಬಡ್ಜೆಟ್ ಮೀಟಿಂಗಿಗೆ ಮುಂದರಿಸಿಡಲು ತೀರ್ಮಾನವಾಯಿತು.

19. ಡಿ. ಬೋರ್ಡಿನ ಶಾಲೆಗಳ ಬಾಲಚಮೂ ಸಂಘವನ್ನು ಹಿಂದುಸ್ಥಾನ ಸ್ಕೌಟು ಸಂಘಕ್ಕೆ ಸಂಯೋಜಿಸಬೇಕೆಂದು ಮದರಾಸಿನ ಸೇವಾಸಮಿತಿ ಸಂಘದ ಪ್ರಾಂತೀಕ ಸಂಚಾಲಕರು ಬರೆದ ಪತ್ರ ಓದಲಾಯಿತು. ಇಡೀ ಹಿಂದುಸ್ಥಾನಕ್ಕೆ ಒಂದು ಕೇಂದ್ರ ರಾಷ್ಟ್ರೀಯ ಬಾಲಚಮೂ ಸಂಸ್ಥೆಯು ಏರ್ಪಾಡಾಗುವ ವರೆಗೆ ಈ ವಿಷಯವನ್ನು ಮುಂದರಿಸಿಡುವಂತೆ ತೀರ್ಮಾನಿಸಲಾಯಿತು.

20. ಡಿ. ಬೋರ್ಡಿನ ಉಪನಿಬಂಧನೆಗಳನ್ನು ತಿದ್ದುಪಡಿ ಮಾಡುವ ಕಮಿಟಿಯ ಕೆಲಸವನ್ನು ಮುಂದರಿಸಬೇಕೆಂಬ ಕಮಿಷನರ ಪತ್ರ ಓದಲಾಯಿತು. ಕಳೆದ ತಿಂಗಳ ಕೌನ್ಸಿಲು ಮೀಟಿಂಗಿನಲ್ಲಿ ಪಾಸಾದಂತೆ ಕೊಡಗು ಡಿಸ್ಟ್ರಿಕ್ಟ್ ಫಂಡ್ ರೆಗ್ಯುಲೇಷನ್ನನ್ನು ಸರಕಾರದವರು ಬೇಗನೆ ತಿದ್ದುಪಡಿ ಮಾಡುವರೋ ಎಂಬ ವಿಚಾರ ಕಮಿಷನರಿಗೆ ಬರೆದು ತಿಳಿಯುವಂತೆ ತೀರ್ಮಾನವಾಯಿತು.

21. ಬೋರ್ಡಿನ 37-38ರ ಆಡಳಿತದ ಕರಡು ವರದಿಯನ್ನು ಓದಿ ಒಪ್ಪಲಾಯಿತು. ಇದರ 100 ಕನ್ನಡ ಮತ್ತು 100 ಇಂಗ್ಲಿಷ್ ಪ್ರತಿಗಳನ್ನು ಅಚ್ಚು ಹಾಕಿಸುವಂತೆ ತೀರ್ಮಾನವಾಯಿತು.

22. ಸಿದ್ದಾಪುರ ಆಸ್ಪತ್ರೆಯನ್ನು ಅಲ್ಲಿಯ ಮುಸಾಫರಿ ಬಂಗ್ಲೆಗೆ ವರ್ಗಾಯಿಸುವ ವಿಷಯ ಇನ್ನೊಂದು ಮೀಟಿಂಗಿಗಿತ್ತಲಾಯಿತು.

ಈ ಸಮಯದಲ್ಲಿ ಬೋರ್ಡಿನ ಪ್ರೆಸಿಡೆಂಟರು ಎಕ್ಸ್‌ಸೈಸ್ ಎಡ್ವೈಸರಿ ಕಮಿಟಿಯ ಮೀಟಿಂಗಿಗೆ ಹೋಗಬೇಕಾಗಿ ಬಂದ ಕಾರಣ ವೈಸ್ ಪ್ರೆಸಿಡೆಂಟರಾದ ಮೆ. ರಾಮಶೆಟ್ಟಿಯವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು. ಅಸಿಸ್ಟೆಂಟ್ ಕಮಿಷನರು, ಮೆ. ಎಚ್. ಯಂ. ಪುಟ್ಟಣ್ಣನವರು, ಮತ್ತು ಮೆ. ಬ್ರಮ್ಲಾರವರು ಎಕ್ಸ್‌ಸೈಸ್ ಎಡ್ವೈಸರಿ ಮೀಟಿಂಗಿಗೆ ಹೋದರು.

23. ಡಿಸ್ಟ್ರಿಕ್ಟ್ ಫಂಡ್ ಮ್ಯಾನುವಲಿನ 80 (a) ನಿಬಂಧನೆಗೆ ಹೆಚ್ಚಾಗಿ ಸೇರಿಸಲು ಸಿವಿಲ್ ಸರ್ಜನರು ಕಳುಹಿಸಿದ ಹೊಸ ನಿಬಂಧನೆಗಳನ್ನು ರಠಾವು ನಂ- 7ರ ಕಮಿಟಿಗೆ ಪರ್ಯಾಲೋಚನೆಗೆ ಬಿಡಲಾಯಿತು.

24. ಮೂರ್ನಾಡು ಶಾಲೆಗೆ ಒಬ್ಬ ಹೆಚ್ಚಿಗೆ ಉಪಾಧ್ಯಾಯರನ್ನು ಕೊಡಬೇಕೆಂಬ ಡಿ. ಇನ್ಸ್‌ಪೆಕ್ಟರವರ ಸೂಚನೆಯು ಮಂಜೂರಾಗಲಿಲ್ಲ.

[ಸಶೇಷ]

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಸುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ಕ್ಕೆ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೬,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮— ೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಸಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೭೯,೨೪೦— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೬೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯು ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗ ಬರೆಯಿರಿ.—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್
ಚಾಮರಾಜಪೇಟೆ, ಬೆಂಗಳೂರು ಸಿಟಿ

ಆದಲಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಅಸಿಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-7

ಕೌನ್ಸಿಲ್ ನಿರಾಟಂಗು.

(ಕಳೆದ ಪುಟದಿಂದ ಬಂದಮ್ಮ)

ಫೈನಾನ್ಸ್ ಮೆಂಬರರು ಹಣದ ಆ ಭಾವದಿಂದ ಇದು ಸಾಧ್ಯವಿಲ್ಲವೆಂದೂ, ಇದಕ್ಕಾಗಿ ರೂ 2000 ಖರ್ಚಾಗಬಹುದೆಂದೂ, ಈ ಖರ್ಚಿನಮ್ಮ ಒದಗಲ್ಲಿ ಉತ್ಪತ್ತಿ ಇಲ್ಲವೆಂದೂ, ಆದ್ದರಿಂದ ಇಂಥ ಪ್ರಯೋಜನಕಾರಿಯಲ್ಲವೆಂದೂ ಹೇಳಿ ವಿರೋಧಿಸಿದರು

ಶ್ರೀ ಯಂ ಯಂ ಬಸ್ಯಪ್ಪನವರು ಈ ವಿಷಯದಲ್ಲಿ ಹೆಚ್ಚಿನ ಇಲ್ಲಾಜಿಗೆ ತುಂಬಾ ಲಾಬವಿದೆಯೆಂದೂ, ರೂ 2000 ವು ಏನೂ ದೊಡ್ಡ ಖರ್ಚಲ್ಲವೆಂದೂ ಹೇಳಿದರು

ಫೈನಾನ್ಸ್ ಮಂಬರು ಈ ವಿಚಾರ ಹಣ ಸಿಕ್ಕಿದಾಗ ಆಲೋಚಿಸಲಾಗುವುದೆಂದರು.

ಓಟಿಗೆ ಹಾಕಲಾಗಿ ಎಲ್ಲ ಜನಾಯಿತ ದೀಕ್ಷೆಯ ಮೆಂಬರುಗಳು ಪರವಾಗಿ ಓಟು ಮಾಡಿದ್ದರಿಂದ ಠರಾವು ಮಂಜೂರಾಯಿತು

19 'ಚೇತರಿಯಲ್ಲಿ ಕಾವೇರಿ ಹೊಳೆಗೆ ಖಾಯಂ ಆದ ಒಂದು ಸೇತುವೆಯನ್ನು ಕಟ್ಟಲು ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಶ್ರೀ ಯಂ. ಯಂ. ಬೆಳ್ಯಪ್ಪನವರು ವಾಪಸು ತೆಗೆದುಕೊಂಡರು.

[ಸಶೇಷ.]

ಬಾ ತ್ರಿ.

—೦೦೦—

'ಸಂಸ್ಕೃತವು ಮೃತ ಭಾಷೆ' ಆದರೂ ನಮಗೆ ಅತ್ಯವಶ್ಯವಾದ ಭಾಷೆ

ನನ್ನ ಮೊದಲಿನ ಕೌನ್ಸಿಲಿನ ಕಳೆದ ಸಾರಿ ಬುಗ್ಗೆಯಲ್ಲಿ ನಡೆದ ಕಲವು ಪ್ರಶ್ನೋತ್ತರಗಳಲ್ಲಿ ಸಂಸ್ಕೃತ ಶಾಲೆಯ ವಿಷಯವನ್ನು ಒಂದಿಷ್ಟು ಸಂಸ್ಕೃತ ಉಪಾಧ್ಯಾಯರ ಸ್ಥಾನವನ್ನು ಶಾಶ್ವತ ಮಾಡುವುದೆಂದೂ' ಇರುವುದಾದರೆ ದಾಕೆ ವಿದ್ಯಾರ್ಥಿಗಳ ಸಂಖ್ಯೆಯ ಮೇಲಿಂದ ಶಾಶ್ವತ ಮಾಡುವುದಾದರೆಲ್ಲವು ವಿದ್ಯಾರ್ಥಿಗಳ ಸಂಖ್ಯೆ ಎಷ್ಟೆ? ಸಂಸ್ಕೃತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ವಿದ್ಯಾರ್ಥಿಗಳಿಗಿಂತ ಕಡಿಮೆ ಇಲ್ಲವಾದರೆ ಸಂಸ್ಕೃತವನ್ನು ಮೂರ್ಖ ಯೂತೆ ಮಾಡಲಾಗುತ್ತಿದೆ? ಇವೇ ಮೊದಲಾದ ಪ್ರಶ್ನೆಗಳನ್ನು ಶ್ರೀಗಳಾದ ಪಿ ಕಾರ್ಯಪ್ಪನವರೂ, ಪಿ ಐ ಬೆಳ್ಯಪ್ಪನವರೂ ಕೇಳುವಾಗ್ಗೆ ಕೊಡಗು ಶಾಲಾ ಇನ್ಸ್‌ಪೆಕ್ಟರಾದ ಮಿ ಥಾಮಸನ್ ಸಾಹೇಬರು ಇನ್ನೂ ಯಾವುದೂ ನಿಶ್ಚಯವಿಲ್ಲವೆಂತಲೂ, ಎಲ್ಲವನ್ನೂ ಇನ್ನು ಒಂದು ತಿಂಗಳ ಅವಧಿಯಲ್ಲಿ ವಿಸುರ್ಪಿಸಿ ಹೇಳಲಾಗುವುದೆಂತಲೂ ಹೇಳಿದರು ಮರು ಪ್ರಶ್ನೆಗಳನ್ನು ಮೇಲೆ ಹೇಳಿದ ಉತ್ತರಗಳ ಮೇಲೆ ಕೇಳಲು, (Suplementary questions) ಥಾಮ್‌ಸನರು ತಾವು ಸಂಸ್ಕೃತ ಅಭ್ಯಾಸ ಮಾಡಿರುವೆನೆಂತಲೂ, ತನಗೆ ತತ್ಕಾಲ್ಯ ಜ್ಞಾನವಿದೆಯೆಂದಲೂ, ಸಂಸ್ಕೃತವು ಮೃತ ಭಾಷೆಯೆಂದಲೂ, ಕೆಂಬ್ರಿಜ ಮತ್ತು ಬೆಂಗಳೂರು ಕಂಟೋನ್ಮೆಂಟುಗಳಲ್ಲಿ ಸಂಸ್ಕೃತ ಪ್ರಾಶಸ್ತ್ಯ ಇಲ್ಲವೆಂತಲೂ ಹೇಳುವು ಎಂದು ಪ್ರಶ್ನೆಲ್ಲ, ಲೇಹಿಂದ ಮತ್ತು ಗ್ರೀಕ್‌ಗಳಿಗೆ ಪ್ರಾಶಸ್ತ್ಯವು ಹೆಚ್ಚಿಗೆಯಾಗಿದೆಯೆಂತಲೂ ಹೇಳಿದರು ಈ ಸಂದರ್ಭಗಳನ್ನೆಷ್ಟರಲ್ಲೂ ಸಂಸ್ಕೃತವು ಅವಶ್ಯವೆಂಬ ಅಭಿಪ್ರಾಯವಾಪಡಿಸಿದ್ದರಿಂದ ಅವರಿಗೆ ಉತ್ತೇಜನವನ್ನು ಆಸಕ್ತಿಯನ್ನೂ ಹೊಂದಬೇಕೆಂದು ಹೇಳಿತ ಸಂಸ್ಕೃತ ಬಾಷಾ ಪರಿಣತಿಯಿಂದ ಆ ಭಾಷೆಯ ಮೇಲೆ ತನಗಾದಷ್ಟು ಉಪಾಧ್ಯಾಯರ ಮೇಲಿಂದ ಮೇಲೆ ಕೇಳಿದ ಪ್ರಶ್ನೆಗಳಿಂದ ಸರ್ಕಾರವನ್ನೂ, ಇನ್ಸ್‌ಪೆಕ್ಟರ್ ಸಾಹೇಬರನ್ನೂ ವಿಚಾರಣೆಯ ಶಾಲೆಯಲ್ಲಿ ಸಾರ್ವಜನಿಕ ಶ್ರಮದಿಂದ ಸಂಸ್ಕೃತವನ್ನು ಸ್ಥಾಪಿಸಲ್ಪಟ್ಟಮ್ಮೂ, ಜನರ ಅಭಿಪ್ರಾಯಕ್ಕೆ ವಿರುದ್ಧ ನಡತೆಯನ್ನು ಎಂದೂ ಮಾಡುವುದು ಒಳ್ಳೆಯದಲ್ಲವೆಂದು ತಿಳಿಯುವೆ ಇರಲಿಕ್ಕಿಲ್ಲ

ಇನ್ನೊಂದು ನನ್ನ ಇನ್ಸ್‌ಪೆಕ್ಟರವರೆ ನೂತೊಂದರೆ ಅವರ ಜಂಭ ತಾವು ಸಂಸ್ಕೃತವನ್ನು ಶಕ್ಕಸ್ಥ ಅಭ್ಯಾಸ ಮಾಡಿದ್ದೇನೆ, (Special study) ಅದು ಮೃತ ಭಾಷೆ, ಉರ್ದುವಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿರುವರು ಅವರೆ ಈ ಸುಹಾಶಯರು ಯಾವ ಶಾಲೆಯಲ್ಲಿ ಸಂಸ್ಕೃತ ಅಭ್ಯಾಸ ಮಾಡಿ ಯಾವ ಪ್ರಶಸ್ತಿಪತ್ರ (Degree or diploma)

ಪಡೆದಿರುವಂಥಿದು ನಮ್ಮಲ್ಲಿ ಹೆಚ್ಚಿನ ಜನರಿಗೆ ಗೊತ್ತಿಲ್ಲವಾದ್ದರಿಂದ ಅವರು ಸಂಸ್ಕೃತವು ಮೃತ ಭಾಷೆಯೆಂದು ರೀತಿಸಿದ್ದು. ಒಂದೇ ಮಾತಿನಿಂದ ಹೇಳುವುದಾದರೆ, ಆವರ ರೀತಿಯು ಬಹಳ ಹಳೆಬಂ ರೀತಿಯನ್ನೇ ಅನುಸರಿಸುತ್ತದೆ. ಈಗಿನ ಜನಜಾಗೃತಿ, ಪುರಾತನ ಸಂಸ್ಕೃತಿಗಳ ಅಭಿಮಾನ, ಕಾಂಗ್ರೆಸ್ ಪ್ರಭುತ್ವದ ಭವಿಷ್ಯತ್ತು ಮತ್ತು ಗುರಿ, ಇವುಗಳ ಮಧ್ಯೆ ನಮ್ಮ ಥಾ ಮಸರ್‌ರವರು ನುಡಿದ ಮಾತು ಮೃಷೆಯಂ ದೇ ಎಣಿಸಬೇಕು. ಇಂಥಾ ವಿಷ್ಟ ವರ್ಗದ ಅಧಿಕಾರಿಗಳು ಕೆಂಬ್ರಿಜ, ಬೆಂಗಳೂರು ಕಂಟೋನ್ಮೆಂಟ್ ಹೊರತು ಬೇರೆ ವಿದ್ಯಾ ನಿಲಯಗಳ ಮೆಟ್ಟಿಲೆ ಎತ್ತದೆ ಇದ್ದದ್ದು ಆವರ ಪಾಂಡಿತ್ಯಕ್ಕೆ ಕಲಂಕ ತರಲೂ ಬಹುದು. ಜರ್ಮನಿಯ ಸಂಸ್ಕೃತ ಪಾಂಡಿತ್ಯವೇ ತನ್ನ ಈಗಿನ 'ಆರ್ಯ' ಮತ್ತು 'ಸ್ವಾಸ್ತಿಕ' ಶಬ್ದಗಳ ಗುಟ್ಟಿಂದು ಯೂರು ತಾನೇ ತಿಳಿಯರು. 'ಕೆಂಬ್ರಿಜ್'ನಲ್ಲಿ ಸಂಸ್ಕೃತವಿಲ್ಲದಿದ್ದರೆ 'ಆಕ್ಸಫೋರ್ಡ್'ನಲ್ಲಿದೆ. ಬೆಂಗಳೂರಿನ ಕಂಟೋನ್ಮೆಂಟಿಗೂ ನಮ್ಮ ಶಾಲೆಗಳಿಗೂ ಯಾವ ಬಾಂಧವ್ಯ? ಹೇಗಾದರೂ ಮಾಡಿ ಆಳುವ ಮುಕ್ಕಳನ್ನು ಸಮಧಾನಿಸಲು, ಪ್ರಯತ್ನ.

ದಕ್ಷಿಣ ಕೊಡಗಿನ ವಿದ್ಯಾರ್ಥಿಗಳು ಸಂಸ್ಕೃತ ಕಲಿಯಲು ಇಚ್ಛಿಸಿದರೆ ತಾನು 'ಸ್ಕಾಲರ್‌ಶಿಪ್' ಕೊಡಿಸುತ್ತೇನೆಂದು ಸುದಿದ ಮಾತು ಕೇವಲ ತಮ್ಮ ಕೆಲಸಕ್ಕೋಸ್ಕರವೇ. ಇವರು ಎಷ್ಟು ಸ್ಕಾಲರ್‌ಶಿಪ್ ಕೊಟ್ಟಿರು? ಇದಕ್ಕಿಂತಲೂ ಒಬ್ಬ ಉಪಾಧ್ಯಾಯನನ್ನೇ ನೇಮಿಸಿದರೆ ಇವರಿಗೆ ಹೆಚ್ಚೆಂದರೆ ಎಷ್ಟು ಖರ್ಚಾದೀತು. ನಮ್ಮ ಸಂಸ್ಥೆಯಲ್ಲಿ ಇದೇ ಭಾಷೆಯಲ್ಲಿ ಆಡಕವಾಗಿರುವಾಗ ನಮಗೆ ಉರ್ದು ಪ್ರೇಮಿಗಳಾಗಿರೆಂಬ ಹೇಳುವುದು ಕೇವಲ ರಾಜಕಾರ್ಯದ ಛೇದೋಪಾಯ. ಈಗ ಹವಿಸೂರು ವರ್ಷಗಳಿಂದ ಕಲಿಸುತ್ತಿರುವ ಭಾಷೆಯು ಇಂದು ಮೃತ ಭಾಷೆ, ಆದು ಹಾಗೆ, ಇದು ಹೀಗೆ ಎಂದು ಕುಂಟು ನೆಪ ಹೇಳಿ ಮೈಮುರಿಯುವ ಮನಸಿಗೆ ನಮ್ಮ ಕೊಡಗಿನ ಜನರು ಬೆರಗಾಗಲಿಕ್ಕಿಲ್ಲವೆಂದೂ, ಒಂದು ಸಲ ಖಾಯಂ ಸ್ಥಾಪಿತವಾದ ಸಂಸ್ಕೃತ ಭಾಷೆಯು ಅದು ಮೃತ ಭಾಷೆಯಾಗಲೀ, ಆಗದೆ ಇರಲಿ, ಹೇಗೂ ವಿರಾ ಜಪೇಟೆ ಹೈಸ್ಕೂಲಿನಿಂದ ತೆಗೆದುಬಿಡಬಾರದೆಂದೂ, ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಸರ್ಕಾರವು ಮತ್ತು ಧರ್ಮಸನ್ ಸಾಹೇಬರು ಜೋಪಲ್ಲಿ ನಮ್ಮ ಕೊಡಗಿನ ಸರು 1925-26ರಲ್ಲಿ ನಡೆಸಿದಂತೆ ಉಗ್ರ ಚಳವಳಿ ನಡೆಸಿಯಾದರೂ, ಸಂಸ್ಕೃತವು ಶಾಶ್ವತವಾಗಿ ಕೊಡಗಿನ ಎರಡೂ ಹೈಸ್ಕೂಲುಗಳಲ್ಲಿ ಇರುವಂತೆ ಮಾಡದೆ ಇರಲಾರೆಂದೂ ಸರ್ಕಾರವು ತಿಳಿಯಲೇ ಬೇಕು.

'ಕೌನ್ಸಿಲ್ ಮೂಟಂಗಿನಲ್ಲಿ ಹಾಜರಿದ್ದೆವು.'

FOR SALE.

One big storeyed tiled house with a number of tiled out houses and with extensive compound and 1½ acres of Coffee Estate, banana gardens situated in Brahmin Valley and known as extreasurer A. P. Subbaya's house. Rs. 6000 - or nearest offer acceptable.

A. P. Seetharamiah,
Brahmin Valley,
Mercara.
4-2

ಕೊಡಗು ಮುಜ್ರಾಯಿ ಇಲಾಖಾ ಪ್ರೆಸಿಡೆಂಟರ ಆಫೀಸಿನಿಂದ

ಇಸ್ತಿಹಾರು ನಾಮೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:-

ಸನ್ 1892 ನೇ ಇಸವಿ 4 ನೇ ನಂಬರು ರಿಗ್ಯುಲೇಶನ್ ಅನುಸರಿಸಿ ಹಜರತ್ ಚೀಫ್ ಕಮಿಷನರ್ ಸಾಹೇಬರು ಮುಂಜೂರು ಮಾಡಿನ 1892 ನೇ ಇಸವಿ ಡಿಸೆಂಬರ್ ತಾರೀಕು 19 ನೇ ನಂಬರು 67 ನೇ ನೋಟಿಫಿಕೇಶನ್‌ನಲ್ಲಿ ನಮೂದಿಸಿರುವ ರೂಲ್ ಮೇರೆ ಈ ಕೆಳಗೆ ನಮೂದಿಸಿರುವ ಮೆಂಬರುಗಳ ಕೆಲಸವು ಕಾಲಿ ಬಿದ್ದಿರುವ ಮತ್ತು ಕಾಲಿ ಬೀಳುವ ಮೆಂಬರುಗಳ ಬದಲಿಗೆ ಜೇರೆ ಮೆಂಬರುಗಳನ್ನು ಚುನಾಯಿಸಲ್ಪಡುತ್ತೆ

ನಂ.	ಯಾರ ಬದಲಿಗೆ	ಮೆಂಬರುಗಳ ಆವಧಿ ಪೂರ್ತಿಸಿದ ಯಾ ಫೂರ್ತಿ ಸುವ ತಾರೀಕು.	ಮೆಂಬರುಗಳನ್ನು ಚು ನಾಯಿಸಿ ಪುನಃ ಸ್ಥಾಪಿಸಲಿಕ್ಕೆ ಟು ವರ್ಷದ ಶ್ಯಳ.	ಘಂಟೆ.
ಜರ್ಮನಿ ರಷ್ಯದ ದೃಷ್ಟಿಯು ಒಂದೆ ಕ್ಕೊಂದು ವಕ್ರವಾಗಿಯೇ ಇದೆ. ಎರಡು ರಾಷ್ಟ್ರಗಳೂ ತಮ್ಮ ತಮ್ಮ ಸೈನ್ಯ ಸಾಮಗ್ರಿಗಳನ್ನು ಹೊಗಳಿಕೊಂಡು ತೊಡೆ ಚಪ್ಪರಿಸುತ್ತಿವೆ. ಈ ಎರಡು ಜಟ್ಟಿಗಳು ತಮ್ಮ ತಮ್ಮ ಪೌರುಷವನ್ನು ಹೊಗಳುತ್ತಿರಲು ಜರ್ಮನರ ಬೆನ್ನುತಟ್ಟಿ ಹೇಗಾದರೂ ಜರ್ಮನರ ದೃಷ್ಟಿಯನ್ನು ಬದಲಾಯಿಸಿ ಶಾಂತಿಸ್ಥಾಪನೆ ಮಾಡಬೇಕೆಂಬುದು ಬ್ರಿಟಿಷರ ಪ್ರಯತ್ನ. ಅಂತು ಇಂದು ಬ್ರಿಟಿಷರು ಮುಳ್ಳಿನಿಂದಲೇ ಮುಳ್ಳನ್ನು ಕೀಳುವ ಈ ಹೊಸ ಉಪಾಯನನ್ನು ಹುಡುಕಿರುನರು. ಆದರೆ ಕಾಲ ಚಕ್ರದ ಉರುಳಾಟದಲ್ಲಿ ಪರಿಣಾಮವೇನಾಗುವದೆಂಬುಬಲ್ಲವರಾರು? ಸನುಗ್ರ ರಾಷ್ಟ್ರಗಳೂ ಶಕ್ತಿಯೂರಿ ಸೈನ್ಯ ಸನ್ನಾಹಕ್ಕೆ ತೊಡಗಿರುವಾಗ ಅವುಗಳ ಉಪಯೋಗವು ಒಂದಲ್ಲ ಒಂದು ದಿನ ಬಂದೇ ಬರಬೇಡವೇ? ಬುದ್ಧಿವಂತಿಕತೆಯಿಂದಲೂ ಯುದ್ಧವು ಅನಿವಾರ್ಯ ಶಾಂತಿ ಸಂಸ್ಥಾಪನಾಚಾರ್ಯರ ಪ್ರಯತ್ನದಿಂದ ಕೆಲವೊಂದು ದಿನವನ್ನು ಸೂತ್ರ ನೂಕಬಹುದಾಗಿದೆ.

—೦೦—

ಮಹಾತ್ಮರಿಗೆ ಪತ್ರಗಳ ಸುರಿಮಳೆ.

ಮಹಾತ್ಮ ಗಾಂಧಿಯವರು, ನಿತ್ಯವೂ ತಮಗೆ ಬರತಕ್ಕ ಪತ್ರವ್ಯವಹಾರಗಳನ್ನು ಸಂಪೂರ್ಣವಾಗಿ ನಿರೀಕ್ಷಿಸಲು ಅಸಾಧ್ಯರಾಗಿದ್ದಾರೆ ಅವ್ಯ ಕಾಗದಗಳು ಆಶ್ರಮಕ್ಕೆ, ಬರಬಾರದೆಂದೂ, ನಿತ್ಯವೂ ತಮಗೆ ಬರುತ್ತಿವೆ. ಮಹಾತ್ಮರು, ಈ ವಿಷಯದಲ್ಲಿ ಎಷ್ಟೇ ಸಲ ಜನತೆಯನ್ನು ಎಚ್ಚರಿಸಿದರೂ, ಜನಗಳು ಪತ್ರ ತಮ್ಮ ದೂರನ್ನು ಪತ್ರಮೂಲಕವಾಗಿ ಮಹಾತ್ಮರಿಗೆ ತಿಳಿಸುವದನ್ನು ಇನ್ನೂ ಬಿಟ್ಟಿಲ್ಲ. ಇದರಿಂದ ಮಹಾತ್ಮೋಜಿಯವರು ಬವಳಿಯಾಗಿ ನೊಂದುಕೊಂಡಿದ್ದಾರೆ.

—೦೦—

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೆ ತಿಳಿಸುವದೇನೆಂದರೆ–

ಪೊನ್ನಂಪೇಟೆ ನಾಡು ಕಿರುಗೂರು ಗ್ರಾಮದ ಪೌತಿ ಪದಾರ್ಥಿ ಕೃಷ್ಣಯ್ಯನವರು ಅನೇಕ ಲೇವಾದೇವಿ ಮಾಡುತ್ತಾ ಸದರಿಯವರಿಗೆ ಲಿಖಾನಟ್ಟುಗಳ ಮೇಲೂ ಡಿಕ್ರಿಗಳ ಮೇಲೂ ಹೊರಗಿನಿಂದ ಉದ್ರೆಯು ಬರತಕ್ಕದಿದೆ. ಇವರು ಪೌತಾಗುವ ಮುಂಚೆ ತಾ. 17-2-1936ರ ರಿಜಿಸ್ಟ್ರಿ ವಿತಾನಾದ ಪ್ರಕಾರ ತಮ್ಮ ಬಾಬ್ತು ಸಮಸ್ತ ಸ್ಥಿರ ಚರ ಸೊತ್ತುಗಳು, ಲೇವಾದೇವಿಗಳು ನಗೈರೆ ಆನರ ಹೆಂಡತಿಯಾದ ನನಗೂ, ನನ್ನ ಮರುದಿನಕ್ಕೆ ಆವರ ಮಗ ಸೊಮ್ಮಯ್ಯನಿಗೂ ಸಹ ಹಕ್ಕಾಗಿರತಕ್ಕಂತೆ ಬದಾಗಿ ವಿತಾ ಬರೆದು ರಿಜಿಸ್ಟ್ರಿ ಮಾಡಿರುತ್ತಾರೆ. ಈ ಹಕ್ಕಿನ ಪ್ರಕಾರ ನಾನು ಮುಂದರಿಸುತ್ತಿದ್ದೇನೆ. ಹೀಗಿರುವುದರಿಂದ ನನ್ನ ಗಂಡನ ಬಾಕಿದಾರರು ಆವರಿಂದ ಸಲ್ಲತಕ್ಕ ಜಾಕಿಯನ್ನು ನನಗಲ್ಲದೆ ಇತರರಿಗೂ ಸಲ್ಲೆ ಕೊಡಕೂಡದು. ಹಾಗೆ ಕೊಟ್ಟಲ್ಲು ನ್ಯಾಯವಾದ ಹಕ್ಕುದಾರಳಾದ ನನಗೆ ಬಾಧಿಸುವುದಿಲ್ಲ. ನ್ಯಾಯವಾದ ಹಕ್ಕುದಾರಳಾದ ನನಗೇನೇ ಸಲ್ಲೆ ಕೊಟ್ಟು ರಸೀತಿ ಪಡೆಯತಕ್ಕದ್ದು ಎಂಬುದಾಗಿ ಸೂಚಿಸೋನಾಗಿರುತ್ತೆ.

ಕಿರುಗೂರು,
16-11-38. } ಪದಾರ್ಥಿ ದೇಚಮ್ಮ.

ಹುತ್ತರಿ ಹಬ್ಬದ ನೂಹೂರ್ತ ಪಟ್ಟಿ.

ಇದೇ ಸಂವತ್ಸರದ ವೃಶ್ಚಿಕ ಮಾಸ 20ನೇ ತೀದಿ ಅಂದರೆ ಡಿಸೆಂಬರ್ ತಾರೀಕು 6ನೇ ನುಂಗಳವಾರ ದಿನ ಕೃತಿಕ ನಕ್ಷತ್ರದಲ್ಲು ದೇವರ ಕಲಾಡಿಚೆ ಹಬ್ಬವೂ, ಆದೇ ದಿನ ಸಾಯಂಕಾಲ ರೋಹಿಣಿ ನಕ್ಷತ್ರ ಸಿಂಹ ಲಗ್ನದಲ್ಲು ದೇವ ಪೂಳುದು, ಆದೇ ದಿನ ರಾತ್ರಿ 10 ಗಂಟೆಗೆ ನೆರೆ ಕಟ್ಟುವದು, 11 ಗಂಟೆಗೆ ಕದಿರು ತೆಗೆಯುವದು, 12 ಗಂಟೆಗೆ ಊಟ ಮಾಡುವದಕ್ಕೆ ಶುಭ ಮೂಹೂರ್ತ.

ಮೂರನೆ ದಿನ ಅಂದರೆ ಡಿಸೆಂಬರ್ ತಾ. 7ನೇ ಬುಧವಾರ ಅಂದರೆ ವೃಶ್ಚಿಕಮೈ 21ನೇ ತೀದಿ ಮೃಗೇಶ್ವರ ನಕ್ಷತ್ರದಲ್ಲು ನಾಡುಪೂಳುದು. ಆ ದಿನ ರಾತ್ರೆ ಕರ್ಕಾಟಕ ಲಗ್ನದಲ್ಲು ರಾತ್ರೆ 8 ಗಂಟೆಗೆ ನೆರೆ ಕಟ್ಟುವದು. 9 ಗಂಟೆಗೆ ಕದಿರು ತೆಗೆಯುವದು, 10 ಗಂಟೆಗೆ ಊಟ ಮಾಡುವದಕ್ಕೆ ಶುಭ ಮೂಹೂರ್ತ.

—೦೦—

COORG FOREST DEPARTMENT.

SALE NOTICE.

Mercara, the 16th November, 1938.

Tenders are invited for clear felling & removing jungle-wood and branch pieces etc, over 141 acres of Nagarhole, Kathalla & Kolengere coupes in Nagarhole Range. Each Tender should be accompanied by an earnest money deposit of Rs. 200 in currency notes and reach the Divisional Forest Officer South Coorg on or before 12 noon of 30-11-1938.

For further particulars please apply to the Divisional Forest Officer, South Coorg Mercara.

ಪ್ರಕಟಣೆ.

ಪಬ್ಲಿಕ್ ಮಹಾಶಯರೇ,

'ಆಜಿಲ ಕೊಡಗು ಉಪಾಧ್ಯಾಯರ' ಸಮ್ಮೇಳನದ ಆಶ್ರಯದಲ್ಲಿ ಈ ವರ್ಷ ನಾಪೋಕ್ಲು ಶಾಲಾ ಮೈದಾನದಲ್ಲಿ ಸ್ಪರ್ಧಿಗಳು ಇದೇ ಡಿಸೆಂಬರ್ ತಾ. 4ನೇ ಆದಿತ್ಯವಾರ ದಿನ ಬೆಳಿಗ್ಗೆ 8 ಗಂಟೆಯಿಂದ 12 ಗಂಟೆ ವರೆಗೆ ಈ ಕೆಳಗಿನ ಆಟೋಟಗಳಲ್ಲಿ ಭಾಗವಹಿಸುವಂತೆ ಈ ಮೂಲಕ ತಿಳಿಸಲ್ಪಟ್ಟಿದೆ.

(1) ಕ್ರಿಕೆಟ್ ಚೆಂಡು ಎಸೆಯುವುದು.
(2) ಭಾರದ ಕಲ್ಲು ಎಸೆಯುವುದು.
(3) 100 ಗಜ ಓಟ.
(4) ತೆಂಗಿನಕಾಯಿ ಗುರಿಹೊಡೆಯುವುದು.
(5) ಒಂದು ಮೈಲು ಓಟ.
(6) ಎತ್ತರ ಹಾರುವುದು.
(7) ದೂರ ಹಾರುವುದು.

ಜೋರಿಕ ಮುದ್ದಪ್ಪ,
ಕ್ಯಾಪ್ಟನ್,
ಆ. ಕೊ. ಉ. ಸ.

ಈಗ್ಗೆ ಸುಮಾರು 400 ವರ್ಷಗಳ ಹಿಂದೆ ನಮ್ಮ ದೇಶವು ವಾಳೆಯಗಾರರ ಹಾವಳಿಯಿಂದ ನರಳುತ್ತಿರಲು ಒಬ್ಬ ಸನ್ಯಾಸಿಯು ಈ ಪಾಳೆಯಗಾರರನ್ನೆಲ್ಲಾ ಸಾಗಬಿಡಿಸಿ ಆನಂತರ ಹಾವಳಿಯನ್ನು ಅಡಗಿಸಿ 'ನಮ್ಮ ದೇಶವನ್ನು ನೀವೇ ಆಳಿಕೊಳ್ಳಿ' ಎಂದು ಹೇಳಲು 'ಅದಾಗದು, ನಿವೇ ಆಳಿ' ಎಂದಿದ್ದರಿಂದ ಸನ್ಯಾಸಿಯು ತನ್ನ ಕೌಪೀನವನ್ನು ಬಿಸುಟು ರಾಜ್ಯದ ಸಿಂಹಾಸನವನ್ನು ಏರಿದನು. ತದನಂತರ ಸುಮಾರು 300 ವರ್ಷಗಳ ವರೆಗೆ ಅವನ ಸಂತತಿಯವರಿಂದ ದೇಶವು ಪಟ್ಟ ಕಷ್ಟಗಳನ್ನು ಇಲ್ಲಿ ವಿವರಿಸಬೇಕಾದ ಅವಶ್ಯವಿಲ್ಲ. ಆದರೆ 'ಒಳ್ಳೆ ನಂಬಿಗಸ್ಥರಾದ ಚಾವುದಿತಾರೆ'ರೆಂಬ ಬಿರುದನ್ನು ಪಡೆಯಿತು

ಕಡೆ ಕಡೆಯ ಈ ಸನ್ಯಾಸಿಯ ಸಂತತಿಯ ಅರಸರ ಕ್ರೂರತನವು ಮಿತಿಮೀರಲು ಈಗ್ಗೆ ಸುಮಾರು 100 ವರ್ಷಗಳ ಹಿಂದೆ ಸುತ್ತು ಮುತ್ತು ರಾಜ್ಯಭಾರ ಸೂಸುತ್ತಿದ್ದ ಕಂಪನಿ ಸರ್ಕಾರವು ದೇಶದ ನಾಯಕ್ಕೆ ಬಂದು ರಾಜನನ್ನು ಸದೆಬಡಿಸಿ 'ನಿಮ್ಮ ದೇಶವನ್ನು ಯಾರು ಆಳಬೇಕು' ಎಂದಾಗ ಸಭೆಯಲ್ಲಿ ನೆರೆದ್ದ ದಿವಾನರೂ, ತಕ್ಕರೂ, ಇತರ ಮುಖ್ಯ ಪುನಸ್ಯರೂ 'ನೀವೇ ಆಳಬೇಕು'ವೆಂದು ಮೂತಿನಿಂದ ದೇಶಕ್ಕೆ 100 ವರ್ಷಗಳ ವರೆಗೆ ಆ ಕಂಪನಿ ಸರ್ಕಾರದ ಹಾಗೂ ಬ್ರಿಟಿಷ್ ಸರ್ಕಾರದ ಅಡಳಿತಕ್ಕೆ ತಕ್ಕಂತೆ ಸ್ವತಂತ್ರವಾಗಿ ಬಾಳುಮಯಸ್ಸನ್ನು ನಡೆಸಿ ತಾವು ಎಂತೆಂಥಾದ್ದು ಆಳಿಸಿಕೊಳ್ಳುವವರೇ ಎಂಬ ಮನೋಭಾವನೆಯು ವಿಶ್ವವ್ಯಾಪಂತರಲ್ಲೂ ಕೂಡ ಆಸರೆ ರತ್ನನಾಡಿಗಳಲ್ಲಿ ತುಂಬಿ ತನ್ನಷ್ಟಕ್ಕೆ ತಾನೇ ಪೆನ್ಷನ್ ಸರವು ಕುಗ್ಗುಸಂತಾಗಿ 'ರಾಜ ಭಕ್ತ'ರೆಂಬ ಬಿರುದನ್ನು ಪಡೆದು ದೇಶಕ್ಕೆ ಶುಕ್ರದೆಸೆಯಿಂದ ದೇಶದ ಆಡಳಿತವನ್ನು ನಡಿಸಲಾರಂಭ ತಾಪತ್ರೆಗೆ ಉದಾಯಿತು

ಬರ ಬರುತ್ತಾ ಕಡೆ ಸಾರಿಗೆ 'ನಮ್ಮ ದೇಶವನ್ನು ನೀವೇ ಆಳಿಕೊಳ್ಳಿ' ಎಂಬ ಹೇಳುವ ಸಂಭವವು ಅಂದರೆ ಲರ್ಧಾತ್ ದೇಶದ ಅಡಳಿತದ ಜವಾಬುದಾರಿಯು ದೇಶದವರ ಕೈಸೇರುವ ಸಂಭವ ಬರುವಂತಾ ಈ ಸಮಯದಲ್ಲಿ ದೇಶವು ಗಲಿಬಿಲಿ ಯೊಗತೊಡಗಿ ಮುಖ್ಯವಾಗಿ ವಿದ್ಯಾವಂತರಲ್ಲಿ, ಅನುಭವ ತಾಲಿಗೆಂದು ಹೇಳಿಕೊಳ್ಳುವರಲ್ಲಿ ಗಡಿಬಿಡಿಯು ವಿಪರೀತವಾಗಿ ಏನ್ಯಾಸಿನವರನ್ನೂ, ನೈಸೂರಿನವರನ್ನೂ ದೇಶವನ್ನು ಆಳಲು ಅಂಗಲಾಚಿ ಬೇಡುತಿರುವುದನ್ನು ನೋಡಿದರೆ ಬಹಳ ಆಶ್ಚರ್ಯವುಂಟಾಗಿದೆ. ಮದ್ರಾಸಿಗೆ ಸೇರಿ ಬಹುಮಂದಿ 'ಕೊಂಬುಂಬಾಲಂ ಇಲ್ಲತಾ ಪಶುಂಗ' ಎಂಬ ಬಿರುದನ್ನು ಪಡೆಯಲೆಂದೇ ತಾಯ್ತವೆ. ಇದೇನು ಸ್ವತಂತ್ರವಾಗಿ ಬಾಳಲು ನಮ್ಮ ಹಣೆಯಲ್ಲಿ ಬರೆಯಲಿಲ್ಲವೇ ಏನೋ?

ಈಗ ಕೆಲವು ವರ್ಷಗಳ ಹಿಂದೆ ದೇಶದ ಜನರು ಜೋಗುಗಳನ್ನು ತೀರ್ಮಾನಿಸಲು ಅಧಿಕಾರಿಯಲ್ಲಿ ಹತ್ತು ಜನರು ಕಾಗದ ಮೂಲಕ ತಮ್ಮ ಕೂಳ್ಳಿಗೆ ಬಲವರನ್ನು ಆರಿಸಿಕೊಂಡು ಸಭೆ ಸೇರಿ ಸಭೆಯಲ್ಲಿ ಮೂರು ೫-10 ನಿಮಿಷಗಳ ಸಮಯದಲ್ಲಿ

ಕೊಡಗಿನ ತ್ರಿಕಾಲ.

ನ್ನು ಕೊಟ್ಟುಕೊಂಡು ದೇಶದ ಅಡಳಿತವನ್ನು ಸುದ್ರಾಸಿನೊಂದಿಗೆ ಸೇರಿಸಬೇಕೆಂಬುದಾಗಿ ತೀರ್ಮಾನಿಸಿದರಂತೆ ಈ ವಿಷಯಕ್ಕೆ ಕೌನ್ಸಿಲ್ ಸೆಂಬರುಗಳೂ, ಡಿ. ಬೋರ್ಡ್ ಸೆಂಬರುಗಳೂ, ಮುನ್ಸಿಪಾಲಿಟಿ ಸೆಂಬರುಗಳೂ. ನೋಟೆಪೈಡ್ ಏಸ್ಟೇಟ್ ಸೆಂಬರುಗಳೂ, ರಿಟೆಯರ್ಡ್ ಉದ್ಯೋಗಸ್ಥರೂ ಮತ್ತು ಲಾಯರುಗಳೂ ಮಾಜಿ ದಿವಾನರೆಂದು ಪತ್ರಿಕೆಯಲ್ಲಿ ಸಭೆಯ ಅಧ್ಯಕ್ಷರಾಗಿದ್ದ ಸೆ. ಕೆ ಸುಬ್ಬಯ್ಯನವರ ಹೆಸರಲ್ಲಿ ಪ್ರಕಟಿಸಲಾಗಿತ್ತು.

ಮಹಾನೀಯರೇ, ಈ ವಿಷಯವಾಗಿ ನಾವು ಆಲೋಚಿಪತಕ್ಕ ಅನೇಕ ಸಂಗತಿಗಳಿವೆ. (1) ಮಡಿಕೇರಿಯಲ್ಲಿ ಮಾತ್ರ ಒಂದು ಮೂಟಿಂಗು ಮಾಡಿದರೆ ಅದು ದೇಶದವರ ಅಭಿಪ್ರಾಯವಾಯಿತೋ? ಇವರೇ ಕೆ ಇತ್ತೀಚೆಗಾದರೂ ವೀರಾಜಪೇಟೆಯಲ್ಲಾ ಮೂಟಿಂಗು ಸಜೆಸಿ ಜನರ ಅಭಿಪ್ರಾಯವನ್ನು ಪಡೆದುಬಿಲ್ಲ? (2) ಮೂರು ಇಲ್ಲ ೫-10 ನಿಮಿಷಗಳ ಸಮಯ ಮಾತ್ರ ಕೊಟ್ಟರಂತೆ! ಇದು ಏನು 5-10 ನಿಮಿಷಗಳಲ್ಲಿ ದೇಶದ ಭವಿಷ್ಯವನ್ನು ತೀರಿಸುವಷ್ಟು ಸುಲಭವೋ? ಬಹುಶ ಆ ಮೂಟಿಂಗಿಗೆ ಚುನಾಯಿತ ಸೆಂಬರುಗಳೇ ಹೆಚ್ಚಾಗಿದ್ದರಿಂದ ಇವರು ಜನರಿಂದ ಓಟು ಕೇಳಲು ಬಂದಾಗ 5-10 ನಿಮಿಷಗಳ ಸಮಯವನ್ನು ಮೊತಾದಲಿಕ್ಕೆ ಕೊಡುತ್ತಿದ್ದುದರ ಅಭ್ಯಾಸವೋ? ಒಲ್ಲ ಹೊರಗಿನಿಂದ ಬಂದ ಈ ಸೆಂಬರುಗಳಿಗೂ, ಇತರರಿಗೂ ಬಸ್ಸಿನ ಸಮಯಕ್ಕೆ ಸರಿಯಾಗಿ ವಾಪಸು ಆವರವರ ಮನೆಗೆ ಹೋಗುವ ಮತ್ತು ಹತ್ತಿರದವರಿಗೆ 4 ಗಂಟೆಯ ಸಮಯಕ್ಕೆ ಟೀ ತುಡಿಯಲು ಮನೆಗೆ ಸೇರಲೋ ಎಂದು ಸಂಶಯಪಡಬೇಕಾಗಿದೆ ಅದಲ್ಲದಿದ್ದರೆ ದೇಶದ ಮುಂದಿನ ಭವಿಷ್ಯವನ್ನು ಚರ್ಚಿಸುವಾಗ ನಿಮಿಷ ಗಂಟೆಗಳ ಕಾಲಮಿತಿ ಇದುತ್ತಲೇ ಇರಲಿಲ್ಲ. (3) ಈ ಚುನಾಯಿತ ಸೆಂಬರುಗಳ ಹಾಜರಾತಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲು ಕಾರಣವೇನು? ಬಹುಶ ಆ ದಿನ ಮೂಟಿಂಗನ್ನು ಸೇರಿಸಿದವರು ಕೊಡಗನ್ನು ಬೇರೆ ಪ್ರಾಂತದೊಂದಿಗೆ ಸೇರಿಸಿಬಿಡಬೇಕೆಂದು ಮೂಟಿಂಗಿಗೆ ಮೊದಲೇ ತೀರ್ಮಾನಿಸಿಕೊಂಡಿರಬೇಕು ಅವರ ಆ ಇವಾದೆಗೆ ಬಲಕೊಡುವುದಕ್ಕೆ ಈ ಸುಂಬರುಗಳ ಹಾಜರಾತಿಯನ್ನು ಪ್ರಕಟಿಸಿರಬೇಕು. ಈ ಸೆಂಬರುಗಳು ದೇಶದ ಭವಿಷ್ಯತ್ತನ್ನು ತೀರ್ಮಾನಿಸಲು ದೇಶವವರ ಪ್ರತಿನಿಧಿಗಳಾಗಿ ಬಂದವರಲ್ಲ. ಇವರ ತೀರ್ಮಾನವು ದೇಶವರ ತೀರ್ಮಾನ ಮಂಡಿತವಾಗಿಯೂ ಅಲ್ಲ. ಹಿಂದೆ ಎರಡಾವೃತ್ತಿ, ತಕ್ಕರೂ, ದಿವಾನರೂ, ದೊಡ್ಡ ಮನುಷ್ಯರೂ 'ನೀವೇ ಆಳಿಕೊಳ್ಳಿ' ಎಂದು ಹೇಳಿದುದರ ಪರಿಣಾಮವನ್ನು ದೇಶವು ಚೆನ್ನಾಗಿ ತಿಳಿದಿದೆ. ಇದು 20 ನೇ ಶತಮಾನವೆಂಬುದು ತಿಳಿಯರಲಿ. ಇರಲಿ, ಈ ಮೇಲ್ಕಂಡ ಚುನಾಯಿತ ಸೆಂಬರುಗಳೂ, ಲಾಯರುಗಳೂ, ರಿಟೆಯರ್ಡ್ ಆಫೀಸರುಗಳೂ ಸೇರಿದ ಇಂಥಾ ಘನ ಸಭೆಯಲ್ಲೇ ತಮ್ಮ ದೇಶವನ್ನು ತಾವೇ ಆಳುತ್ತೇವೆಂಬ, ಸ್ವತಂತ್ರವಾಗಿ ಬಾಳುತ್ತೇವೆಂಬ, ಇರಾಡೆ, ಧೈರ್ಯ ಬಾರದ್ದರಿಂದ ಈ ಚುನಾಯಿತರಿಂದ ದೇಶಕ್ಕಾಗುವ ಕಲ್ಯಾಣವೇನೆಂಬುದನ್ನು ಇವೆಂಬಲೇ ನಿರ್ಧರಿಸಬಹುದಾಗಿದೆ. ಈ ತೀರ್ಮಾನದ ಸಂಗತಿ ಕೇಳುವಾಗ ಈಗ ಕೆಲವು ದಿನಗಳ ಹಿಂದೆ ಸರ್ ಸಿಕಂದರ್ ಹಯಾತ್ ಖಾನರವರು ತಮ್ಮ ಭಾಷಣ ಒಂದರಲ್ಲಿ ಇಂಡಿಯಾದಲ್ಲಿರುವ ಸೈನಿಕರಲ್ಲಿ ಶೇಕಡ 71 ರಷ್ಟು ಪಂಜಾಬಿನವರೇ ಇದ್ದಾರೆ. 'ಫಲ' ಎಂಬ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡದ್ದು ನೆನಪಾಗುತ್ತದೆ. ಶೇಕಡ 71 ರಷ್ಟು ಸೈನಿಕರನ್ನು ಕೊಟ್ಟ ತನ್ನ ಧೀರ, ರಾಜಭಕ್ತ, ಅಧಿಪತ್ಯಕ್ಕೆ ಯಾಕೆ ಸಂಪೂರ್ಣ ಸ್ವರಾಜ್ಯ ಕೊಡಲಿಲ್ಲ? ಯಾಕೆ ಕೊಡಬಾರದು? ಎಂಬ ಕೇಳಲು ಮರೆತರೋ, ಅಲ್ಲು ಎದೆಗಾರಿಕೆ ಇಲ್ಲದಾಯಿತೇ? ಅಲ್ಲು ಇತ್ತಾವದಾದರೂ ಗೂಢವಾದ ಸಂಗತಿ ಇತ್ತ ಬಿಂಬೋ ಏನೂ ತಿಳಿಯದು. ಸಹಗಡು ವೇಷ.

(ಗಂ ನೇ ಪುಟದ ೪ ನೇ ಕಾಲಂ ನೋಡಿ.)

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ ರೂ.52,54,750 ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಸ್ಪರ್ಧಿಯೊಗದ 1447 ಪ್ರಪೋಸಲ್‌ಗಳ ಬಾಬ್ತು 10,67,650 ರೂ. ಗಳ ಬ್ಯೆಸರ್ಜನಧಿ 2,21,959-6-0 ರೂ. ವಿಮೂ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ 39,38,150. ಬಾಕಿ ರೂ. 1,29,500 ಸುನಹ ಭರವಸೆ ಕೊಟ್ಟದ್ದಾಗಿದ ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಸ್ಪರ್ಧಿಗೊಳ್ಳಲು ಕಾಯುತ್ತಿವೆ ಈ ವರ್ಷದ ಹೊಸ ಉದ್ಯೋಗವನ್ನು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಸೆಂಬರುಗಳೊಡನೆ ಆನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಲ್ಲಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಯಿಯರ್ ಬುಕ್' ಎಂಬುವವರಿಂದ ತಿಳಿಯಬರುತ್ತದೆ ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ವ್ಯಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ಕನ್ನಡ ನ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ನಮ್ಮನೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಚ್ಚಾಸೀಮಗಳಲ್ಲಿ ಸಂಸ್ಥಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವೆ ಹೊಸ ಉದ್ಯೋಗವು ಎರಡನೇಯದಾಗಿದೆ ಒಂದನೇಯದು ದಾರ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟಿದ್ದಾಗಿದೆ.

ವಿಮೂ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮೂ ಕಂತುಗಳ ಆದಾಯವು (ಪುನರ್ ಬರವಸೆ ಕೊಟ್ಟವ್ವನ್ನು ಬಿಟ್ಟು) ಕಳೆದ ವರ್ಷದ ವಿಮೂ ಕಂತಿನ ಆದಾಯಕ್ಕಿಂತ ಶೇಕಡ 57ರಷ್ಟು ಹೆಚ್ಚಿದೆ ನರಿದ ವರ್ಷದ ವಿಮೂ ಕಂತಿನ ಆದಾಯವು ರೂ. 3,66,198-13-0. ಗತ ವರ್ಷವು 2,36,767-6-6 ಆಗಿದೆ.

ಜೀವ ವಿಮೂ ಫಂಡು:—ಈ ಕಂಪನಿಯ ಜೀವ ವಿಮೂ ಫಂಡು ರೂ. 75,258-14-9ರಿಂದ, ಪೈವಸ್ಥಾ ಕ್ರಮಕ್ಕೆ ಮತ್ತು ಇತರ ಬಾಬ್ತಿಗಾಗಿ ರೂ 45,037-8-4 ಪಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಆವರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮೂ ಕಂತು	ಜೀವ ವಿಮೂ ಫಂಡು.
1ನೇ ವರ್ಷದ	ರೂ. 1,46,049	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ನೋಲಿನ ಅಂಕೆ ಸಂಖ್ಯೆಗಳೇ ಕಂಪನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮೂ ಕಂಪೆನಿಗಳ ವಾರ್ಷಿಕ ಸ್ಥಿತ್ಯಾಂತರದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮೂ ಕಂಪೆನಿಗಳ ಆಕ್ಟಿನ ಮೇರೆ ತೀವಣಾತಿ:—ಈ ವಿಮೂನು ಮೇರೆ ರೂಪಾಯಿ ಮೂಡುತಕ್ಕದ್ದಿದ್ದರೂ, 2 ಲಕ್ಷವನ್ನು ಪೂರ್ತಿಯಾಗಿ ವಿಸಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷಪಡುವರಾಗಿರುವರು.

ಸಿ. ಯಂ. ತಿಮ್ಮಯ್ಯ,
(52-24) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ತಾಸನ ಮಿಸ್ಟಿಕ್ಟ್.

ಮಾನಪತ್ರ.

ಮಾನ್ಯ ಮಂತ್ರಿಗಳಾದ ಶ್ರೀ. ಯಾಕೂಬ್ ಹಸೆನರಿಗೆ,

ಕೊಡಗು ಜಿಲ್ಲಾ ಕಾಂಗ್ರೆಸ್ಸು ಕಮಿಟಿಯವರು ಅರ್ಪಿಸಿದ್ದು.

ಮನ್ಯಾಸಿನ ರಟ್ಟಿಕ್ಟ್ ಕಾಂಗ್ರೆಸ್ ಕಮಿಟಿಯವರಾದ ನಾವು ತಮಗೆ ಹೃದಯಪೂರ್ವಕವಾದ ಸನ್ಮಾನಪತ್ರವನ್ನಿಯುತ್ತೇವೆ. ಮಹಾತ್ಮ ಗಾಂಧಿ, ಬಾಬು ರಾಜೇಂದ್ರ ಪ್ರಸಾದ್, ಸರ್ದಾರ್ ವಲ್ಲಭಭಾಯಿ ಪಟೇಲ್ ಮೊದಲಾದ ಅಖಿಲ ಭಾರತ ಮಟ್ಟದ ನಾಯಕರಲ್ಲಿ ಒಬ್ಬರಾದ ತಮಗೆ ಸನ್ಮಾನಪತ್ರವನ್ನು ಅರ್ಪಿಸುವ ಸುಯೋಗವು ನಮಗೆ ದೊರೆತಿದ್ದಕ್ಕಾಗಿ ನಾವು ಅತ್ಯಂತ ಸಂತೋಷಪಡುತ್ತೇವೆ. ಭಾರತ ಮಾತೆಯು ಸ್ವಾತಂತ್ರ್ಯ ಮತ್ತು ಹಿಂದು ಮುಸ್ಲಿಮರು ಐಕ್ಯತೆಗಾಗಿ ತಾವು ಸಲಿಸಿದ ಅಮೋಘ ಸೇವೆಯು ನಮ್ಮ ಗೌರವಕ್ಕೆ ಪಾತ್ರವಾಗಿದೆಯಲ್ಲದೆ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪ್ರೇರೇಪಿಸಿದೆ.

ಕೊಡಗಿನ ನಮ್ಮ ಈ ಸಂಚಾರದಿಂದ ಈ ಎರಡು ಪ್ರಾಂತಗಳಲ್ಲಿ ಲಾಭದಾಯಕ ಪರಿಣಾಮವನ್ನುಂಟುಮಾಡುವದೆಂದು ನಂಬುತ್ತೇವೆ. ಅಲ್ಲದೆ ನಿಮ್ಮ ಪ್ರಾಂತ್ಯದ ಕಾಂಗ್ರೆಸ್ ಮಂತ್ರಿಗಳ ಆಗಮನದಿಂದ ಆಗುವಷ್ಟು ಈ ಎರಡು ಪ್ರಾಂತಗಳ ಬಾಂಧವ್ಯವನ್ನು ಹೆಚ್ಚಿಸಲು ಸಹಕಾರಿಯಾಗಬಹುದೆಂದು ಅಪೇಕ್ಷಿಸುತ್ತೇವೆ.

ನಮ್ಮ ಪ್ರಾಂತದಲ್ಲಿ ನಿಮ್ಮ ಪ್ರವಾಸವು ಆನಂದಾಯಕವಾಗಿರಲಿ ಎಂದು ಹಾರೈಸುತ್ತೇವೆ.

ತಮ್ಮ

ಸಹಸಾಂತಿ ಕೆಲಸಗಾರರಾದ,

ಕೊಡಗು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ.

ಮಡಿಕೇರಿ, ತಾ. 21-11-38.

ಶ್ರೀಸಹ ಬಂದಾನ್ಯಶ್ರೀ ನಿಮ್ಮ ಆಪ್ತ ಸ್ವಾಗತಕ್ಕಾಗಿ ನಿಮ್ಮನ್ನು ಸಂದಿಸುತ್ತೇನೆ. ಇಲ್ಲಿಯ ನನ್ನ ವಿಹಾರದ ಅವಧಿಯು ಕೊಂಚವೇ ಆಗಿರುವದರಿಂದ ನಾನು ವ್ಯಸನಪಡುತ್ತೇನೆ. ನಿಮಗೆ ಶುಭಾಶಯವನ್ನು ಬಯಸಿ ನನ್ನ ಮಾತನ್ನು ಮುಗಿಸುವೆನು.

ಕೊಡಗಿನ ತ್ರಿಕಾಲ.

(೧)ನೇ ಪುಟದಿಂದ ಸಾಗಿದ್ದು)

ಪಾಳೆಯಗಾರರಿಂದ ಸನ್ಯಾಸಿಗೆ, ಸನ್ಯಾಸಿಯಿಂದ ಕಂಪನಿ ಸರ್ಕಾರಕ್ಕೆ, ಇಲ್ಲಿಂದ ಮದ್ರಾಸಿಗೆ, ಅಲ್ಲಿಂದ ಬೇರೆ ನಗರಗಳು ಅನುಕೂಲವಿದೆಯೋ ಎಂಬುದನ್ನು ಮೊದಲಾಗಿ ವಿಚಾರಿಸಬೇಕಾಗಿದೆ. ಈ ನಾಗಾಲೇ ಇಂತಿಷ್ಟೇ ದಿನ ಯಾ ತಿಂಗಳುಗಳಲ್ಲಿ ಮೊಪ್ಪ ಸೇರಿಸಲಾಗುವುದು ಎಂಬ ಠರಕು ಏನಾದರೂ ಮದ್ರಾಸಿನಲ್ಲಿಂದ ಇದೆಯೋ?

ಕಾಫಿ ತೋಟ ಒಂದಕ್ಕೆಲ್ಲ ತೆ ಈ ತರ ಎಲ್ಲಾ ವ್ಯವಸಾಯಿಗಳ ಜಮೀನುಗಳಿಗೂ ಕೊಡಗಿನ ಮೊರೆ ಏಕರು ಒಂದಕ್ಕೆ 10 ರಿಂದ 14 ರೂಪಾಯಿ ತೆರುತ್ತಿದ್ದಾರೆ. ಮಹಾತ್ಮ ಗಾಂಧಿಯವರ ಅಕ್ರಮಾರ ಜಿಗಳಕ್ಕೆ ಏಕರು 1 ಕ್ಕೆ 10 ರೂಪಾಯಿ ಕಂದಾಯವಿದೆಯಂತೆ ದೇಶದ ಆಯ, ವ್ಯಯಗಳು ಸರಿ ಇಲ್ಲದೆ ಬೇರೆ ದೇಶದಿಂದಿಗೆ ಸೇವಕರೇತಕಾದರೆ ವ್ಯಯಕ್ಕೆ ಸರಿಯಾದ ಆದಾಯವನ್ನು ಹೆಚ್ಚಿಸಲೇಬೇಡವೇ? ಆ ದಾಯವನ್ನು ಹೆಚ್ಚಿಸಲು ಭೂಕಂದಾಯವನ್ನು ಹೆಚ್ಚಿಸುವ ದಾರಿ ಒಂದೇ ಇಲ್ಲವೇ ಈಗಿನ ಸ್ಥಿತಿಯಲ್ಲಿ ಉಳಿದಿರುವುದು. ಕಂದಾಯ ಹೆಚ್ಚು ಮಾಡುವಂತಾದರೆ ಇನ್ನು ರಾಸಿನೊಂದಿಗೆ ಯಾಕೆ ಸೇರಬೇಕು? ನ್ಯಾಯವೇ ಆಲಾಯಿಸಿ ಇರಲಾಗುವುದಿಲ್ಲವೇ? ಕಂದಾಯ ತುಮ್ಮಿ ತೆರುತ್ತಿರುವ ನಮಗೆ ನಮ್ಮ ದೇಶದ ಆಡಳಿತ ನಡೆಸಲು ಹಣ ಸಾಲವಿದ್ದರೆ ಮದ್ರಾಸಿನೊಂದಿಗೆ ಸೇರಿದರೆ ಆ ಸರ್ಕಾರವು ವರ್ಷ ವರ್ಷ ಎಂದೆಂದಿಗೂ ನಮಗೆ ಖಚಿತಗೆ ಹಣ ಸಹಾಯ ಮಾಡುವರೋ? ಇದು ಈಗ ಮದ್ರಾಸಿನಲ್ಲಿರುವ 28 ಜಿಲ್ಲೆಗಳಲ್ಲಿ ನಡೆಯುತ್ತಿದೆಯೇ? ಮದ್ರಾಸಿನೊಂದಿಗೆ ಇರಲು ಇಷ್ಟಪಡದೆ ಅಂಧ್ರರು ಹೋಗಲಯಸುವಾಗ ನಾನೇಕೆ ಮದ್ರಾಸಿಗೆ ಸೇರಲು ಹಂಬಲಿಸಬೇಕು. ತಲೆಭಾರದ ಆಡಳಿತ ಸರಿಪಡಿಸಲು ಯಾ ಹೆಚ್ಚಿನ ರಾಜಕೀಯ ಸುಧಾರಣೆಗೆ ನಾನೇಕೆ ಎಲ್ಲರೂ ಹೋರಾಡಬಾರದು?

ಇಡೀ ದೇಶದ ಅಭಿಪ್ರಾಯವನ್ನು ಅರಿತ ವಿನಹ ಘನ ಸರ್ಕಾರದವರು ಹಲವು ಜನರು ಯಾ ಕೋಮಿನವರು ಮಾಡಿದ ತೀರ್ಮಾನಕ್ಕೆ ಒಪ್ಪಿಗೆ ಕೊಡಬಾರದಾಗಿ ಸರಕಾರವವರನ್ನು ಕೇಳಿಕೊಳ್ಳುವದಾಗಿದೆ.

ಇ. ಪಿ. ಯೂ.

ಮಾನ್ಯ ಮಂತ್ರಿ ಶ್ರೀ. ಯಾಕುಬ್ ಹಸನ್‌ರವರ ಭಾಷಣ.

ಸ್ನೇಹಿತರೇ,

ಈ ಸಂದರ್ಭದಲ್ಲಿ ನೀವು ನನಗೆ ಕೊಟ್ಟ ಅಭೂತಪೂರ್ವ ಸ್ವಾಗತಕ್ಕೆ ನಾನು ಕೃತಜ್ಞನಿರುವೆನು. ದಕ್ಷಿಣದ ಈ ಪ್ರವಾಸವನ್ನು ಕೈಕೊಳ್ಳಬೇಕೆಂದು ನನಗೆ ಪೂರ್ಣ ಮನಸಿತ್ತಾದರೂ ಸಹ ಈ ವರೆಗೆ ಅವನ್ನು ಕೈಕೊಳ್ಳಲು ಸಾಧ್ಯವಾಗಿಲ್ಲ. ಕಾಂಗ್ರೆಸ್ ಭೃತ್ವಿಯಾಡಿಯಲ್ಲಿ ಮಂತ್ರಿಕಾರ ಸ್ವೀಕಾರ ಮಾಡಿದನಂತರ ದಕ್ಷಿಣ ಭಾರತದ ಪ್ರವಾಸ ಕೈಕೊಂಡಾಗ ಕೊಡಗಿಗೆ ಬರಬೇಕೆಂದು ನಿಶ್ಚಯಿಸಿದೆ.

ಈ ಪ್ರಾಂತವು ಚಿಕ್ಕ ದೇಶವಾಗಿದೆ. ಚೀಫ್ ಕಮಿಶನರ ಆಧಿಪತ್ಯದಲ್ಲಿರುವ ಪ್ರಾಂತಗಳಲ್ಲಿ ನ್ಯಾಯವಿಧಾಯಕ ಸಭೆಯನ್ನೊಳಗೊಂಡವು ಇದೊಂದೇ. 1560 ಚದರ ಮೈಲುಗಳಂದ 1,63,000 ಜನರಿಂದ ಕೊಡಗೂಡಿದ ಈ ಪ್ರಾಂತವು ತ್ರಿಚಿನಾಪಲ್ಲಿ ಬೌನಿಸಿಂತಲೂ ಚಿಕ್ಕದಿದೆ. ಇಂತಹ ರಾಜಧಾನಿಯಾದ ಮಡಿಕೇರಿಯಲ್ಲಿ ಬರೀ ೧೦ ಸಾವಿರ ಜನರಿರುವರು. ಇವನ್ನು ಮನ್ಯಾಸಿನ ಹಳ್ಳಿಗೆ ಹೊಲಿಸಬಹುದು. ಸಣ್ಣದೊಂದು ಪ್ರಾಂತವಾದರಿಂದ ಇದರಿಂದ ಒಳ್ಳೆ ಪ್ರಯೋಜನವಿದೆ. ಪೂರ್ಣಕಾಲದಲ್ಲಿ ಸ್ವತಂತ್ರವಾದ ಚಿಕ್ಕ ಚಿಕ್ಕ ಸರಕಾರಗಳಿದ್ದವು. ಉದಾಹರಣೆಗೆ ಹ್ಯಾನೋವರ್ ಗಳನ್ನು ಹೇಳಬಹುದು. ನಿಮ್ಮ ಈ ಚಿಕ್ಕ ಪ್ರಾಂತಕ್ಕೆ ಶ್ರೀ. ಜೋರ್ಡ್, ಮುನಿಸಿಪಾಲಿಟಿಗಳೂ ಇವೆಯೆಂದರೆ ಸೋಜಿಗದ ವಿಷಯ. ದಕ್ಷಿಣ ಕನ್ನಡಕ್ಕೆ ಹೋಗುವ ಮೊದಲು ನಾನು ಮೈಸೂರಿನ ಭೋಗಾಯುತ್ತು ಆಗುಂಬೆ ಜಲಪಾತಗಳನ್ನು ಸಂದರ್ಶಿಸಿದೆನು. ಮೈಸೂರಿನ ಕೆಲ ಭಾಗವೂ, ದಕ್ಷಿಣ ಕನ್ನಡದ ಪಶ್ಚಿಮ ಭಾಗವೂ, ಕೊಡಗೂ ಸಹ ಬೆಟ್ಟಪ್ರಾಂತಗಳಾಗಿವೆ. ಈ ಮೂರು ಪ್ರಾಂತಗಳ ಚಾಪೆಯೂ ಒಂದೇ ಇರುವದು. ದಕ್ಷಿಣಕನ್ನಡದಿಂದಿಗೆ ನಿಮಗೆ ಹೆಚ್ಚಿನ ಬಾಂಧವ್ಯವಿರುವುದು. ಕೊಡಗಿನ ಭವಿಷ್ಯತ್ತಿನ ವಿಚಾರ ನಿಮ್ಮ ಮನೋವೃತ್ತಿ ಹೇಗಿದೆಯೆಂಬ ವಿಷಯವನ್ನು ಮದ್ರಾಸಿನಲ್ಲಿ ನಾವಿರುವಂತೆ ಒಬ್ಬ ಮಂತ್ರಿಯನ್ನು 500 ರೂಪಾಯಿಯಲ್ಲಿ ನೇಮಕ ಮಾಡಿ ಕೊಡಗು ಪ್ರತ್ಯೇಕ ಇರಿಸಿದರೆ ಒಳ್ಳೇದು. ಈ ಚಿಕ್ಕ ಪ್ರಾಂತಕ್ಕೆ ಚೀಫ್ ಕಮಿಶನರ ಅಗತ್ಯವಿಲ್ಲ.

ಕೆಲವರಿಗೆ ಮೂಡ್ಡ ಪ್ರಾಂತಗಳಲ್ಲಿ ಒಂದು ಭಾಗವಾಗಿರಲು ಆಶೆ ಇರಬಹುದು. ಮದ್ರಾಸಿಗೆ ಈಗ ಸೇರಲು ನೀವು ಇಷ್ಟಪಡಲಿಕ್ಕಿಲ್ಲ. ಈ ಎಲ್ಲಾ ವಿಷಯಗಳನ್ನು ತೀರ್ಮಾನಿಸುವ ಅಧಿಕಾರ ನಿಮಗೆ ಉಳಿದಿದೆ.

ಕೊಡಗಿನಲ್ಲಿ ವಿದ್ಯಾ ಪ್ರಸಾರವು ಬೇರೆ ಭಾಗಗಳಿಗಿಂತ ಚೆನ್ನಾಗಿದೆಯೆಂದು ತಿಳಿಯಲು ಸಂತೋಷವೆನಿಸುತ್ತದೆ. ಆದರೆ ಇದರಿಂದಲೇ ತೃಪ್ತರಾಗುವದು ಯೋಗ್ಯವಲ್ಲ. ವಿದ್ಯಾ ಪ್ರಸಾರವು ಯಥೇಚ್ಛವಾಗಿ ಪಡೆಯಬೇಕು.

ನಿಮ್ಮ ನ್ಯಾಯವಿಧಾಯಕ ಸಭೆಯು ಮಿಂಟೊ ಮಾರ್ಲೆ ಸುಧಾರಣೆಯದ್ದು. ಈ ಸುಧಾರಣೆಯು ಒಬ್ಬ ಮಂತ್ರಿಯಿಂದೊಪಗೂಡಿದ ಅಸೆಂಬ್ಲಿಯನ್ನು ಅಪೇಕ್ಷಿಸುತ್ತಿಲ್ಲ. ಭಾರತದ ಅಮೋಘ ಚಳವಳಿಯಲ್ಲಿ ನೀವು ನಮ್ಮ ಖುಲಿನ ಸೇವೆಯನ್ನು ಸಲ್ಲಿಸುತ್ತಿರುವಿರಿ. ನಿಮ್ಮ ಈ ಜಾಗ್ರತಿಯು ಗ್ರಾಮಗಳಲ್ಲಿ ಪಸರಿಸಿದಯೇ ಎಂಬುದು ನನಗೆ ತಿಳಿದಿಲ್ಲ. ಮದ್ರಾಸಿನಲ್ಲಿ ನೀರಿನ ಸರಬರಾಯಿಯ ವಿಚಾರವು ನನ್ನ ಅಧೀನದಲ್ಲಿದ್ದ. ಆಲ್ಲಿಯ ಗ್ರಾಮಸ್ಥರು ಕಾಂಗ್ರೆಸ್ ಕೆಲಸಗಳಲ್ಲಿ ವಿಶ್ವಾಸ ಉಳ್ಳವರೂ, ಅಸಕ್ತಿ ಇರುವವರೂ ಇರುವರು ಅವರಿಗೆ ಮುನಸದಟ್ಟಾಗುವ ವಿಚಾರಗಳೆಂದರೆ ಪಾನ ನಿರೋಧ ಮತ್ತು ವ್ಯಸನಕಾರಿಗಳಾರಿ ಸಾಲ ನಿವಾರಣಾ ಮಸೂದೆ. ಆದ್ದರಿಂದ ಗ್ರಾಮ ಜನರ ಜಾಗ್ರತಿಯೊಗಬೇಕು. ಮುಖಂಡರು ತಮ್ಮ ಬಲವ ಗ್ರಾಮ ಜನರಿಂದ ಒಂದಿರುವದೆಂಬವನ್ನು ಸುರೆಯಬಾರದು.

ನಿಮ್ಮ ಪ್ರಾಂತ್ಯವನ್ನು ವೈಶ್ಯೇಕ ಇಟ್ಟು ಬೇರೆ ಪ್ರಾಂತಗಳಿಗೆ ಒಂದು ಮೊದರಿಯೊಗುವಂತೆ ಮಾಡಬಹುದು. ನಿಮ್ಮ ಆರ್ಥಿಕ ಅಭಿಪ್ರಾಯವನ್ನು ಬಲಪಡಿಸುವ ಕಾರ್ಯಗಳನ್ನು ಕೈಕೊಳ್ಳಬೇಕು. ನಾನು ಇಲ್ಲಿ ನಿಮಗೆ ಬರೀ ಅತಿಥಿಯಾಗಿರುವೆನು. ನಿಮಗೆ ಸೌಲಭ್ಯಗಳನ್ನು ಒದಗಿಸಿಕೊಡುವೆನೆಂದು ನಾನು ಭರವಸೆ ಕೊಡಲಾಗುವುದಿಲ್ಲ. ಯಾಕೆಂದರೆ ಕೊಡಗು ನಮ್ಮ ವ್ಯವಹಾರ ಕ್ಷೇತ್ರದಲ್ಲಿಹುದಿಲ್ಲ. ಆದರೂ ನಿಮಗೆ ಅಗತ್ಯ ಬೇಕಾದ ಸಹಾಯವನ್ನೀಯುವೆನೆಂಬ ಭರವಸೆ ಕೊಡುತ್ತೇನೆ.

ದೇವದತ್ತ.

ಸಾಮಾಜಿಕ ಕಾದಂಬರಿ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಅಧ್ಯಾಯ ೧೩.

'ನಾಡ ಬಡವರ ಸೂತಂತಿರಲಿ, ವಿದ್ಯಾವಂತರೂ, ವಿದ್ಯೆರ್ಯವಂತರೂ ಆದ ತಂದೆ ತಾಯಿಗಳೂ ಸಹ ತಾವು ತಮ್ಮ ಮಕ್ಕಳ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳನ್ನು ಸರಿಯಾಗಿ ಮಾಡುವುದಿಲ್ಲ. ಎಳೆ ಮಕ್ಕಳಿಗೆ ಬೇಕಾದ ತಿಂಡಿ ಪದಾರ್ಥಗಳೇನೂ ಮನೆಯಲ್ಲಿ ಬೇಕಾದಷ್ಟು ಇದ್ದು, ಅವುಗಳನ್ನು ಸಮಯಕ್ಕೆ ಸರಿಯಾಗಿ ಮಕ್ಕಳಿಗೆ ಕೊಡಲು ತಕ್ಕಷ್ಟು ಆಳುಗಳು ಇರುವಾಗಲಿಂದ ಆ ಮಕ್ಕಳಿಗೆ ಉಪಚಾರಗಳಲ್ಲಿ ಏನೂಂದೂ ಕೊರತೆ ಇರುವುದಿಲ್ಲ. ಅದರೆ ಈ ತಂದೆ ತಾಯಿಗಳು ತನ್ನ ವಿದ್ಯೆರ್ಯಕ್ಕೂ, ಯೋಗ್ಯತೆಗೂ ಸರಿಯಾದ ರೀತಿಯಲ್ಲಿ ಸ್ವಸುಖಾಭಿಲಾಷೆಯನ್ನು ಮುಗ್ಗರಾಗಿ, ಮುಂದಕ್ಕೆ ಆಭಿವೃದ್ಧಿಯೋಗತಕ್ಕ ತಮ್ಮ ಮಕ್ಕಳನ್ನು ಸರಿಯಾದ ರೀತಿಯಲ್ಲಿ ತರಬೇತು ನೋಡುವುದಿಲ್ಲ. ವಾಡಿಕೆಯ ಮೇರೆ ಅವರನ್ನು ಏಯಸ್ಸು ಬಂದೊಡನೆ ವಿದ್ಯಾರ್ಜನೆಗೆ ಕಳುಹಿಸುತ್ತಾರೆ. ಅದರ ಯಾವ ರೀತಿಯಲ್ಲಿ ಅವರಿಗೆ ವಿದ್ಯೆ ಕಲಿಸ ಬೇಕೆಂಬ ತೊಂದರೆಯನ್ನು ಅವರು ಸ್ವಲ್ಪವೂ ತೆಗೆದುಕೊಳ್ಳುವುದಲ್ಲ. ನಮ್ಮ ಪೂರ್ವಜರು, ಸ್ತ್ರೀಯು ಗರ್ಭಿಣಿಯಾಗಿರುವಾಗಲೇ ನೀರ ಪುರುಷರ ಸಚ್ಚರಿತ್ರೆಗಳನ್ನು ಕಥಾ ರೂಪವಲ್ಲಿ ಜೋಳುತ್ತಿದ್ದರು. ಮಗುವು ಹುಟ್ಟಿ ಸ್ವಲ್ಪ ದೊಡ್ಡವನಾದ ಕೂಡಲೇ ಲೋಕದಲ್ಲಿ ಮಹತ್ತರವಾದ ಕೆಲಸಗಳನ್ನು ಸಾಧಿಸಿ, ಶಾಶ್ವತವಾದ ಕೀರ್ತಿಯನ್ನು ಸ್ಥಾಪಿಸಿದ ಮಹಾ ಸ್ತ್ರೀ ಪುರುಷರ ಚರಿತ್ರೆಗಳನ್ನು ಅವರಿಗೆ ಯಾವಾಗಲೂ ಇಂಪಾದ ರೀತಿಯಲ್ಲಿ ಹೇಳುತ್ತಾ ಆ ಎಳೆ ಮಕ್ಕಳ ಮನಸ್ಸಿನಲ್ಲಿ ಕೀರ್ತಿವಂತರಾಗ ಬೇಕೆಂಬ ಮಹಾ ಕಾಂಕ್ಷೆಯನ್ನು ಹುಟ್ಟಿಸುತ್ತಿದ್ದರು. ಈ ತರಹದ ಚಿತ್ಕಂದನ ತರಬೇತೇ ಶಿವಾಜಿ, ಜೂಲಿಯಸ್ ಸೀಜರ್, ಹೆನಿಬಾಲ್ ಮೊದಲಾದ ಮಹಾನೀಯರನ್ನು ಲೋಕೋತ್ತರವಾದ ಯಸಸ್ವಿಗಳಾಗಿ ಮಾಡಿದ್ದು.'

'ಈಗಿನ ಕಾಲದಲ್ಲಿ ಅನೇಕ ವಿದ್ಯೆರ್ಯವಂತರಾದ ತಾಯಿ ತಂದೆಗಳು ತಮ್ಮ ಮಕ್ಕಳನ್ನು ತಮ್ಮ ಸ್ವಂತ ಸುಖಾನುಭವಗಳಲ್ಲಿ ಅತ್ತ ಬರತಕ್ಕ ಕಂಟಕಿಗಳೆಂದು ಭಾವಿಸಿ ತಮ್ಮ ಗೊಡವೆಯನ್ನು ತಪ್ಪಿಸಲು ವಿದ್ಯಾರ್ಜನೆಯ ನೆಪದಿಂದ ದೂರದ ಶಾಲೆಗಳಿಗೆ ಕಳುಹಿಸಿಬಿಡುತ್ತಾರೆ. ಕೆಲವರು ತಮ್ಮ ವಿದ್ವರ್ಯದ ಮಹತ್ವವನ್ನು ಬಿಚ್ಚಿರಂಗಪಡಿಸುವ ಕಾಂಕ್ಷೆಯಿಂದಲೂ, ತಮ್ಮ ಮಕ್ಕಳನ್ನು ಎಳೆ ವಯಸ್ಸಿನಲ್ಲೇ ದೂರದ ಶಾಲೆಗಳಿಗೆ ಕಳುಹಿಸಿಬಿಡುವುದು ಉಂಟು.

'ಅಯ್ಯಾ ಪ್ರಸಾದರೇ, ಲೋಕದಲ್ಲಿ ಎಳೆಯ ವಯಸ್ಸಿನಲ್ಲಿ ಮಕ್ಕಳಿಗೆ ವಿದ್ಯೆಯನ್ನು ಅರ್ಜಿಸುವರೆಂದರೆ ಎಳೆ ದೋಣಿಗೆ ಪಥ ಕುಡಿಯುವುದಲ್ಲಿ ಎಷ್ಟು ಪ್ರೀತಿಯೂ, ಉತ್ಸಾಹವೂ ತಿರುತ್ತದೋ ಅಷ್ಟೇ ತಿರುತ್ತದೆ. ಅದರ ಬದಲು ಲೋಕದ ಅವಸ್ಥೆಯನ್ನೇ ತಿಳಿಯದ ಆ ಎಳೆ ಮಕ್ಕಳಿಗೆ ಸಂಚೀಂವ್ಯಗಳಿಗೆ ಸುಖ ಕೊಡತಕ್ಕ ವಿಷಯ ಸುಖಗಳು ಬಹು ಮೋಹಕವಾಗಿಯೂ, ಮನೋರಂಜಕವಾಗಿಯೂ ತಾಯುತ್ತದೆ.'

'ಮೋಹವನ್ನು ಮಕ್ಕಳ ವಿಷಯದಲ್ಲಿ ಹಿಗೆಗೆಡುವುದೇನಾದರೆ ತಾಯಿ ತಂದೆಗಳು ತಮ್ಮ ಮಕ್ಕಳಿಗೆ ನಿಜವಾದ ಸುಖವನ್ನು ಕೊಡಿಸಲಾರರು. ಎಂಥಾ 'ಗುರು' ವಿಗೇ ಆಗಲಿ ಮೇಲಾಧಿಕಾರಿಗಳಿಗೇ ಆಗಲೀ ಇತರರ ಮಕ್ಕಳ ವಿಷಯದಲ್ಲಿ ಶಾಕನ್ನು ತೊಂದರೆ ತೆಗೆದುಕೊಳ್ಳಲೇಕೆಂಬ ನಿಗನಿರುವುದಲ್ಲ. ತಾವು ತೆಗೆದುಕೊಳ್ಳುವ ಸಂಬಳದ ಋಣಕ್ಕಾಗಿಯೂ, ಮೇಲಧಿಕಾರಿಗಳ ಹೆದರಿಕೆಯಿಂದಲೂ, ಅವರು ಖಾಯಿಲೆಗೆ ಸರಿಯಾಗಿ ವಾಡಿಕೆಯೊಡ ತೊಂದರೆಯನ್ನು ತೆಗೆದುಕೊಳ್ಳುತ್ತಾರೆ. ಅದರ ಮೇಲೂ ಪೂರ್ವಪರ ಯೋಚನೆ ಇಲ್ಲದ ಈ ಎಳೆ ಮಕ್ಕಳು ತಮ್ಮ ತಂದೆಗಳ ವಿದ್ವರ್ಯ ಗರ್ವದಿಂದಲೂ, ಮರ್ನಡತೆಯ ಸಂಗಾತಿಗಳ ಸಹವಾಸದಿಂದಲೂ, ಈ ಅಧಿಕಾರಿಗಳ ಅಪ್ಪಣೆಯನ್ನು ಉಲ್ಲಂಘಿಸಿ ನಡೆಯುವವರಲ್ಲೇ ಅತ್ಯಂತ ಹರ್ಷವುಳ್ಳವರಾಗಿರುತ್ತಾರೆ.'

'ಹೀಗಿರುವಾಗ್ಗೆ ಲೋಕವ್ಯವಹಾರವನ್ನು ತಿಳಿಯದ ಪಣ್ಣ ಮಕ್ಕಳನ್ನು ದೂರದ ನಗರಗಳಲ್ಲಿ ನಡತಕ್ಕ ಶಾಲೆಗಳಿಗೆ ವಿದ್ಯಾರ್ಜನೆಗೆ ಕಳುಹಿಸುವುದು. ತಂದೆ ತಾಯಿಗಳು ಅವರ ಪರಮ ರಕ್ಷಣೆಗೇ ಹೊರತು ಹಿತ ಚಿಂತಕರು ಎಂದೂ ಆಗಲಾರರು. ಆ ಪುಟ್ಟ ರಸರಹಿತವಾದ ವಿದ್ಯೆಯನ್ನು ಗಳಿಸಲು ಎಳೆ ವಯಸ್ಸಿನಲ್ಲಿ ಯೂಪ ವಿದ್ಯಾರ್ಥಿಗೂ ಮನಸ್ಸು ಇರುವುದಿಲ್ಲ. ತಂದೆ ತಾಯಿಗಳ ಸ್ನೇಹಿಂದಲೂ, ಜಾಗರೂಕತೆಯಿಂದಲೂ ಕಲಿಯಬೇಕೇ ಹೊರತು ವಿದ್ಯೆಯಲ್ಲಿ ಆಧಿಕ್ಯತೆಯಿಂದ ಕಲಿಯತಕ್ಕ ಮೆಚ್ಚಿಕೆಯು ಬಹಳ ವಿರಳವು. ಅಂತಿರುವಾಗ್ಗೆ ತಂದೆ ತಾಯಿಗಳಿಂದ ಬಹು ದೂರದಲ್ಲಿದ್ದು, ಬೋರ್ಡಿಂಗ್ ಆಧಿಕಾರಿಗಳ ಕೈ ಕೆಳಗಿರತಕ್ಕ ಎಳೆಯ ವಯಸ್ಕರಾಗಿ ಲೋಕ ಸ್ವವಹಾರವನ್ನು ತಿಳಿಯದ ವಿದ್ಯಾರ್ಥಿಗಳ ಹೆದರಿಕೆ ಇಲ್ಲ. ತಂದೆ ತಾಯಿಗಳಿಗೆ ತಾವು ಮಾಡುವ ಕೆಲಸವು ತಿಳಿಯುವ ಹಾಗಿಲ್ಲ. ಮುಷ್ಟ ಮಾತುಗರ ಸಹವಾಸ. ಕೇಳದಮ್ಮ ಹಣ ಮನೆಯಿಂದ ಬರುತ್ತಿದೆ. ತಾವು ಇರುವ ನಗರದಲ್ಲಿ ಸಂಚೀರ್ಯಗಳಿಗೆ ಮೋಹಕ್ಕಾದ ಸುಖವನ್ನು ಕೊಡತಕ್ಕ ನೂರಾರು ವಿಷಯಸುಖಗಳಿಂದ ತಿರಸರಿ ಅರ್ಧ ಭಾಗವನ್ನು ಈ ಮಗು ದಿನ ಸಲುವಾಗಿ ಕಳೆಯಬೇಕು. ಇನ್ನು ಮೊದಲಿನ ಹಾಗೆ ಅತ್ಯ ಸುಖದಲ್ಲಿ ಸಂಪೂರ್ಣ ಮುಳುಗಿರಲು ಆಗುವಷ್ಟಿ. ಹಾಗೆ ತಮ್ಮ ಅತ್ಯ ಸುಖದಲ್ಲೇ ಮುಗ್ಗರಾಗಿ ಬೇಕೆಂಬ ಕಾಂಕ್ಷೆಯು ಆವರಿಗಿದ್ದ ಪಕ್ಷದಲ್ಲಿ ಅವರು ಮಕ್ಕಳನ್ನು ಹುಡೆಯಲು ತಿರಕ್ಕ ಸಾಧನವನ್ನು ಕೈಕೊಳ್ಳಬೇಕು. ಅದರ ಬದಲು ತಾವು ಹುಟ್ಟಿಸುವವರಾದರೆ ಆ ಮಗುವು ವಿದ್ಯಾಬುದ್ಧಿ ಕಲಿತು ಲೋಕವ್ಯವಹಾರವನ್ನು ಅರಿಯುವ ವರೆಗೆ ತಮ್ಮ ಸ್ವಂತ ಹತ್ತಿರವೇ ಇಟ್ಟು, ಸಲಹಿ, ಆ ನೋಲೆ ಅವನನ್ನು ಹೊರಗೆ ಕಳುಹಿಸಬೇಕು.

'ಪ್ರಸಾದರೇ ನಾನಿಷ್ಟೆಲ್ಲಾ ಹೇಳುತ್ತಿರಲಿಲ್ಲ. ಮೊನ್ನೆ ದಿವಸ ನಾನು ರಂಜಧಾನಿಗೆ ಹೋಗಿ, ನಿನ್ನೆ ಮರುಳಿ ಬಂದೆನು. ನಿಮ್ಮ ಮಗನನ್ನು ಕಾಣಲಿಲ್ಲವಾ ನರೂ ಅವನ ನಿಪದು ಹೆಡ್ ಮಾಸ್ಟರರು ಹೀಗೆ ಹೇಳಿದರು:-'ಈ ಸರ್ವವೂ ಅವನಿಗೆ ಸೆಲೆಕ್ಷನ್ ಸಿಕ್ಕಿರುವುದಿಲ್ಲವಂತೆ. ಅವಕ್ಕಾಗಿ ಲವನು ಕಳೆದ ಏಕ್ಸಾವಾರ ರಾತ್ರಿ ಗಣಿತ ಶಿಕ್ಷಕರ ಮನೆಗೆ ಗುಸ್ತುವಾಗಿ ಹೋಗಿ ಆವರನ್ನು ಹೊಡೆಯಲು ಹೋದನಂತೆ.' (ಪ್ರಸಾದರ ಕಣ್ಣುಗಳಿಂದ ಅಶ್ರು ಜಲವು ಹನಿ ಹನಿಯಾಗಿ ಸುರಿಯಲಾರಂಭಿಸಿತು) ಈ ರಹಸ್ಯವನ್ನು ಮೊದಲೇ ತಿಳಿದಿದ್ದ ಏಸ್ಟರರು ಪೋಲೀಸ್ ಸಹಾಯದಿಂದ ಅವನನ್ನು ಕೈದು ಮಾಡಿಸಿದರು. ವಿದ್ಯಾರ್ಥಿಯಾಯಿರಿಂದ ಮಾರಣೆ ದಿನದ ಆವೇಶವನ್ನು ಹೆ. ಮಾಸ್ಟರುಗಳ ನಡಕೊಳ್ಳಿಸಲು ಅನಾಮ್ಯ ಅವನನ್ನು ಶಾಲೆಯಿಂದ ಹೊರಗಾಕಿಯಿರು.

'ಆಯ್ಯೋ ನನ್ನ ಆಪ್ಯನ್ನವೇ! ಹುಡುಗನು ರಂಜಧಾನಿಯಲ್ಲಾದರೂ ಇರುವನೇ? ತನಗುಂಟಾದ ಅವಮರ್ಯಾದ ಗೋಸ್ಕರ ಏನಾದರೂ ಆತ್ಮಕ್ಕೆ ಕುಂದುಕ ತಂದುಕೊಳ್ಳಲ್ಲಾ! ದೇವರೇ! ಅವನನ್ನೂ ನನ್ನನ್ನು ಮನೆ ಸೇರಿಸು. ಅವನಿಗೆ ವಿದ್ಯೆಯೇ ಬೇಡ. ಮನೆಯಲ್ಲಿರುವುದೇ ಸಾಕು. ನಾನೇತಕ್ಕೆ ಅವನನ್ನು ಕಳುಹಿಸಿದನು. ಆಯ್ಯೋ, ಈಗ ಏನು ಮಾಡಲಿ?' ಎಂದು ಪ್ರಸಾದರು ಅಳುತ್ತಾ ಕೇಳಿದರು.

'ಆ ನಾಚಿಕೆಯಿಂದ ಇಲ್ಲಿ ಮುಖ ತೋರಿಸುವುದು ಹೇಗೆಂದು ಯೋಚಿಸಿಯೇ ಅವನು ಎಲ್ಲಿಯಾದರೂ ಓಡಿ ಹೋಗಲು ಈ ರೀತಿ ಉಪಾಯದ ಪತ್ರವನ್ನು ಬರೆದಿರುವನು. ನೀವು ಅವನು ಬರೆದ ಹಾಗೆ ಹಣ ಕಳುಹಿಸಬೇಡಿ. ನಾನು ಆವನನ್ನು ಉಪಾಯದಿಂದ ಮನೆಗೆ ಕರತರುತ್ತೇನೆ. 'ನಿಮ್ಮ ಮೇಲೆ ಅಕಸ್ಮಾತ್ತಾಗಿ ಮೋಟಾರು ಬಂಡಿಯು ಬಿದ್ದು ಪ್ರಾಣ ಉಳಿಯುವ ಭರವಸೆ ಇಲ್ಲ. ಅಮರಿಂದ ಪಡನೆ ನೀನು ಹೊರಡು' ಎಂಬುದಾಗಿ ಟೆಲಿಗ್ರಾಂ ಮಾಡಿ ದಾರಿ ಖರ್ಚಿಗೆ ಸಾಕಷ್ಟು ಹಣ ಕಳುಹಿಸುವುದು. ಎಂಬುದಾಗಿ ಆ ತಿಥಿಯು ಹೇಳಿದನು.

ಧನವಂತ-'ಹೇಗಾದರೂ ಸರಿಯೆ, ಆ ನನ್ನೊಮ್ಮೆ ಜೀವ ಸಹಿತ ನನ್ನ ಮನೆಗೆ ಮುಟ್ಟಿಸಿದರೆ ಸಾಕು.'

ಇಬ್ಬರೂ ಎದ್ದು ಪೋಸ್ಟಾಫೀಸಿಗೆ ಹೊರಟು ಹೋದರು.

[ಸೀಸ.]

ಎಂಬ್ರೋಸಿಯೊ,

ಸಾವಿರಾರು ಹೆಂಗಸರ ಕಾಯಿಲೆಗಳನ್ನು ನಿವಾರಿಸಿದೆ.

ಹೆಸರುವಾಸಿಯೊಪ ಡಾಕ್ಟರುಗಳಿಂದಲೂ, ಉಪಯೋಗಿಸಿ ತೃಪ್ತಿಗೊಂಡವರಿಂದಲೂ ಎಂಬ್ರೋಸಿಯೊವು ಹೆಂಗಸರ ರೋಗಗಳಿಗೆ ಹೆಸರುಗೊಂಡಿದೆ.

ಬಾಟ್ಲಿಗೆ ರೂ. 2-0-0.
ಸಣ್ಣ ಬಾಟ್ಲಿಗೆ ಆ. 0-15-0.

ಸೋಲ್ ಏಜೆಂಟ್-ವಿ. ರಾಮಕೃಷ್ಣ ಪೈ, ಮೇಂಬೈ 2.

4

ನವೆಂಬರ್ ತಾರೀಕು 13 ನೇ ಭಾನುವಾರ ಸಂಘದ ಮಹಾ ಸಭೆಯಲ್ಲಿ ಸಂಘದ ವಾರ್ಷಿಕ ವರದಿಯನ್ನು ಕಾರ್ಯದರ್ಶಿಯವರು ಓದಿದ್ದರ ಸಂಕ್ಷೇಪ ವಿವರ.

ಮಡಿಕೇರಿಯ ವೇದಾಂತ ಸಂಘವು ಸ್ಥಾಪಿತವಾಗಿ 22 ವರ್ಷಗಳು ಕಳೆದು ಈಗ ಅದು 23 ನೇ ವರ್ಷಕ್ಕೆ ನ್ಯಸಹಾರವನ್ನು ನಡೆಸುತ್ತಾ ಇದ್ದ ಇದರ ಆಡಳಿತವು ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು ಒಬ್ಬ ಕಾರ್ಯದರ್ಶಿಯವರು ಒಬ್ಬ ಖಜಾನ್ಚಿಯವರು ಮತ್ತು ನಾಲ್ವರು ಸದಸ್ಯರಿಂದೊಡಗೂಡಿನ್ವ ಕಾರ್ಯಕಾರ್ಯಕಾರಿ ಮಂಡಲಿಯವರಿಂದ ನಡೆಯುತ್ತಾ ಇದೆ ಶ್ರೀಮಾನ್ ಸಿ ಯಂ ದೇವಯ್ಯನವರು ಸಂಘದ ಆಧ್ಯಕ್ಷಸ್ಥಾನಕ್ಕೆ ಮಹಾಸಭೆಯಿಂದ ಆರಿಸಲ್ಪಟ್ಟಿರು. ಈ ಸಂಘಕ್ಕೆ 160 ಸದಸ್ಯರಿದ್ದಾರೆ. ಕಾರ್ಯಕಾರಿ ಮಂಡಲಿಯವರು 1937 ನೇ ಆಗಸ್ಟ್ ತಿಂಗಳಿಂದ 1938 ನೇ ಅಕ್ಟೋಬರ್ ಆಖೈರಿಗೆ ಒಂಬತ್ತು ಸಭೆ ಜರಗಿಸಿದರು.

ಸಂಘದ ಭಂಡವಾಳ.

ವರದಿ ವರ್ಷಕ್ಕೆ ಜಮಾ	1041-7-6
ಖರ್ಚು	1082-9-8
ಜಮೆಕ್ಕಿಂತ ಹೆಚ್ಚು ಖರ್ಚು	41-2-2
ಸಂಘಕ್ಕೆ ನಿಂತಿರುವ ಸಾಲ	100-0-0
	141-2-2
ಸಂಘಕ್ಕೆ ಪೊನ್ನೋಟು ಮೇಲೆ ಬರಬೇಕಾದ ಹಣ	100-0-0

ಪುಸ್ತಕ ಭಂಡಾರ.

ಸಂಘದ ಪುಸ್ತಕ ಭಂಡಾರದಲ್ಲಿ 500 ಪುಸ್ತಕಗಳ ಮೇಲ್ಪಟ್ಟು ಇನ್ನೆ ಪುಸ್ತಕ ಭಂಡಾರಕ್ಕೆ ಕೊಡಗು ಕಮಿಷನರ್ ಸಾಹೇಬರು ಡಿಸ್ಟ್ರಿಕ್ಟ್ ಫಂಡಿನಿಂದ 50 ರೂಪಾಯಿಗಳನ್ನು ಉಚಿತಾರ್ಥವಾಗಿ ಕೊಟ್ಟರು

1 ಶ್ರೀಮತಿ ಕೋದಾಂಡ ಮಿಸಸ್ ಡಾಕ್ಟರ್ ನಂಜಪ್ಪನವರು ಭಗವದ್ಗೀತಾ ರಾಮಾಯಣ ಮತ್ತು ಮಹಾ ಭಾರತದ 4 ಪರ್ವಗಳನ್ನು ದಾನಮಾಡಿದರು.

2. ಶ್ರೀಮಾನ್ ಕೇಶವದಾಸರು ಕರ್ನಾಟಕ ಭಕ್ತವಿಜಯವೆಂಬ ಪುಸ್ತಕವನ್ನು ದಾನಮಾಡಿದರು.

3 ಶ್ರೀಮಾನ್ ಕರ್ನಿಕ ಎ ಸಿ ಸುಬ್ಬಯ್ಯನವರು ಗೀತೆಯ ಗೂಢಾರ್ಥದೀಪಿಕೆ ಎಂಬ 2 ದೊಡ್ಡ ಪುಸ್ತಕಗಳನ್ನು ದಾನ ಮಾಡಿದರು.

ಕಾರ್ಯಕಲಾಪಗಳು.

ಪ್ರತಿ ಶನಿವಾರ ಸಂಘದ ಮಂದಿರದಲ್ಲಿ ಭಜನೆ ನಡೆಯುತ್ತಿತ್ತು.

ಶ್ರೀರಾಮಕೃಷ್ಣರ, ಸ್ವಾಮಿ ವಿವೇಕಾನಂದರ ಮತ್ತಾಚಾರ್ಯರ ಸಾಧುಸಂತರ ಜಯಂತಿ ಉತ್ಸವಗಳು ಜರಗಿದವು. ಅಲ್ಲದೆ ನವರಾತ್ರಿ ಉತ್ಸವಗಳು ನಡೆದವು. ಉತ್ಸವಾದಿಗಳಲ್ಲಿ ಹಿಂದೂ ಧರ್ಮದ ವಿಷಯವಾಗಿ ಉಪನ್ಯಾಸಾದಿಗಳು ಮತ್ತು ಹರಿಕಥೆಗಳು ಸಹ ಜರಿದವು. ಶ್ರೀ ಸೀತಾಜಯಂತಿ ಉತ್ಸವಾದಿಗಳಲ್ಲಿ ಭಗವದ್ಗೀತಾ ಪಠನ ಸ್ಪರ್ಧೆ ನಡೆದು ಆದರಲ್ಲಿ ತೀರ್ಪಡೆ ಹೊಂದಿದವರಿಗೆ ಪುಸ್ತಕಗಳನ್ನು ಇನಾಮಾಗಿ ಹಂಚಲ್ಪಟ್ಟವು. ವಾರ್ಷಿಕ ಮೂರಾವರ್ತಿ ಶ್ರೀಮಾನ್ ಓಡ್ಲುಮನೆ ಆತ್ಮಾರಾಮಶಾಸ್ತ್ರಿಗಳು ಸಂಘದ ಮಂದಿರದಲ್ಲಿ ಭಾಗವತ ಸ್ವನಚನ ಮಾಡುತ್ತಿದ್ದಾರೆ.

ಸಂಘಕ್ಕೆ ಪ್ರೋತ್ಸಾಹ.

ಶ್ರೀಮಾನ್ ಮಂಡೇಪಂಡ ಸುಬ್ಬಯ್ಯನವರು 50 ರೂಪಾಯಿ ಕ್ರಯ ಬಾಳುವ ಒಂದು ಹೊಸ ಗಡಿಯಾರವನ್ನು ದಾನಮಾಡಿರುತ್ತಾರೆ ಶ್ರೀಮತಿ ಚೇಂದ್ರಿಮಾಡ ಬೊಳ್ಳನವರು ಒಂದು ಬೆಳ್ಳಿಯ ಕುಂಕುಮ ಡಬ್ಬಿಯನ್ನು ದಾನಮಾಡಿರುತ್ತಾರೆ

ಶ್ರೀಮತಿ ಕುಟ್ಟೇಟಿರ ಮಿಸಸ್ ಕಾರ್ಯಪ್ಪನವರು ಒಂದು ಹೊಸ ಬೆಂಚನ್ನು ದಾನಮಾಡಿರುತ್ತಾರೆ

ಶ್ರೀಮಾನ್ ಮುಕ್ಕಾಟಿರ ಅಪ್ಪಣ್ಣನವರು ಸಂಘಕ್ಕೆ ಒಂದು ಬಾವಿಯನ್ನು ಕೋಡಿಸಿ ಕೊಡುವದಾಗಿ ಕಳೆದ ಸಂತ್ಸರವೇ ವಾಗ್ದಾನ ಮಾಡಿರುತ್ತಾರೆ ಆ ಕೆಲಸವನ್ನು ಈ ಬರುವ ಬೇಸಿಗೆಯಲ್ಲಿ ಮಾಡಿಕೊಡುವದಾಗಿ ವಾಗ್ದಾನ ಮಾಡಿರುತ್ತಾರೆ.

ಈ ಸಂಸ್ಥೆಯ ಮುಂದಿನ ಕಾರ್ಯಕ್ರಮ.

ಸನಾತನ ಧರ್ಮದ ಆಚರಣೆ, ಪ್ರಚಾರ ಮತ್ತು ಏಳಿಗೆ ಕಾರ್ಯದಲ್ಲಿ ಸರ್ವರೂ ಶ್ರಮ ಪಹಿಸಬೇಕಾಗಿದೆ. ಆದ್ದರಿಯುಕ್ತ ಸಂಘದ ಪುಸ್ತಕ ಭಂಡಾರವನ್ನು ಅಭಿವೃದ್ಧಿಗೊಳಿಸಬೇಕು ಸಂಘವು ಒಂದು ಮಾಸ ಪತ್ರಿಕೆಯನ್ನು ಹೊರಡಿಸ ಬೇಕು. ಈ ಕಾರ್ಯಕ್ಕೆ ಒಂದು ಸಣ್ಣ ಭಾಪಪಖಾನೆಯು ಏರ್ಪಾಡಾಗಬೇಕು

ಹರಿಕಥೆ–ಸಂಗೀತ ನಿಧಿಯನ್ನು ಏರ್ಪಡಿಸಿ ಸಿದ್ಯಾನಂತರಾದ ಹರಿದಾಸರಿಂದಲೂ, ಸಂಗೀತ ವಿದ್ವಾನರಿಂದಲೂ ಆತ್ಮೋನ್ನತಿಯ ವೃದ್ಧಿಯನ್ನೂ ಹೆಚ್ಚಿಸಬೇಕು.

ಸಂಘದ ಮಂದಿರವು ಸಣ್ಣದಾದರಿಂದ ಉತ್ಸವಾದಿಗಳಲ್ಲಿ ಸಭೆ ಸೇರಲು ಜನರಿಗೆ ಅನಾನುಕೂಲವಾಗಿರುವದರಿಂದ ಅನನ್ನು ಬಡಾಯಿಸಬೇಕು ಇನೇ ಮೊದಲಾದ ಸೂಚನೆಗಳನ್ನು ಕೊಟ್ಟು ಸಂಘದ ಸೇವೆಯಲ್ಲಿ ಕಾರ್ಯದರ್ಶಿಯವರಿಗೆ ಸಹಾಯ ಮಾಡಿದ ಸರ್ವರಿಗೂ ಮತ್ತು ಸಂಘಕ್ಕೆ ಗಡಿಯಾರ ಪುಸ್ತಕ ವಗೈರೆಗಳನ್ನು ದಾನ ಮಾಡಿದವರಿಗೂ ಮತ್ತು ಶ್ರೀ ಮಾನ್ ಓಡ್ಲುಮನೆ ಆತ್ಮಾರಾಮ ಶಾಸ್ತ್ರಿಗಳ ಭಾಗವತ ಪ್ರವಚನಾದಿ ಧರ್ಮಕಾರ್ಯಗಳಿಗೂ ನಾವು ಚಿರಋಣಿಗಳಾಗಿರಬೇಕೆಂಬದಾಗಿಯೂ ಮತ್ತು ಅವರೆಲ್ಲರಿಗೂ ತನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿ ಇನ್ನು ಮುಂದಕ್ಕೂ ಸಂಘದ ಸೇವೆಯನ್ನು ನೆರವೇರಿಸಲು ನಪಾಗೆಲ್ಲರಿಗೂ ಶ್ರೀ ರಾಮಕೃಷ್ಣ ಪರಮಹಂಸರು ಶಕ್ತಿಯನ್ನು ಆ ಸ್ವೋನ್ಯೇ ವ್ರೇಮಭಾವನನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿ ಕಾರ್ಯದರ್ಶಿಯವರು ತನ್ನ ವರದಿಯನ್ನು ಮುಕ್ತಾಯಗೊಳಿಸಿದರು.

ತದನಂತರ ಮಹಾ ಸಭೆಯವರು ದಾನಾದಿಗಳಿಂದ ಸಂಘಕ್ಕೆ ಪ್ರೋತ್ಸಾಹ ಕೊಟ್ಟ ಎಲ್ಲಾ ಮಹನೀಯರಿಗೆ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಆವರಿಗೆ ಪತ್ರ ಮೂಲಕ ಅರ್ಪಿಸಬೇಕಾಗಿ ತೀರ್ಮಾನ ಮಾಡಿದರು.

ಪುಸ್ತಕ ಭಂಡಾರಕ್ಕೆ ದ್ರವ್ಯ ಸಹಾಯ ಮಾಡಬೇಕಾಗಿ ತೀರ್ಮಾನಮಾಡಿದರು. ಕಾರ್ಯದರ್ಶಿಯರ ಇತರ ಸೂಚನೆಗಳನ್ನು ಮುಂದಕ್ಕೆ ಆಲೋಚಿಸುವ ಹಾಗೆ ತೀರ್ಮಾನಮಾಡಿದರು.

ಸಂಘದ ಸದಸ್ಯರೆಲ್ಲರೂ ತಮ್ಮ ಚಂದಾ ಪೂರಬಲಗನ್ನು ಮತ್ತು ಬಾಕಿ ನಿಂತಿರುವ ಚಂದಾ ಮೊಲಗನ್ನು ದಯಪಿಟ್ಟು ಜಾಗ್ರತೆಯೊಗಿ ಪಾವತಿಮಾಡಬೇಕಾಗಿ ತೀರ್ಮಾನಮಾಡಿದರು.

ಮುಂದಿನ ಸಂವತ್ಸರದ ಆಡಳಿತಕ್ಕಾಗಿ ಈ ಕೆಳಗಿನ ಕಾರ್ಯಕಾರಿ ಮಂಡಳಿಯನ್ನು ನೇಮಕಮಾಡಿದರು. ಶ್ರೀ ಸಿ. ಯಂ. ದೇವಯ್ಯನವರನ್ನು ಆಧ್ಯಕ್ಷರನ್ನಾಗಿಯೂ, ಶ್ರೀ ಸಿ. ಯಂ. ರಾಮಣಯರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಜಿ. ಸುಬ್ಬಯ್ಯನವರನ್ನು ಗೌರವ ಕಾರ್ಯದರ್ಶಿಯನ್ನಾಗಿಯೂ ಮತ್ತು ಕಾರ್ಯಕಾರಿ ಮಂಡಳಿಯವರಾಗಿ ಶ್ರೀ ಗಳಾದ ಯಂ. ಎಸ್. ಅನಂತಪದ್ಮನಾಭರಾಯರು, ಎಂ. ಎಸ್. ಮಾದಪ್ಪನವರು, ಬಿ ಎಸ್. ಶ್ರೀನಿವಾಸಮೂರ್ತಿಯವರು, ಬಿ. ಕೆ. ಸುಬ್ಬರಾಯರು ಮತ್ತು ಕೆ. ಯಂ. ಬೆಳ್ಯಪ್ಪನವರನ್ನು ಚುನಾಯಿಸಲಾಯಿತು.

ನಂತರ ಆಧ್ಯಕ್ಷರಿಗೂ, ಸಂಘದ ಸೇವೆಯಲ್ಲಿ ಭಾಗ ವಹಿಸಿದ ಎಲ್ಲಾ ಮಹನೀಯರಿಗೂ ವಂದನಾರ್ಪಣಾನಂತರ ಸಭೆಯು ಮುಕ್ತಾಯ ವಾಯಿತು.

ಜಿ. ಸುಬ್ಬಯ್ಯ,
(ಗೌ. ಕಾರ್ಯದರ್ಶಿ)

—೦೦—

ಧಾತು ಪುಷ್ಟಿ ಲೇಹ.

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ನ್ಪಷ್ಟಾರಸ್ಪ, ರವೀರವ ಉಷ್ಣತೆ, ಧಾತು ಮಾತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಸುಲಬತ್ವತೆ, ಬಳಲ್ಜರ, ಅಶಕ್ತತೆ ಇವುಗಳ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯಪೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ 2—8—0.

ಮಲೇರಿಯಾ ನಿವಾರಿಣಿ.

ಇದು ಚಳಿ ಜ್ವರ, ತಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್ಫ್ಲುಯೆಂಜಾ ಇತ್ಯಾದಿ ನಾನಾ ವಿಧದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—6—0; ಸಣ್ಣ ಬಾಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಷ್ಚರ್.

ಜ್ವರಗೆಡ್ಡ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ.

ಮಕ್ಕಳಚೀಪ್ಪ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸ ಬಹುದು.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ವಿ. ಬಿ. ಕಾಮತ್, ಮಡಿಕೇರಿ. (3) ವಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (4) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (5) ಸುಂದರ್ ಪ್ರಭು, ಸುಳ್ಯ. (6) ಕೂರ್ಗ್ ಟ್ರೇಡರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (7) ಎ. ಎಸ್. ಮುದ್ದಯ್ಯ, ಗೋಣಿಕೊಪ್ಪಲು. [15]

ನೀವು ಜೇನು ಹುಳಿಯಿಂದ ಜೇನು ಪಡೆಯಲು ಇಚ್ಛಿಸಿದರೆ ಜೇನು ಪೆಟ್ಟಿಗೆಯ ಒಳಗಿಡುವ ಚಾಕಟ್ಟುಗಳು–8 ದೊಡ್ಡವು–8 ಚಿಕ್ಕವುಗಳು ಬರೀ ಒಂದು ರೂಪಾಯಿಗೆ ಮಾರಲ್ಪಡುತ್ತೆ.

ಎರಿಗಳು ಜೇನು ತುಂಬಿದ್ದು, ಜೇನಿಗೆ ಡ್ಡಿರಿ ಒಳ್ಳೇ ಬೆಲೆಗೆ ಕೊಳ್ಳಲಾಗುವುದು.

ಜೇನು ಮತ್ತು ಜೇನು ಸಹಕಾರಿ ಸಂಘ, ವೀರಾಜಪೇಟೆ.

ಇಂಡಿಯದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮೂಲಬಸ್ಮತೆ, ನುಸ್ತೋದೌರ್ಬಲ್ಯ, ನರಗಳ ಹೀನತ್ವಾದಿ ವನ್ನು ಗುಣಪಡಿಸಿ, ಆರೋಗ್ಯಕಾರಿಯೂ ಹುಮ್ಮಸ್ಸು ಹುಟ್ಟಿಸಿ ರಕ್ತದುದ್ದಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೈರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಬಳ್ಳಕೆರೆ ಬೌಕ್ಕ,
52-23 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಆಶೋಭನವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಬನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ಸಮೀಪ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ಪಾಲಿಸಿ [illegible] ವರ್ಷಕ್ಕೆ 21 ರೂಪಾಯಿ, ಹೋಲ್ ಲೈಫ್ ಪಾಲಿಸಿ ಬೋನಸ್ಸು ಪಂಜಿಲ್ಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,
19, ಸೌತ್ ಪರೇಡ್, ಬೆಂಗಳೂರು.
52-38

ಅ೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಪೂರಾದ್ಯ ತೈಲ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕಿ.
ಪೆಟ್ಟಿ ಕಂಪೌಂಡ್,
(52-31) ಗಿರಗಾಂ, ಮುಂಬಯಿ ೪.

ನೆನಪಿಡಿರಿ :-

ಈ ಕೆಳಗಿನ ಮಹನೀಯರ ಕೊಡಗು ಪತ್ರಿಕೆ ಚಂದಾ ಹಣವನ್ನು ವಸೂಲು ಮಾಡಲು ನಿಶ್ಚಿಯಿಸಿದ್ದರಿಂದ ಅವರನ್ನು ವಿಚಾರಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ವಿಚಾರಿಸಿ ಹಣವಾಗುವಂತೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ನಮ್ಮ ಚಂದಾವನ್ನು ನಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಕೊಡಗಿನ ಎಲ್ಲಾ ಭಾಗಗಳಿಗೆ.
ಮು. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತವ್ಯನವರು.

ಸಬ್ ಏಜೆಂಟರುಗಳು.
ವೀರಾಜಪೇಟೆ—ಮು ಮಂಡೀರ ಸೀತಮ್ಮನವರು.
ಮು ಕೆ. ಯಂ. ಶಾಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ ಪನಂಡ ವಿಜಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಕೆ. ಮುದ್ದಪ್ಪಯ್ಯನವರ.
ಶನಿವಾರಸಂತೆ—ಮೆ. ಅಳ್ಳಿವಂಡ ನಂದಪ್ಪನವರು ಮತ್ತು ಮೆ. ಪಳಂಗಡ ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೀರಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ವೆಂಗಪ್ಪನವರು.
ಕಾಕೋಳ್ಳು—ಮೆ. ಬೆಳ್ಳಿಯಂಡ ಯಂ. ಪೂಣಚ್ಚನವರು.
(ಕಾಕೋಳ್ಳು ಕೆಸ್ಟೇಟ್)
ಕೋವಾರಸಂತೆ—ಮೆ. ಎಚ್. ಎಂ. ಪುಟ್ಟಸ್ವಾನವರು.
ಸೂಚನೆ.— ಕೃಷಿಯಲಕ ರಶೀತಿ ಪುಸ್ತಕಗಳಿಲ್ಲದೆ ಯಾರಿಂದಾ ಹಣವನ್ನು ವಸೂಲು ಮಾಡಬಾರದಾಗಿ ಈ ಮೂಲಕ ತಿಳಿಸಲಾಗಿದೆ
ಮೇನೇಜರ್.
'ಕೊಡಗು' ಲಿಮಿಟೆಡ್, ಸುಂಟಿಕೊಪ್ಪ

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ಪ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ಸನ್ನು ವೈದ್ಯ ಶಾಲೆಯು ಕಾಯಲಸ್ಥರಿದು. ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ಮೊದಲಿಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಪಾತವನ್ನು ಶೀತಜ್ವರ, ಸಾ ಕಾಮಾಲೆ, ತಲೆನೋವು, ಬಾಯಾರಿಕೆ, ಉಬ್ಬಸ, ಕಮ್ಮಲು, ಪಾಂಡುರೋಗ, ದೃಷ್ಟಿರೋಗ, ಕಾಮಲೆ, ಬೆನ್ನು ಉಬ್ಬು. ಸೊಂಟ, ಮೊಣಕಾಲು ಮೈಕೈಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ವೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ಜಲಕ್ಕೆ ಒಮ್ಮತಕ್ಕೆಗೆಯಿಸಿಕೊಳ್ಳುವುದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ನೈಜೇಕ.

ಇಂತಿ
ವಿ. ಜೆಚ್. ರಾಮಯ್ಯಣ್ಣಿ ವೈದ್ಯರ್.

ಮೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ಮನೆ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರು, **ಸಾಲದ** ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಸಾಮಾ ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಒತ್ತರ ಪುಸ್ತಕಗಳೂ ಅಲ್ಲದೆ ಜಮ್ಮಾಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ಮನೆಭಂಡಾರದ ಖರೀದಿ, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಮುದ್ರಣ ಒರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಸುಂಟಿಕೊಪ್ಪ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ	ಪೈ.
ಶೇರ್ ಬಂಡವಾಳ	50,000	0	0
ವಸೂಲಾದ ಶೇರ್ ನೊಂಲಗು	45,800	0	0
ಜಮೂಬಂಗೆ ರೇವಣಾತಿ	2,44,140	6	4
ವಸೂಲಾದ ಕ್ಷೇಮನಿಧಿ	1,36,925	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	16,753	1	11
ಶ್ರಿಫ್ಟ್ ಡಿಪಾಜಿಟ್ಟು	35,550	2	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯೂನ 3½ ದರದಲ್ಲಿಯೂ, ಮೂರು ಆಥವ ಹೆಚ್ಚಿನ ಅವಧಿಯ ರೇವಣಾತಿಗಳಿಗೆ ಶೇಕಡ ತಾಲಿಯೂನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ಕೊಡಲಿಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ಶ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ಶ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937 ರಲ್ಲಿ ನಿಲ್ಲಿಸಿದ್ದನ್ನು ಪುನಃ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಡಿಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಸಂಯ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ ಸುಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ ಎಲ್

ತಾ. 1-10-1938

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮೂಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60	,, 20.	,, 13.	,, 8.
1 ತಿಂಗಳಿಗೆ—	,, 25.	,, 10	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಅಗಾಧತ್ವವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ
ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವನು. ಈತನ ಪುರಣಾನಂತರವೂ ಆಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಅದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟಬಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ಪಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

82-47 **ಮೆ. ಪಿ. ಕೇಶವಾಚ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.**

Printed & Published by P. I. Bellappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೨—೧೨—೧೯೩೮.

ಸಂಪುಟ ೧೮] [ಸಂಚಿಕೆ ೫೨

The Bombay Life Assurance Company Ltd.

(Estd. 1908.)

45 47, Churchgate Street, Fort-Bombay.

Progress Proves Its Popularity.

Year.	Business in force.	Claims Paid.	Life Assurance Fund
1931	2,26,82,430	2,91,880	33,21,809
1933	3,07,98,435	3,51,003	50,04,871
1935	4,42,51,214	5,75,198	68,01,501
1937	6,04,70,594	6,09,018	98,68,232

Total Claims Paid Between 1909 and 1937—Rs. 50,22,576

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8246.]

17

Bombay Life Building Udipi	Gautam Nivas Charni Road Girgaum, Bombay	Viswesvaraiah Circle Bangalore City	Unhwara [illegible] Chowk	[illegible] Street	Outpalam S. Mandvi	Central Station Road. Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Paid up Capital .... Rs. 3,03,205 -
Reserves .... „ 3,88,842 -

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Branches.

1. Udipi, 2. Coondapoor, 3. Car Street, Mangalore, 4. Madras, 5 Shimoga, 6. Bunder, Mangalore, 7. Mercara, 8 Yirarajendrapet, 9. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-52

V. R. Kamath, B. A., LL. B.,
Manager.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಬ್ರಾಂಚ್ ಆಫೀಸು—'ಅಸ್ಟ್ರೀನಿವಾಸ್' ಬಿಲ್ಡಿಂಗ್ಸ್, ಕುಂಡಾಪುರ, ದ. ಕ.

ಪ್ರ ಕ ಟ ನೆ.

ಕನುಕನ್ನವಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನಗಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಆತ್ಯನಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಠೇವಣಿ ೫ರ ೨ ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ ಸಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ತೆಪ ಕಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ಸಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೂಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural & Industrial Bank Ltd.

52-27

"ZANDU"

ಝಂಡೂ ರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ರಕ್ತವರ್ಧಕ ಮತ್ತು ಶ್ವಾಸ ಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮನು ವಾದದ್ದು. ಕ್ಷಯದ ಸ್ಥಾರಂಭಾವಸ್ಥೆ ಯಲ್ಲಿ ದಿವ್ಯವಾದ ಔಷಧ.	**ಕೇಸರಿ ಚೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯ ವಾದ ಔಷಧ. ಝಂಡೂ ಅಯೋಡೈಸ್ಡ್ **ಸೇರಸಪರಿಲ್ಲಾ** ಇದು ರಕ್ತಪೋಷಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ವ್ಲೋಜಿಸ್ಟೈನ್.

ಇದು ಸ್ಯುಮೋನಿಯಾ,ಜೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ನುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಜಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ಸಂಜುಂಡೇಶ್ವರ, ಎಲ್. ಎ. ಎಂ. ಎಸ್ ಮತ್ತು ಆಯುರ್ವೇದ ನಿಷ್ಣಾಂತ

(52-17)

ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಸಂಖ್ಯಾವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೬,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ಸಿರು ಒತ್ತೆ	೩೦,೩೩೮—೧೫—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೪೮— ೩—೪
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೬೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಸಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ನಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ವಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್ಸಿ., ಎಲ್ಎಲ್.ಬಿ.,
ಅಫಿಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-11

ಹೇಗಿದೆ ಲೆಕ್ಕ.

18 ನೆಯ ಶತಮಾನದಲ್ಲಿ ಜಡ್ಜ್‌ಯೊಬ್ಬ ಒಸ್ಟಿನ್ ಎಂಬಾತನಿದ್ದನು. ಆತನಿಗೆ ಬರವಣಿಗೆ ಎಂಬುದೇ ತಿಳಿಯದು ಜ್ಞಾಪಕಶಕ್ತಿಯೂ ಕಡಿಮೆ ಆದರೆ ಲೆಕ್ಕಗಳಲ್ಲಿ ಮಾತ್ರ ಕುರಲನಾಗಿದ್ದನು ಚರ್ಚೆಗಲ್ಲಿ ಗುರುಗಳು ಖ್ಯಾರ್ದನೆ ಕಾಲದಲ್ಲಿ ಏನು ಹೇಳಿದರೆಂಬುದು ತಿಳಿಯದಿದ್ದರೂ ಎಷ್ಟು ಪೌಂಡುಗಳನ್ನು ನುಡಿದರು ಎಂಬ ವಿಷಯವನ್ನು ಹೇಳುತ್ತಿದ್ದನು

—೦೦—

ಮೆದಳೂ ಮತ್ತು ಪರಿಮಳ ದ್ರವ್ಯಗಳು.

ಪರಿಮಳ ದ್ರವ್ಯಗಳು ಔಷಧಗಳೆಂಬುದು ಯಾರ ಭಾವನೆಯಲ್ಲಿಯೂ ಇಲ್ಲ. ಅವಲ್ಲವೂ ಭೋಗ್ಯ ವಸ್ತುಗಳೆಂದು ತಿಳಿಯಲಾಗಿದೆ ತಮ್ಮ ತಮ್ಮ ಸೌಂದರ್ಯ ಸುತ್ತು ನೋಡಕತೆಯನ್ನು ಹೆಚ್ಚಿಸಿಕೊಳ್ಳಲು ನಾಗರಿಕ ಮತ್ತು ಅನಾಗರಿಕ ಸ್ತ್ರೀವಂದೆಸಲ್ಲವೂ ಪರಿಮಳವನ್ನು ಉಪಯೋಗಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ ಕೆಲವು ಪೌರುಷ್ಯ ಪುರುಷರೂ ಶೃಂಗಾರಕ್ಕೆಂದು ಉಪಯೋಗಿಸುವುದುಂಟು

ಆದರೆ ಪರಿಮಳ ದ್ರವ್ಯಗಳಲ್ಲಿ ಅನೇಕ ವರ್ಗಗಳ ಸಂಶೋಧನೆಯಿಂದ ಅತಿಶಯವಾದ ಸ್ವಾಭ್ಯಜೊಬ್ಬರು ಮೆದುಳಿನ ದುರ್ಬಲತೆಗೆ ಸುಗಂಧಗಳು ಬಹಳ ಉತ್ತೇಜಕ ವಸ್ತುಗಳೆಂದು ಕಂಡು ಹಿಡಿದಿರುವರೆ. ಏಕೆಂದರೆ ಮೆದುಳಿಗೂ, ಘ್ರಾಣೇಂದ್ರಿಯಗಳಿಗೂ ನಿಕಟ ಸಂಬಂಧವಿದೆ

'ನೈಯೋಟಿ' ಪರಿಮಳವು ವೈರ್ಯಹೀನರಿಗೆ ಧೈರ್ಯಕೊಡುವುದು ಇದೇ ರೀತಿ ಇತರ ಪರಿಮಳಗಳೂ ಬಹಳ ಉಪಯೋಗಕರವಾಗಿವೆ

—೦೦—

ತೆಳ್ಳಗಿನವರ ಬಾಳು

ನಮ್ಮ ದೇಹದಲ್ಲಿನ ವಿಚಾರವನ್ನು, ಆರೋಗ್ಯ 'ಕಾರ್ಪೊರೇಶನ್'ಯಲ್ಲಿ ವಿಯೂರಾನ್ ವೈದ್ಯರೊಗ್ಯವಂತರು ಕಂಡು ಹಿಡಿದು, ಎಸ್ಟು ಕಾಲವಾಗಿವೆ ದಿನವೂ ಎಷ್ಟಕ್ಕೆ ನಮ್ಮ ಹೃದಯವು, ಒಂದು ಲಕ್ಷ ಬಾರಿ ಹೊಡೆದುಕೊಂಡು, ಸುಮಾರು 2000 ಗೆಲನು ರಕ್ತವನ್ನು ದೊರಗೂ ಒಳಗೂ ಚಲಿಸುವಂತೆ ಮಾಡುವುದಂತೆ ಇದಕ್ಕಾಗಿ, ಭಯಪಡಬೇಕಾಗಿಲ್ಲ ಒಮ್ಮೆ ಹೊರ ರತ್ತವ ಪುನಃ ಬರುವುದರಿಂದ, ಅಷ್ಟು ಗೆಲನ ರತ್ತ, ನಮ್ಮ ದೇಹದಲ್ಲಿನಯೆಂದು ತಿಳಿಯಬೇಡಿರಿ ಈ ಇವರಲ್ಲಿ, ಜನರು ದಪ್ಪ ಹೆಚ್ಚಾದಷ್ಟು ಹೃದಯದ ಕೆಲಸ ಹೆಚ್ಚಾಗಿ, ದಪ್ಪಗಿನವರು ಸಾಯುವುದು ಸುಲಭವಾಗಿದೆಯಂತೆ. ಆದರೆ, ತೆಳ್ಳಗಿನವರು ಹೆಚ್ಚು ಕಾಲ ಬಾಳುವರೆಂದೂ ದೃಢವಿಲ್ಲ ಜೀಕಷ್ಟಕ್ಕಿಂತ ಅಧಿಕ ತೆಳ್ಳಗಿರುವವರು ಬೇಗ ಸಾಯುವುದು ಅಸಂಭವವಾದರೂ, ಅವರು ಧೈರ್ಯವಲ್ಲವಂತೆ ಆದರೂ ಜೀವದ ಮೇಲಿರುವ ನಂಬಿಕೆ ದೋರದವರ ವಿಚಾರದಲ್ಲಿ ಹೆಚ್ಚು!

—೦೦—

ಕುಡಿಕರಿಗಾಗಿ.

ಬಜಾರಿನ ಪೆಂಡಪಂಗಡಿಯನ್ನು ತೆಗೆಯಲು ಮನಸ್ಸಿಲ್ಲದ ನಮ್ಮ ನಗರ ಸಭಾ ಸದಸ್ಯರಿಗೆ, ಈ ಮೇರಿಕೆಯಿಂದ ಒಂದು ಉತ್ತಮ ಪದಂತಿ ಬಂದಿದೆ ನ್ಯೂಯಾರ್ಕಿನ ಡಾ ಜೋಸೆಫ ಹೆಗ್ಯೂಟ್ ಎಂಬವರು, ಕುಡಿದು ಮತ್ತರಾದವರ ಅಮಲನ್ನು ತೆಗೆಯಲು, ಒಂದು ಯಂತ್ರವನ್ನು ಕಂಡು ಹಿಡಿದಿದ್ದಾರೆ. ಮಾರ್ಗದ ಮೇಲೆ ಬೀಳಬೇಕಾವಷ್ಟು ಕುಡಿದರೂ ಕೂಡ, ಈ ಯಂತ್ರವ ಕುಡಿದವನ ಶ್ವಾಸಕೋಶಗಳಿಗೆ, ಕಾರ್ಬನ್ ಡೆಯೋಕ್ಸೈಡ್ ಬೆರೆಸಲಾವ ಗಾಳಿಯನ್ನು ಬಿಟ್ಟು—ಅಮಲನ್ನು ಹೊರಗೆಳೆಯುವುದು. ಪೂರ್ಣ ವಿಚಾರ ಹೊಂದುವ ರೀತಿಯಲ್ಲಿ ಬಿದ್ದವನನ್ನು, ಈ ರೀತಿಯ ಉಪಚಾರ 3 ಕಾಸು ನಡೆಸಿ ಹೇತರಿಸಲಹುದಂತೆ.

ವಿವಿಧ ವಿಚಾರ.

ಕೋಟಿಯನ್ನು ಕಟ್ಟಲು 4 ಗಂಟೆ ಸಾಕು!

ಎಂಬ ಹೊಸ ಪದವಾದ ಕಾನ್‌ಕ್ರೀಟ್‌ನಿಂದ ಕೋಟ ಕೊತ್ತಲುಗಳನ್ನು ಎಷ್ಟು ಬೇಗ್ಗುದಲ್ಲಿ ಕಟ್ಟಬಹುದೆಂಬುದನ್ನು ಸ್ವೀಡನ್ ದೇಶದ ಪರಿಶೋಧಕನೊಬ್ಬನು ಪ್ರದರ್ಶನದ ಮೂಲಕ ತೋರ್ಪಡಿಸಿದ್ದಾನೆ ಇವನ ಯೋಜನೆಯಂತೆ ಕೋಟೆಗಳನ್ನು ಕೇವಲ ನಲ್ವತ್ತು ಗಂಟೆಗಳ ಕಾಲದಲ್ಲಿ ಜೋ ಕಟ್ಟಿ ಮುಗಿಸಬಹುದಂತೆ. ಇದು ಸಹಜವಾದ ಕೋಟೆಗಳಕ್ಕೇ ಬಲಸಾಗಿರುವುದಂತೆ.

—೦೦—

ಹಾಲೂಗೆಡ್ಡೆ ಸಿಪ್ಪೆ ತೆಗೆಯುವ ಯಂತ್ರ.

ತರಕಾರಿಕವಲ್ಲಿ ಎಲ್ಲಿ ನೋಡಿದರೂ ಯೂರೂ ದಾಲೂಗೆಡ್ಡೆಯ ಸಿಪ್ಪೆಯನ್ನೇ ತೆಗೆದಿರು ಇದಕ್ಕೆ ಕಾರಣವೆಂದರೆ ಎಂಬಿರಿಂದ ಒಂದು ಕಂಪನಿಯವರು ದಾಲೂಗೆಡ್ಡೆಯ ಸಿಪ್ಪೆಯನ್ನು ತೆಗೆಯುವ ಯಂತ್ರವನ್ನಿಟ್ಟು, ಸಿಪ್ಪೆ ತೆಗೆದು ಗಡ್ಡೆಗಳನ್ನೇ ಮಾರುತ್ತಿರುವುದು ಹೀಗೆ ಲಕ್ಷಾಂತರ ಆಂಗಡಿಗಳಿಗೆ ನರಪರಾಜು ಆಗುತ್ತಿದ ಈ ಯಂತ್ರವಲ್ಲಿ ಒಂದು ಗಂಟೆಗೆ ಒಂದು ಒಸ್ಸಿನಂತೆ ದಾಲೂಗಡ್ಡೆಯ ಸಿಪ್ಪೆಯನ್ನು ತೆಗೆಯಬಹುದಂತೆ ಒಂದು ದೊಡ್ಡ ಕಾಲುವೆಯಲ್ಲಿ ಹಾಕಿ ಹಲ್ಲುಗೆಡ್ಡೆಯನ್ನು ಜೋಯಿಸಿ ಇದನ್ನು ಕೆಲವು 'ಸಿಲೆಂಡರು'ಗಳ ಮೂಲಕ ಹೋಗುವಂತೆ ಮಾಡಿದಾಗ ಇದರ ಸಿಪ್ಪೆ ಸುಲಿದು ಸಿಪ್ಪೆಯಾಗಿ ಬರುವುದಂತೆ!

—೦೦—

ಕೆಮ್ಮುತ್ತಲೇ ಬೆನ್ನು ಮೂಳೆ ಮುರಿಯಿತು!

ಕೆಲವರಿಗೆ, ಬಿಕ್ಕಾಗಲಿ, ಸೀನುಗಳಾಗಲಿ ಬಂದರೆ ಉಡಿದಾರವಾಗಲಿ, ಇಲ್ಲವೆ ನಿಕ್ಕರು-ಹರಾಯಿಗಳಾಡಿಯೊಗಲಿ ಕೆತ್ತು ಹೋಗುವುದುಂಟು ಆದರೆ ಒಬ್ಬ ವೃದ್ಧಾಪ್ಯನು ಕೆಮ್ಮುವುದಕ್ಕೆ ಹೋಗಿ ಬೆನ್ನು ಮೂಳೆಯನ್ನೇ ಮುರಿದುಕೊಂಡ ಸುದ್ದಿಯೂರಿಗೆ ತಾನು ಸೂಜಿಗವನ್ನುಂಟುಮಾಡಲಾರದೆ ನ್ಯೂಜಿಲೆಂಡ್ ದೇಶದ ಲಿಲ್ಲೀಗಳ್ಳಿನಲ್ಲಿ ರಮ್ಮಿನಿಂದ ನರಳುತ್ತಿದ್ದ ಜಾನ್‌ವಿಲಿಯಂ ಎಂಬಾತನು ಬೆನ್ನು ಮೂಳೆಯನ್ನೇ ಮುರಿದುಕೊಂಡ ಸುದ್ದಿಯು ಅಲ್ಲಿಯ ಡಾಕ್ಟರುಗಳಿಗೆಲ್ಲಾ ಆಶ್ಚರ್ಯವನ್ನುಂಟುಮಾಡಿದೆ ಕೆಮ್ಮುಗ ಔಷಧಿ ಕೊಡಿ ಎಂದು ಬೇಡಿದರೆ, ಬೆನ್ನು ಮೂಳೆ ಸರಿಪಡಿಸಲು ಹೊರಟ ಡಾಕ್ಟರುಗಳಂತೆ ವಿಚಿತ್ರ ತಿಂದಿರಬೇಕು ಅವನ ಡಾಕ್ಟರು, ಏಲ್ಲವೆ?

—೦೦—

ಕಾಗದವಿಲ್ಲದ ಸಿಗರೇಟು

ಇನ್ನು ಮೇಲೆ ಸಿಗರೇಟುಗಳಿಗೆ ಕಾಗದವೇ ಇಂಜೀಕಾಗಿಲ್ಲ ಇದಕ್ಕಾಗಿ ಒಂದು ಹೊಸ ಸೌಲಭ್ಯವನ್ನು ಕಂಡು ಹಿಡಿದಿಲಿನ ಹೊಗೇಸೊಪ್ಪಿನ ಎಲೆ ಮತ್ತು ಕೊಟ್ಟುಗಳಿಂದ ಕಾಗದವ ಮಾದರಿಯಲ್ಲಿ ವಿಶೇಷ ರೀತಿಯಲ್ಲಿ ಒಂದು ಪದಾರ್ಥವನ್ನು ತಯಾರಿಸುವರಂತೆ. ಅದು ಈಗ ಇರುವ ಸಿಗರೇಟು ಕಾಗದಕ್ಕಿಂತ ತೆಳುವಾಗಿರುವುದಂತೆ ಅಲ್ಲದ ಇದು ಗಾಳಿನಂತೆ ದಾಶನಿಕ ವಸ್ತುವಾಗಿರುವುದು ಇದು ಏರ್ಪಡಿಗೇರಿಯವ ಸಂಶೋಧಕನ ಪ್ರಯತ್ನದ ಫಲವಾಗಿ ಅಮೇರಿಕವ ಸಂಯುಕ್ತ ಸಂಸ್ಥಾನದವರಿಂದ ವಿಶೇಷವಾದ ರೀತಿಯಲ್ಲಿ ಹೊಗಳಲ್ಪಟ್ಟಿದೆ ಇದು ಎಲ್ಲ ಸಿಗರೇಟುಗಳಂತೆ ಬೇಗ ಉರಿದು ಹೋಗದೆ ನಿಧಾನವಾಗಿ ಬೇರೆ ಉರಿಯುವುದಂತೆ!

—೦೦—

ಬಣ್ಣ ಬದಲಾಯಿಸುವ ಹರಿವಾಣಗಳು!

ಲಂಡನಿನಲ್ಲಿ ನಡೆದ ಪ್ರಾಚೀನ ವಸ್ತು ಪ್ರದರ್ಶನಾಲಯದಲ್ಲಿ ಚೀನಾದೇಶದ ಕೆಲವು ಗಾಜಿನ ಹರಿವಾಣಗಳು ಪ್ರದರ್ಶಿಸಲ್ಪಟ್ಟಿದ್ದುವು. ಇವು ಅನೇಕ ಶತಮಾನಗಳ ಹಿಂದಿನವುಗಳೆಂದು ಅವುಗಳ ಯಜಮಾನರು ಹೇಳುತ್ತಿರುವರು

ಅವುಗಳ ಒಂದು ವಿಚಿತ್ರ ಗುಣವೆಂದರೆ ಏಸ ಮಿತ್ರಿತ ಆಹಾರವನ್ನು ಅವುಗಳ ಮೇಲೆ ಬಡಿಸಿದರೆ, ಕೂಡಲೆ ಅವುಗಳ ಬಣ್ಣವು ಬದಲಾಗುವುದು!

—೦೦—

ದಿನ ಹೋಗುತ್ತಾ ಕುಳ್ಳನಾಗುತ್ತಿರುವ ಮನುಷ್ಯ!

ಸ್ವೀಡನಿನಲ್ಲೊಬ್ಬ ಮನುಷ್ಯನಿದ್ದಾನೆ ಆತನು ದಿನ ಹೋಗುತ್ತಾ ಕುಳ್ಳನಾಗುತ್ತಿರುವನೆಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು ಆದರೆ ಈ ವಿಚಿತ್ರ ವ್ಯಕ್ತಿಯು ಪ್ರಪಂಚದ ಗಮನವನ್ನೆಲ್ಲಾ ಎಂಗಡೆಗೂ ಆಶ್ಚರ್ಯವನ್ನುಂಟುಮಾಡಿರುವನು

ಎರಡು ವರ್ಷಗಳ ಹಿಂದೆ ತನ್ನ ಎತ್ತರವನ್ನು ತನು 4 ಅಂಗುಲಗಳನ್ನು ಕಳೆದು ಕೊಂಡನು ಅತ್ತ ದಿನ ದಿನಾ ಕುಳ್ಳನಾಗುತ್ತಿದ್ದನು ಈಗ ಆತನು ಕೋಪನ್ ಹಾಗನ್‌ನ ಆಮೂಂಬು ಆಸ್ಪತ್ರೆಯಲ್ಲಿರುವನು ಏನೆ ಹೇಳಾಗುತ್ತಾ ಆತನು ಕುಳ್ಳನಾಗುತ್ತಿರಲು ಕಾರಣವೇನೆಂಬುದನ್ನು ಕಂಡು ಹಿಡಿಯಲು ವೈದ್ಯ ವಿಜ್ಞಾನಿಗಳು ಅಂದಿನಿಂದ ಪ್ರಯತ್ನಿಸುತ್ತಿರುವರು

—೦೦—

ಪರರ ಜಾಗದಲ್ಲಿ ಸುಖವನ್ನು ಕಟ್ಟಿ ತನ್ನದೆಂದು ಸಾಧಿಸಿದ ಧೀರ.

ಸರ್ಬಿಯಾ ಎಂಬಲ್ಲಿ ಮುನ್ಸಿಪಾಲಿಟಿಯ ಮಾಗದರ್ಶಿಯಲ್ಲಿ ರಾತ್ರಿ ಹಗಲುಗಳೇಕ ದರೆ ಸೊಲೊಡರ್ ನಿಕೆ ಎಂಬಾತನು ಒಂದು ಸುಸಜ್ಜಿತವನ್ನು ತನ್ನ ಗಳೆಯರ ಸಹಾಯದಿಂದ ಕಟ್ಟಿಸಿದನು ಮುನ್ಸಿಪಾಲಿಟಿಯವರು ತಮ್ಮ ಜಾಗವನ್ನು ಕಳಿದರು ಆದರೆ ಆ ಜಾಗವನ್ನು ಆತನಿಗೆ ಬಿಟ್ಟುಬಿಡಬೇಕೆಂಬ ನಿರ್ಧಾರವನ್ನು ಕೋರ್ಟಿನ ಲ್ಲಾಯಿತು ಕಾರಣ, ಆ ದೇಶದ ಹಳೆಯದೊಂದು ಕಾನೂನಿನ ವ್ಯಕಾರ, ಮುಂಜಾನೆ ಸೂರ್ಯನು ಉದಯಿಸಬೇಕಾದರೆ ಆತನು ತನ್ನ ಕಲಸವನ್ನು ಪೂರ್ತಿ ಮುಗಿಸಿದವರಿಂದ, ಆ ಜಾಗದ ಮೇಲೆ ಆತನ ಹಕ್ಕು ಶಾಶ್ವತವಾಯಿತು

—೦೦—

ಹಳೆಯ ನೆನಪು.

ಇತ್ತೀಚೆಗೆ ಶಾಂತಿ ದೇವಿ ಎಂಬ ಹುಡುಗಿಯೋರ್ವಳು ತನ್ನ ಪೂರ್ವಜನ್ಮದ ಸ್ಮರಣೆಯನ್ನು ಹೇಳಿ ಜನರಲ್ಲಿ ಆಶ್ಚರ್ಯವನ್ನುಂಟುಮಾಡಿದ್ದಳು ಈಗ ಇಂಥ ಇನ್ನೊಂದು ಸುದ್ದಿ ಬಂದಿದೆ ಜಾನ್ಸಿ ಜಲ್ಲೆಯ ಮಹಾರಾಣಿ ಎಂಬ ಗ್ರಾಮದಲ್ಲಿ ಸೊನ್ನಿ ತಾನೆ ಓರ್ವಳು ೨ ವರ್ಷ ಪ್ರಾಯದ ಹುಡುಗಿಯು ಒಂದು ದಿನ ಭಕ್ಷನೆ ಆಳತ್ತಿದಳಂತೆ. ತನ್ನ ಹಿಂದಿನ ಜನ್ಮದ ಮಕ್ಕಳು ಮತ್ತು ಗಂಡನು ಇದ್ದಲಿಗೆ ಕೊಂಡೊಯ್ಗಲೇಬೇಕೆಂದು ಹೆತ್ತವರೊಡನೆ ಹಟಹಿಡಿದಳು. ಅನಳ ತೋರಿಸಿದ ಸಮಿಪದ ಗ್ರಾಮದ ದೊಡ್ಡ ಮನೆಯಾಕಿಲಿಗೆ ಅವಳನ್ನು ಒಯ್ಯಲಾಯಿತು. ಅಲ್ಲಿ ಆಕೆ ತನ್ನ 'ಯಾನ' ಹೆಸರು ಕೂಗಿ ಕರೆದಳಂತೆ ಆ ಮನೆಯ ಯಜಮಾನಿಯೊಡನೆ ಆ ಪಳವನೆನ್ನು ಅಪ್ಪಿ ಮುದ್ದಾಡಿದಳು! ಆ ಕಳ ಹೋದ ಜನ್ಮದ ಗಂಡನಿಗೆ ನಂಬಿಕೆ ಬರಲಿಲ್ಲ. ಇವು ಸುಳ್ಳು ಮೋಸ, ಎಂದನಂತೆ. ಕಡೆಗೆ ಆ ಹುಡುಗಿ ಅದೇ ಮನೆಯಲ್ಲಿ ಹಿಂದೆ ಒಂದು ನಿಧಿಯನ್ನು ಹೂತಿಟ್ಟ ಸ್ಥಳವನ್ನು ಹುಡುಕಿ ತೋರಿಸಿದಳು; ನಿಧಿಯನ್ನು ತಗೆದು ತೆಗೆದರು! ಆ ಮೇಲೆ ಆಕೆಳ ಮಾತನ್ನು ಎಲ್ಲರೂ ನಂಬಲೇ ಆಯಿತು.

ಕೊಡಗು

ಡಿಸೆಂಬರ್ ತಾರೀಕು ೨ನೇ ಬುಧವಾರ ೧೯೩೬.

ಸಿಬ್ಬಂದಿ ಖೋತೆ.

ಕೊಡಗಿನ ಸರ್ಕಾರವರು ಕೆಲವು ವರ್ಷಗಳಿಂದೀಚೆಗೆ ಆಡಳಿತೆಯ ಇಲಾಖೆಗಳ ಸಿಬ್ಬಂದಿಯನ್ನು ಹೆಚ್ಚಿಸುತ್ತಾ ಬಂದದ್ದಲ್ಲದೆ, ಈ ಮೊದಲೇ ಇದ್ದ ತಲೆ ಭಾರವಾದ ಆಡಳಿತ ಕ್ರಮವು ಖರ್ಚನ್ನು ಕಡಿಮೆ ಮಾಡುವುದರಿಂದ ಬಜೆಟ್ಟನ್ನು ಸಮತೂಗಿಸಲು ಸಾಧ್ಯವಾಗದೆ ಕಷ್ಟವಲ್ಲಿ ಬಿದ್ದರು. ಆದ ಕಾರಣ ಇಂಡಿಯಾ ಸರ್ಕಾರವರು ಆ ದಾಯ ನಜ್ಜೆಯನ್ನು ಸರಿಪಡಿಸಲು ಒಬ್ಬ ಫೈನಾನ್ಸ್ ಆಫೀಸರನ್ನು ನೇಮಿಸಿದರು. ಅವರು ತಯಾರಿಸಿದ ವರದಿಯನ್ನು ಜನರ ತಿಳುವಳಿಕೆ ಬಗ್ಗೆ ಪ್ರಚಟಿಸದೆ ಗುಟ್ಟಾಗಿ ಇಟ್ಟುಕೊಂಡು, ಚೀಫ್ ಕಮಿಷನರವರ ಅಧಿಕಾರಕ್ಕೆ ಒಳಪಟ್ಟ ಉದ್ಯೋಗಗಳ ಖೋತೆಯ ವಿಚಾರದಲ್ಲಿ ಆ ವರದಿಯ ಸಿಫಾರಸ್ಸುಗಳನ್ನು ಜಾರಿಗೆ ತರುವ ಪ್ರಯತ್ನವನ್ನು ಚೀಫ್ ಕಮಿಷನರವರು ಕೈಕೊಂಡಿರುವರು. ಯೂನ್ಯಾನ್ ಹುದ್ದೆಗಳನ್ನು ತೆಗೆದುಹಾಕಬೇಕೆಂದು ಗಜೆಟಿನಲ್ಲಿ ಪ್ರಕಟಿಸಿದ್ದರ ಸಾರಾಂಶವನ್ನು ಕಳೆದ ವಾರ ಪ್ರಕಟಿಸಲಾಗಿತ್ತು. ಈಗ ಸರಿ ಉದ್ಯೋಗದಲ್ಲಿರುವ ಮಹನೀಯರುಗಳಿಗೆ-ಮೂರು ತಿಂಗಳಲ್ಲಿ ರತ್ನು ಹುದ್ದೆಯು ಕಂಫರ್ಮಗೊಳಿಸಲ್ಪಡಬಹುದೆಂದು ನೋಟೀಸು ಕೊಡಲಾಗಿದೆಯೆಂಬುದು ತಿಳಿಯಬರುತ್ತದೆ. ಇದರಿಂದ ಸಂಬಂಧಪಟ್ಟ ಉದ್ಯೋಗಸ್ಥರಲ್ಲಿ ವಾಮ-ಕಾರವು ಎದ್ದಿದೆ.

ತಲೆಭಾರ ಸರ್ಕಾರದ ದೊಡ್ಡ ದೊಡ್ಡ ಹುದ್ದೆಗಳನ್ನು ತೆಗೆದುಹಾಕಬೇಕೆಂಬುವುದೇ ಎಲ್ಲರ ಅಭಿಪ್ರಾಯವಾಗಿತ್ತು. ಆ ದುದರಿಂದ ಫೈನಾನ್ಸ್ ಆಫೀಸರ ಸಿಬ್ಬಂದಿ-ಖೋತೆಯ ಸಲಹೆಗಳನ್ನು ತಿಳಿಯಲು ಎಲ್ಲರೂ ಕುತೂಹಲದಿಂದಿದ್ದರು. ಈ ವಿಚಾರ ಕಳೆದ ಕೌನ್ಸಿಲು ಮೀಟಿಂಗಿನಲ್ಲಿ ತುಂಬಾ ಚರ್ಚೆ ನಡೆಯಿತು. ಇಂಡಿಯಾ ಸರ್ಕಾರವವರು ಈ ವರದಿಯ ಮೇಲೆ ತಮ್ಮ ಹುಕುಮನ್ನು ಹೊಡೆಯಿರುವದರಿಂದ ಸದರಿ ವರದಿಯು ಗುಟ್ಟಾಗಿ ಇಡಲ್ಪಟ್ಟ ದೆಯೆಂದೂ, ಚೀಫ್ ಕಮಿಷನರವರ ಅಧಿಕಾರಕ್ಕೆ ಒಳಪಟ್ಟ ಹುದ್ದೆಗಳ ಖೋತೆಯ ವಿಚಾರದಲ್ಲಿ ಕೌನ್ಸಿಲಿನಲ್ಲಿ ನಡೆದ ಚರ್ಚೆಯು ಗಮನಕ್ಕೆ ತೆಗೆದುಕೊಳ್ಳಲಾಗುವುದೆಂದೂ ಸರ್ಕಾರವ ಮೆಂಬರರು ಹೇಳಿದ್ದರು. ಆದರೆ ಸರ್ಕಾರವವರು ತಮ್ಮ ಈ ಮೊತಸ್ಸನ್ನು ನಡಿಸಿಕೊಡುವಂತೆ ತೋರುವುದಿಲ್ಲ.

ದೊಡ್ಡ ಹುದ್ದೆಗಳ ಖೋತೆಯ ವಿಚಾರದಲ್ಲಿ ಇಂಡಿಯಾ ಸರ್ಕಾರವ ಹುಳುಬರುವ ಮುಂಚೆ ಚಿಕ್ಕ ಉದ್ಯೋಗಗಳಲ್ಲಿ ಖೋತೆ ಮಾಡುವುದು ಎಂಥಾ ನ್ಯಾಯವಲ್ಲ. ಜನರ ಪ್ರತಿನಿಧಿಗಳ ಈ ಸೂಚನೆಯನ್ನು ಗಣನೆಗೆ ತೆಗೆದುಕೊಳ್ಳದ ಅಧಿಕಾರಿಗಳು ಕೆಳ ನೌಕರರಿಗೆ ನೋಟೀಸು ಕೊಟ್ಟಮ್ಮು ವಿಷಾದಕರ ನಿಜವಾಗಿಯೂ ಎಲ್ಲಿ ಖೋತೆ ಆಗಬೇಕೋ ಅಲ್ಲಿ ಖೋತೆ ಮಾಡುತ್ತಿರುವ ಸರ್ಕಾರವ ವರ್ತನೆಯನ್ನು ಎಸ್ಟು ಖಂಡಿಸಿದರೂ ಸಾಲದು. ಅಲ್ಲ ಸಂಬಳದ ಕೆಳ ನೌಕರರನ್ನು ಮುಂಗೆ ತಳುಹಿಸುವುದರಿಂದ ನಿರುದ್ಯೋಗತನವು ಹೆಚ್ಚುವುದಲ್ಲದೆ, ಸರ್ಕಾರಕ್ಕೆ ಹೆಚ್ಚಿನ ಉಳಿತಾಯವೇನೂ ಆಗುವಂತಿಲ್ಲ. ಇದರ ಬದಲು ಸಾವಿರಗಟ್ಲೆ ಸಂಬಳ ಬರುವ ಉದ್ಯೋಗಗಳನ್ನು ಪ್ರಥಮತಃ ಪಜಮಾಡಿದರೆ ಸರ್ಕಾರದ ಖರ್ಚು ಬಹಳ ಮಟ್ಟಿಗೆ ಕಡಿಮೆಯಾಗುವುದು. ಚಿಕ್ಕ ಉದ್ಯೋಗಗಳ ಖೋತೆ ವಿಚಾರದಲ್ಲಿ ಅಧಿಕಾರಿಗಳು ವೈಯಕ್ತಿಕರ ರೀತಿಯಿಂದ ವರ್ತಿಸುವುದು ಸಾಮಾನ್ಯವಾಗಿದೆ. ಆದ್ದರಿಂದ ಸಾರ್ವಜನಿಕರು ಈ ವಿಚಾರದಲ್ಲಿ ಜಾಗ್ರತೆಯಿಂದ ಇರಬೇಕಾಗಿದೆ. ಸರ್ಕಾರವವರು ಈ ವಿಚಾರದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಗೌರವಿಸುತ್ತಾ ಬರುವುದು ಉಚಿತವಲ್ಲ. ಇನ್ನು ದೀರ್ಘಕಾಲ ಹೀಗೆ ಮಾಡಲಾರರು. ಜನರು ತಮ್ಮ ಅಭಿಪ್ರಾಯದಂತೆ ಆಡಳಿತ ನಡೆಸುವಿ ಕಾಲವು ದೂರವಾಗಿಲ್ಲ. ಇದನ್ನು ಅರಿತುಕೊಂಡಾದರೂ ಅಧಿಕಾರಿಗಳು ತಮ್ಮ ನ್ಯಾಯವಲ್ಲದ ರೀತಿಗಳನ್ನು ಬದಲಾಯಿಸುವರಾಗಿ ನಂಬುತ್ತೇವೆ.

ರೆವಿನ್ಯು ಮ್ಯಾನ್ಯುವಲ್ಲಿನ ತಿದ್ದುಪಡಿ.

ಕೊಡಗು ಲ್ಯಾಂಡ್ ರೆವಿನ್ಯು ರೆಗ್ಯುಲೇಶನ್ ಮತ್ತು ಅದಕ್ಕೆ ಸಂಬಂಧಪಟ್ಟ ನಿಬಂಧನೆಗಳು ರೆವಿನ್ಯೂ ಮ್ಯಾನುವಲ್ಲಿನಲ್ಲಿ ಅಡಕವಾಗಿವೆ. ಈ ರೆಗ್ಯುಲೇಶನ್ ಮತ್ತು ನಿಬಂಧನೆಗಳೂ ಜನರ ಅಭಿಪ್ರಾಯ ಕೇಳದೆ ಸರ್ಕಾರಿ ಅಧಿಕಾರಿಗಳಿಂದ ಮಾಡಲ್ಪಟ್ಟಿವಾಗಿವೆ. ಇವುಗಳಿಂದ ವೈಯಕ್ತಿಕ ಸಾಯಗಾರರ ಹಿತಕ್ಕೆ ತುಂಬಾ ಅಡಚಣೆ ಆಗಿರುವುದರಿಂದ ಇವುಗಳನ್ನು ಜನರ ಹಿತಕ್ಕನುಸಾರವಾಗಿ ತಿದ್ದುಪಡಿ ಮಾಡಬೇಕೆಂಬ ಕೂಗು ದೀರ್ಘ ಕಾಲದಿಂದಿದೆ.

ಸರ್ಕಾರದವರು ಈ ನಿಬಂಧನೆಗಳನ್ನು ತಿದ್ದುಪಡಿ ಮಾಡಲು ಈಗ ಕೊಡಗು ಗಜೆಟಿನಲ್ಲಿ ಕೆಲವು ಕರಡು ನಿಬಂಧನೆಗಳನ್ನು ಪ್ರಕಟಿಸಿದ್ದಾರೆ. ಈ ಕರಡು ತಿದ್ದುಪಡಿಗಳನ್ನು ನೋಡಿದರೆ, ಅವು ಮೊದಲಿನ ನಿಬಂಧನೆಗಳಿಗಿಂತಲೂ ಹೆಚ್ಚು ರೈತರಿಗೆ ಹಾನಿಕರವಾದವೆಂದು ಸ್ಪಷ್ಟವಾಗಿ ತಿಳಿಯಬರುತ್ತದೆ. ಉದಾಹರಣೆಗೆ ಹೇಳಬಹುದು ರೈತರ ವ್ಯಯೋಜನಕ್ಕೆಂದು ಇಟ್ಟಿರುವ ಪೈಸಾರಿ ಜಾಗದ ಉಪಯೋಗವು ಕಾರ್ಯಕ್ಕೆ ಕಾರ್ಯಾಗಿಂತಲೂ (ರಿಸರ್ವ್ ಫಾರೆಸ್ಟ್) ಕಷ್ಟವಾಗುತ್ತದೆ. ಇವರ ಮಟ್ಟಿಗೆ ರೆವಿನ್ಯು ಅಧಿಕಾರಿಗಳಿರುವ ಅಧಿಕಾರವೆಲ್ಲಾ ಫಾರೆಸ್ಟ್ ಮುಖ್ಯ ಅಧಿಕಾರಿಗಳಿಗೇ ಸೇರುವುದು. ಭೂಮಿ ಮತ್ತು ಜಾಗದ ವಿಚಾರದಲ್ಲಿ ಈಗ ರೈತರು ಸ್ವಲ್ಪ ತೊಂದರೆಯಿಂದ ಪಡಕೊಳ್ಳಬಹುದಾದ ಅನುಕೂಲತೆಗಳು ಈ ಕರಡು ನಿಬಂಧನೆಗಳು ಜಾರಿಗೆ ಬಂದರೆ ಎಷ್ಟು ಕಷ್ಟವಟ್ಟರೂ ಸುಲಭ ಸಾಧ್ಯವಾಗಲಾರವು. ಈ ಕರಡು ತಿದ್ದುಪಡಿಗಳನ್ನು ಓದುತ್ತಾ ಹೋದರೆ ಅವುಗಳ ಭೀಕರ ಸ್ವರೂಪವು ಗೋಚರವಾಗುವಿದೆ. ಜನರು ಸಕಾಲದಲ್ಲಿ ಎಚ್ಚೆತ್ತುಗೊಳ್ಳಬೇಕಾಗಿದೆ. ಡಿಸೆಂಬರ್ ಅಖೈರಿಗೆ ಇವುಗಳಿಗಿರುವ ಆಕ್ಷೇಪಣೆಯ ತಿದ್ದುಪಡಿಗಳನ್ನು ಚೀಫ್ ಕಮಿಷನರವರಿಗೆ ತಿಳಿಸಬೇಕೆಂದಿದೆ. ಆದ ಕಾರಣ ಜನರು ಅಲ್ಲಲ್ಲಿ ಸಭೆ ಸೇರಿ, ಈ ಕರಡು ತಿದ್ದುಪಡಿಗಳನ್ನೆಂದಿಗೂ ಮಂಜೂರು ಮಾಡಬಾರದೆಂದೂ, ರೆವಿನ್ಯು ಮ್ಯಾನ್ಯುವಲನ್ನು ತಿದ್ದುಪಡಿ ಮಾಡಲು ಉದ್ಯೋಗಸ್ಥರಲ್ಲದವರ ತಿಂದರೆ ಒಳ್ಳೇ ಅನುಭವವೂ, ತಿಳುವಳಿಕೆಯೂ ಇರುವ ಜನಿವಾರ್ತರ ಬಹುಮತವಿರುವ ಕಮಿಟಿಯೊಂದನ್ನು ನೇಮಿಸಬೇಕೆಂದೂ ಚೀಫ್ ಕಮಿಷನರವರನ್ನು ಕೇಳಿಕೊಳ್ಳತಕ್ಕದ್ದು.

ಈ ವಿಚಾರದಲ್ಲಿ ದೀರದ ಉದ್ದಗಲಕ್ಕೂ ಜಳಪಳ ನಡಿಸಬೇಕಾಗಿದೆ. ದೇಶೀಯರು ಈಗ ಸುಮ್ಮನಾದರೆ ರೈತರ ಸ್ಥಿತಿಯು ಮತ್ತಷ್ಟೂ ಕಷ್ಟವಾಗುವುದು.

ಓರಿಯಂಟಲ್ ಜೀವನಿಮೂ ಕಂಪೆನಿ.

ಭಾರತದ ಪ್ರಮುಖ ವಿಮಾ ಸಂಸ್ಥೆಯೆನಿಸಿ, ತನ್ನ ಆಸ್ಥಿಪಂಜರವನ್ನು ಕಾದಿರಿಸಲು ಪ್ರತಿ ವರ್ಷ ಅಖಂಡ ಉದ್ಯಮವನ್ನು ಸಾಧಿಸುತ್ತಾ ಜಗತ್ತಿನ ಸಮಸ್ತ ಪ್ರಸಂಗದಲ್ಲಿ ಒಂದು ಗಣ್ಯ ಸ್ಥಾನವನ್ನು ಪಡೆದು ಜನತೆಯ ಆದರಣೆಯನ್ನು ಪಡೆದಿರುವ ಈ ಕಂಪನಿಯ 1937 ನೇ ಡಿಸಂಬರ್ ಅಂತ್ಯಕ್ಕೆ ಪೂರ್ತಿಯಾದ ವಾರ್ಷಿಕ ವರದಿಯಿಂದ ಇವರ ಪ್ರಗತಿಯು ಹೇಗಿರುವುದೆಂಬುದು ವ್ಯಕ್ತವಾಗದಿರದು.

ಈ ವರದಿಯ ವರ್ಷದಲ್ಲಿ 55,228 ವಿಮಾ ಖರೀದಿಗಳ 998 ಲಕ್ಷ ರೂಪಾಯಿಯ ಹೊಸ ಉದ್ಯಮವನ್ನು ಸಾಧಿಸಿದೆ. ಈ ವರ್ಷವ ವಿಮಾ ಕಂಪನಿ ಪಡೆಯಲಾತಿ ಹಣವು ಕಳೆದ ವರ್ಷಕ್ಕಿಂತ 28 ಲಕ್ಷ ರೂಪಾಯಿ ಜಾಸ್ತಿಯಾಗಿದೆ. ಕಳೆದ ವರ್ಷ 571 ಲಕ್ಷವ ವಿಮಾ ಖರೀದಿಗಳ ಹಣ ಸಂದಾಯ ನ್ಯಯುಕ್ತ ಕೊಡಲ್ಪಟ್ಟಿವು. ಆದರೆ ಈ ವರ್ಷ ಬರೇ 14 ಲಕ್ಷ ಮಾತ್ರ ಅಧಿಕ್ಕಿಂತ ಹೆಚ್ಚಾಗಿದೆ. ಅವಧಿ ಪೂರ್ತಿಯ ವಿಮಾ ಪತ್ರಗಳ ಬಾಬ್ತು ಕಳೆದ ವರ್ಷ 62 ಲಕ್ಷ ಹಣ ಕೊಡಲ್ಪಟ್ಟಿತ್ತು ಈ ವರ್ಷ 61 ಲಕ್ಷ ಹೆಚ್ಚಿದ. ಪರಿಣಾಮ ಪ್ರಯುಕ್ತ ಕೊಡಲ್ಪಟ್ಟ ವಿಮಾ ಖರೀದಿಗಳ ಸಂಖ್ಯೆಯೂ ಶೇಕಡ 18.7 ರಷ್ಟಾಗಿರುವುದರಿಂದ ಕಂಪನಿಯು ನ್ಯಾಯವಾದಂತಿನಿಂದ ಈ ವರ್ಷವೇ ಇದು ಇಷ್ಟು ಲಕ್ಷ್ಯವನ್ನಿಟ್ಟುಗೊಂಡಿರುವದೆಂಬುದು ಸಂತೋಷದ ಸಂಗತಿ

ಈ ವರ್ಷದ ಅಮೋಘ ಉದ್ಯಮವು ಪ್ರಯುಕ್ತ ಕಂಪನಿಯ ನಿಧಿಯು 21½ ಕೋಟಿಗೆ ತಲಪಿಸಿದೆ.

1937 ನೇ ವರ್ಷಕ್ಕೆ ಕಂಪನಿಯ ವೀರುದಾರರ ಪ್ರತಿ ವೀರಿಗೆ 125 ರೂಪಾಯಿಗಳ ಡಿವಿಡೆಂಡ್ ಕೊಡಲು ಡೈರೆಕ್ಟರುಗಳು ತೀರ್ಮಾನಿಸಿರುವರು. ವೆಚ್ಚೇಕೆ? ಕಂಪನಿಯು ಇದೀ ಭಾರತಕ್ಕೆ ವಿನುಯ ಬೆಳಕನ್ನು ಹರಡಿ, ಅನೇಕ ಬಡ ಕುಟುಂಬಗಳಿಗೆ ಆಶ್ರಯ ಧಾತ್ರುವಾಗಿ ವಿಮಾ ಪ್ರಸಂಚದಲ್ಲಿ ಮುಂದುವರಿಯುತ್ತಿದೆ. ಇದರ ಈ ವರ್ಷದ ವರದಿಯು ಎಲ್ಲಾ ವಿಧಗಳಿಂದಲೂ ಕಂಪೆನಿಯ ಅಭಿವೃದ್ಧಿಯನ್ನು ವ್ಯಕ್ತಪಡಿಸುತ್ತಿದೆ. ಹೊಸ ಉದ್ಯಮ, ಉತ್ಪತ್ತಿ, ಕಡಿಮೆ ಖರ್ಚು, ಸಮುಚಿತ ಡಿವಿಡೆಂಡು ಈ ಎಲ್ಲಾ ವಿಚಾರಗಳಲ್ಲೂ ವರದಿಯು ಶ್ಲಾಘನೀಯವಾದದ್ದಿದೆ. ಹೀಗೆಯೇ ಮುಂದಕ್ಕೂ ಕಂಪನಿಯು ಉತ್ತಮವಾದ ಅಭಿವೃದ್ಧಿಯನ್ನು ಪಡೆದು ವಿಮಾ ಪ್ರಪಂಚದಲ್ಲಿ ಅಗ್ರಸ್ಥಾನವನ್ನು ಪಡೆದು ಭಾರತದ ವಲಯ ಕೀರ್ತಿಯನ್ನು ಪ್ರದರ್ಶಿಸಲೆಂದು ಹಾರೈಸುತ್ತೇವೆ.

ವಿನಂತಿ.

ಕಾಂಗ್ರೆಸಿನಲ್ಲಿರುವ ತಪ್ಪು ಕಲ್ಪನೆಗಳನ್ನು ನಿವಾರಿಸಿ ಕಾಂಗ್ರೆಸಿಗೆ ಮತ್ತೆ ಜೀವಕಳೆಯನ್ನು ತುಂಬಲು ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆಯಿತ್ತಿದ್ದಾರೆ. ಕಾಂಗ್ರೆಸಿನ ಸದಸ್ಯತ್ವವು ಇಲ್ಲಿಂತಹವರಿಗೆ ಮಾತ್ರ ಸೀಮಿತವಾಗಿರಬೇಕೆಂಬ ಅಭಿಪ್ರಾಯವನ್ನು ಗಾಂಧೀಜಿಯವರು ಮಾತ್ರ ವಲ್ಲದೆ ಇತರ ಅನೇಕ ಕಾಂಗ್ರೆಸ್ ನಾಯಕರೂ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸಿನ ಸದಸ್ಯತ್ವವು ಕೇವಲ ಖಾದಿಧಾರಿಗಳಿಗೆ ಮಾತ್ರ ಸೀಮಿತವಾಗಿರಬೇಕೆಂಬ ಅಭಿಪ್ರಾಯವನ್ನು ಜವಾಹರಲಾಲ್ ನೆಹರೂ ಅವರು ಇತ್ತೀಚೆಗೆ ವ್ಯಕ್ತಪಡಿಸಿದ್ದರು.

ಕೊಡಗು ಮುಜ್ರಾ ಇಲಾಖಾ ಪ್ರೆಸಿಡೆಂಟರ ಆಫೀಸಿನಿಂದ.

ಇದರಿಂದ ಸಸುಸ್ತ ಜನರಿಗೂ ತಿಳಿಯಪಡಿಸುವುದೇನಂದರೆ.

ಶ್ರೀ ಘಾಗೆಯೆಪ್ಪ ಪದವನ್ನಪ್ಪ ಮುಡಿಕೇರಿ ಶ್ರೀ ಅಂಕಾಲೆಪ್ಪರ ದೊಡ್ಡವೀರಪ್ಪನವರ ಪ್ತ್ತೆ ರ ಪರ ಗಡ್ಡಿಗ ಸಹ 193 ನೇ ಸಂವತ್ಸರದ ಮಿಂಗ ಪೈಕ ಗುವ ಎಂದ ವ್ಯ 70 ಗಾಡಿ ವಿ ಯೆನ ಪತ್ತಿನವನ್ನು ಸಲ್ಲಿ ಮೂದಲಕ್ಕೆ ಬಗ್ಗೆ ಕೊಬ್ಬಿಸ್ಟ್ ಕೂಡುವುದು ತ್ತೆ ವಿ ಯೆನ ಇರುವುದರಿಂದ ಗಾಡಿ ಎಂತರ ತರಸರಾರೆ ವಿ ಬಗ್ಗೆ ಲಿ ಬಗ್ಗೆ ಡಿದ ಬೆಂದರನ್ನು ನನ 1939 ನೇ ಇಂ ಸಲು ತಾರೀಖು 10ರಂಗ ಕಳಿಗೆ ವಸ್ಕತ್ತು ಎಂದಿರುವುದಕ್ಕಾರೆ ಹೆಸರಿಗೆ ರಲಪುರಂತೆ ಕಂಡುಬರುವುದು ಲ್ಲದೆ ಎಂದೂ ರ ತೆ ವಡಕೊಂಡಿರುವುದು ಸಾಮಾನ್ಯ ನಾ 100 ರೂಪಾ ಬಿಗಿಸಿ ದಿನಾಜ್ಞೆ ಹೊರಡಿಸಿ ಬೇಕಾಗಿದೆ ಆ ಯಿದೆಯು ನಂತರ ಬರತಕ್ಕ ಬಂಡುನ್ನು ಎಂಗಿ ಕಿಸುವುದಿಲ್ಲಾ ಸಂಗತಿ ತಿಳಿಸಿದೆ

ಅಲ್ಲದೆ

ಶ್ರೀ ಅಂಕಾಲೆಪ್ಪರ ದೊಡ್ಡವೀರಪ್ಪನವರಿಗೆ ಸನ 1939 ನೇ ಸಂವತ್ಸರದ ಪಿರ್ಚಿಗೆ ಜೋ ಕಾಗುವ ಹೆಚ್ಚೆ ಕಮ್ಮಿ 30 ಗಾಡಿ ಸೌದೆಯನ್ನು ವಸ್ಕತ್ತಿಗೆ ಒಚ್ಚೆ ಕೆಬ್ಬಾಸ್ಟು ಕೊಂಡಿಸ್ಟೇರಿ ಮಾಡಿಸಿ ಇರತಕ್ಕವರು ಗ ವಿಮೆ ಉಪ್ಪ, ತಗಲು, ಎತ್ತರ ಸಮೂಡಿ ಸಿ ಗಾಡಿ ಒಂದರೆ ಎರಿಂದರೆ ಲೆಕ್ಕ ಸಿದರು ಸನ 1939 ನೇ ಇಂಗ್ಲಿ ಷನವರಿ ತಾರೀ ಕು 20ರ ಒಳಗೆ ಈ ಕೆಳಗಿ ಬನ್ನಿಕ ಮಾಡಿರಕ್ಕವರಿಗೆ ತಲಪುವಂತೆ ಕಳುಹಿಸಿಕೊಡ್ಡುದು ಮಂಡಿಯೆಯ ನಂತರ ಬರತಕ್ಕ ವಿರಕಾಸ್ತುಗಳನ್ನು ಗಮನಿಸಲಾಗುವುದಿಲ್ಲವೆಂದು ತಿಳಿಸಿ ಸೂ ಒಸಿದೆ

ಮಡಿಕೇರಿ,
ತಾ. 14-12-38.

ಕೆ ಕಾಳಪ್ಪ,
(ಪ್ರೆಸಿಡೆಂಟ್)

ಸೆಂಟ್ರಲ್ ಬ್ಯಾಂಕ್ ಮಿಟಿಂಗು.

(ನಿನ್ನೆ ಪ್ರಟಿಸಿದ ಮುಂದುವರಿದ ಭಾಗ)

ಯವರೇ ಜೂನ ಯಿಸಿ ಕಳುಹಿಸಬಹುದೆಂದೂ ಹೂ ಎಂದಿಸುವರೆಂತಲೂ ಸ್ವಂತ ಬಿ ಜ್ಞಾ ಸ್ತ್ರ ನಕಾರವೆಂದೂ ಸ್ಪಷ್ಟಪಡಿಸಿ ನಂತರ ರವೆಗಳ ಹೋಗಲು ವಿಶೇಷ ಸೌಲಭ್ಯಕೊಡಲಿಕ್ಕಾಗುವುದೆಂದೂ ತಿರ್ಮಾನಿಸಲಾಯಿತು

2) ಮಾರ್ಚಿನಲ್ಲಿ ಚಿನ್ನಕ್ಕೆ ಕೊಲಸ ಮೊರೆಯು ಸಾಧ್ಯವಾಗದಿರುವುದು ಸುತ್ತು ಸಕ್ಕೆಬೇರಿಗೆ ಕಿ ಹೆಸರುಗಳನ್ನು ಬಹುಮೊನೆ ಕೂಡುವ ಮುಶ್ಚಿತವನ್ನು ಯಿಸಬೇಕೆಂಬ ಒಮ್ಮತಾಭಿಪ್ರಾಯವನ್ನು ಸಹಕಾರ ನಿಯಂತ್ರಣಾಧಿಕಾರಿಗಳಿಗೆ ತಿಳಿಸಲಾಯಿತು

3) ಸಾರ್ವಜನಿಕ ಸಭೆಗಳಲ್ಲಿ ಕೊಡಗಿನ ಸಾಲ ಸಮಸ್ಯೆಯ ಬಗ್ಗೆ ಚರ್ಚೆಗಳು ನಡೆಯುವಾಗ ಸಾಲಗಾರರ ಪರವಾಗಿ ಮಾತಾಡುವವರು

ಒಳದೇಶ.

ತ್ರಿಪುರಿ ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಗಳಾಗಿ ಹೋಗಲು ಕೊಡಗಿಗೆ ಎರಡು ಸ್ಥಳ ಸಿಕ್ಕಿದೆಯೆಂದೂ, ಪ್ರತಿನಿಧಿಗಳ ಚುನಾವಣೆಯು ಜನವರಿ 8 ಕ್ಕೆ ಆಗುವದೆಂದೂ ತಿಳಿಯುತ್ತೇನೆ.

ಪುದುಕೋಟೆ ಮಹಾರಾಜ ಕಾಲೇಜಿನ ಸೈನ್ಸ್ ಲೆಕ್ಚರರ್ ಮತ್ತು ಕ್ರಿಕೆಟ್ ಕೋಚ್ ಆಗಿದ್ದ ಶ್ರೀ ಮಂಡೇಸಂಡ ಎ. ಉತ್ತಪ್ಪ ಬಿ. ಯಸ್ಸ್. ಸಿ.ಯವರು ಸೌತ್ ಇಂಡಿಯಾ ರೈಲ್ವೆಯ ಆ. ಟ್ರಾಫಿಕ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರಾಗಿ ತಿಳಿಯುತ್ತೇನೆ.

ಮಡಿಕೇರಿ.

ಇಲ್ಲಿ ಏಲಕ್ಕಿ ಮಣಕ್ಕೆ ರೂ 31 ಕಾಫಿ ಖಂಡಿಗೆ ರೂ. 105 ಕ್ರಯವಿರುವದಾಗಿ ತಿಳಿಯುತ್ತೇನೆ.

ಈ ತಾರೀಕು 23 ರಿಂದ ಬರುವ ಜನವರಿ ತಾ. 2 ರ ವರೆಗೆ ಕ್ರಿಸ್‌ಮಸ್ ರಜೆಗಾಗಿ ಕೋರ್ಟು ಕಛೇರಿಗಳು ಮುಚ್ಚಲ್ಪಡುವವು.

ಡಿ. ಬೋರ್ಡಿನ ಬರುವ ವರ್ಷದ ಬಜೆಟ್ಟನ್ನು ಸರಿಪಡಿಸಲು ವಿಶೇಷಸಭೆಯು ತಾ. 17 ರಲ್ಲಿ ಸಭೆಯು ಸೇರಲಿರುವದಾಗಿ ತಿಳಿಯುತ್ತೇನೆ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ವಾರ್ಷಿಕ ಮಹಾಸಭೆಯು ತಾ. 17 ರಲ್ಲಿ ಸಹಕಾರಿ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಕೆ. ಜೆ. ಜಂಗಪ್ಪನವರ ಅಧ್ಯಕ್ಷತೆಯಲ್ಲಿ ಖೀರಾಜನೇಟೆ ನೋಡಲ್ ಸ್ಕೂಲಿನಲ್ಲಿ ನಡೆಯಿತು.

ಶ್ರೀ ಪಿ. ಐ. ಬೆಳ್ಯಪ್ಪನವರು ಬ್ಯಾಂಕಿನ ಅಧ್ಯಕ್ಷರಾಗಿ 38-39 ನೇ ವರ್ಷಕ್ಕೆ ನರ್ವಸಮ್ಮತಿಯಿಂದ ಆರಿಸಲ್ಪಟ್ಟರು.

ಶ್ರೀಯುತರುಗಳಾದ (2) ಪುಲಿಯಂಡ ಐಯ್ಯಪ್ಪನವರು, (3) ರಾ. ಬ. ಪಟ್ಟಮಂಡ ದೇವಯ್ಯನವರು, (4) ಕೊಳ್ಳೆಮಾಡ ಕರುಂಬಯ್ಯನವರು, (5) ಕಂಜಿತಂಡ ಕುಶಾಲಪ್ಪನವರು ಬಿಡುನೆಂಬರುಗಳ ದರ ಡೈರೆಕ್ಟರುಗಳಾಗಿಯೂ, ಶ್ರೀಯುತರುಗಳಾದ, (6) ಏನಂಡ ಕಾರ್ಯಪ್ಪನವರು, (7) ಎಸ್. ಎನ್. ರಾಮಚೆಟ್ಟಿಯವರು, (8) ಎಂ. ಯಂ. ಪೂವಣ್ಣನವರು, (9) ಮಂಡೇಪಂಡ ಸೋಮಯ್ಯನವರು, (10) ಮಡೆಯಂಡ ದೇವಯ್ಯನವರು, (11) ಕಾಳಿಮಾಡ ಗಣಪತಿಯವರು, (ಕಿಗ್ಗಟ್ಟುನಾಡು ತಾಲೋಕಿನ ಪರವಾಗಿ) (12) ಚೆಟ್ಟೋಳಂಡ ಮಾಚಯ್ಯನವರು (ಪಾಡಿನಾಲ್ಕುನಾಡು ತಾಲೋಕಿನ ಪರವಾಗಿ) (13) ನಡಿಕೇರಿಯಂಡ ಸೋಮಯ್ಯನವರು (ಎಡೆನಾಲ್ಕುನಾಡು ತಾಲೋಕಿನ ಪರವಾಗಿ) (14) ಪಳಂಗಂಡ ಕರುಂಬಯ್ಯನವರು (ಮಡಿಕೇರಿನಾಡು ತಾಲೋಕಿನ ಪರವಾಗಿ) (15) ಶಂಕರಯ್ಯನವರು (ನಂಜರಾಯಪಟ್ಟಣ ತಾಲೋಕಿನ ಪರವಾಗಿ) ಸಂಘಗಳ್ಳಪರ ಡೈರೆಕ್ಟರುಗಳಾಗಿಯೂ ಬಹುಮತದಿಂದ ಆರಿಸಲ್ಪಟ್ಟರು.

ಮಿಟಿಂಗಿನ ವಿವರ ಬರುವ ವಾರ ಪ್ರಕಟಿಸಲಾಗುವದು.

ತಾ. 19 ರಲ್ಲಿ ಸಹಕಾರಿ ಇಲಾಖೆಯ ಸರಕಾರಿ ಮತ್ತು ಬಿನ್ ಸರಕಾರಿ ಉದ್ಯೋಗಸ್ಥರ ಪರಿಷತ್ತು, ಮತ್ತು ಸಹಕಾರಿ ಇಲಾಖೆಯವರ ಕೋ-ಆಪರೇಟಿವ್ ಸಂಘದ ಮಹಾ ಸಭೆಯೂ ಸಹಕಾರ ಸಂಘಗಳ ರಿಜಿಸ್ಟ್ರಾರರ ಅಧ್ಯಕ್ಷತೆಯಲ್ಲಿ ನಡೆಯಿತು.

—೦೦—

ಹಿಂದೂದೇಶ.

ಜೋಧ್ಪುರದ ಮಹಾರಾಜರ ಆಮಂತ್ರಣದ ಮೇರೆಗೆ ಡ್ಯೂಕ್ ಆಫ್ ವಿಂಡ್ಸರರು ಸದ್ಯವೇ ಇಂಡಿಯಾಕ್ಕೆ ದಯಮಾಡುವರೆಂದು 'ಹೀಪಲ್' ಪತ್ರಿಕೆಯು ವಾರ್ತೆ.

ಕಾಂಗ್ರೆಸ್ ಪ್ರಾಂತಗಳಲ್ಲದ ಪಂಜಾಬಿನಲ್ಲಿಯೂ, ಖಾಯಂ ಕೈಗಾರಿಕೆಯ ಸೈನ್ಯವನ್ನು ಒಪ್ಪಿಸಿದರೆ ಸಿಕಂದರರ ಮಂತ್ರಿಮಂಡಲವು ಅಲ್ಲಿನ ಖಾಯಂ ಕೇಂದ್ರಗಳಿಗಾಗಿ 25 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುವುದಲ್ಲದೆ ಈ ಸೊತ್ತಿನನ್ನು ಹೆಚ್ಚಿಸುವುದರಲ್ಲಿಯೂ ಇದ್ದಾರೆ.

ಆಸ್ಸಾಂ ಪ್ರಾಂತದ ಹಿಂದುಳಿದ ಪಂಗಡಗಳ ವಿದ್ಯಾಭಿವೃದ್ಧಿಗಾಗಿ ವರ್ಷ ಒಂದಕ್ಕೆ ರೂ 25 ಸಾವಿರದಂತೆ ಐದು ವರ್ಷಗಳ ವರೆಗೆ ಅಲ್ಲಿನ ಕಾಂಗ್ರೆಸ್ ಸಂಯುಕ್ತ ಮಂತ್ರಿ ಮಂಡಲಕ್ಕೆ ತಾತ್ಪ ನಂತಿಗೆ ಕೊಡುವುದಾಗಿ ಶ್ರೀ. ಜಿ. ಡಿ. ಬಿರ್ಲಾರವರು ಘೋಷಣೆ ಮಾಡಿದ್ದಾರೆ.

ಶ್ರೀ ನಿಹಾರ ರಂಜನ್ ಎಂಬವರು ತ್ರಿಪುರಿಯಲ್ಲಿ ಜರಗುವ ಕಾಂಗ್ರೆಸ್ ಸಭೆಯನ್ನು ಕಾಣಲು ಸಿಲಹೆಟಿಯಿಂದ ಕಲಕತ್ತಾವರೆಗೆ ಬರೇ ಕ್ಯಾಲಿನಿಂದ ಮತ್ತು ಒಂದೇ ಒಂದು ಪಂಜೆಯನ್ನುಟ್ಟು 400 ಮೈಲು ಪ್ರಯಾಣ ಮಾಡಿರುವರು. ಈ ಅಂತರವನ್ನು 19 ದಿನಗಳಲ್ಲಿ ನಡವಿದ್ದಾರೆ.

ಮದರಾಸ್ ಪಟ್ಟಣದ ಪೌರ ಸಭೆಯ ಸದಸ್ಯರು ಮಹಾತ್ಮ ಗಾಂಧಿಯವರ ವರ್ಧಂತಿ ದಿನ ಮುಂದಿನ ವರ್ಷದಿಂದ ರಜಾ ಕೊಡಬೇಕೆಂದು ತೀರ್ಮಾನ ಮಾಡಿ ಸರ್ಕಾರದ ಒಪ್ಪಿಗೆಯನ್ನು ಅಪೇಕ್ಷಿಸಿದರು. ಸರ್ಕಾರದವರು ಆ ತೀರ್ಮಾನದ ಮೇಲೆ ಏನೊಂದೂ ಹೇಳುವವರಾಗಿಲ್ಲವೆಂದು ತಿಳಿಯುತ್ತದೆ.

ಸನುಗ್ರ್ ಭಾರತ ಬ್ರಹ್ಮಚಾರಿಗಳ ಸಂಘವೊಂದನ್ನು ಸ್ಥಾಪಿಸಬೇಕು; ಅದಕ್ಕೆ ರಾಷ್ಟ್ರಪತಿಗಳಾದ ಶ್ರೀ. ಸುಭಾಷ್‌ಚಂದ್ರ ಭೋಸರವರು ಅಧ್ಯಕ್ಷರಾಗಬೇಕು-ಹೀಗೆಂದು ಸಿಂಧ್-ಹೈದರಾಬಾದಿನ ಕಾಂಗ್ರೆಸಿನ ಮುಂದಿ ಚರ್ಚೆಸಿ ನಿರ್ಧರಿಸಬೇಕೆಂದೂ, ಇಂಥಾ ಸಂಘದಿಂದ ದೇಶ ಸೇವೆಗೆ ಅನುಕೂಲವೆಂದು ರಾಷ್ಟ್ರಪತಿಗಳೂ ಒಪ್ಪಿರುವರೆಂದೂ, ಈ ಸಂಸ್ಥೆಯ ಮುಖ್ಯ ಕೇಂದ್ರವು ಬ್ರಹ್ಮಚಾರಿ ಕಾಂಗ್ರೆಸ್ ಮಂದಿಯಿಂದ ತುಂಬಿರುವ ಸಿಂಧ್ ಪ್ರಾಂತ್ಯದಲ್ಲಿಯೇ ಇರಬೇಕೆಂಬುದ್ದೇಶವಿದೆಯೆಂದೂ ವಾರ್ತೆ.

ಹಿಂದೂಸ್ಥಾನದ ಸಮಸ್ತ ಇಲಾಖೆಗಳಲ್ಲಿಯೂ ಸಿವಿಲ್ ಸರ್ವಿಸ್ ಮತ್ತು ಹಿಂದೂಸ್ಥಾನದ ಸರ್ವಿಸ್ ಎಂಬೀ ಅಧಿಕಾರ ಸ್ಥಾನಗಳ ಸಂಬಳಗಳನ್ನು ಬ್ರಿಟಿಷ್ ಸರಕಾರದವರು ಘೋರ ಯುದ್ಧವಾದ ನೇಲೆ ಧಾರಣೆವಾಸಿಗಳು ಹೆಚ್ಚಿಸಿದೆ ಎಂಬ ಕಾರಣಕ್ಕಾಗಿ ಬಡ್ತಿ ಮಾಡಿದರೆಂತಲೂ, ಈಗ ಧಾರಣೆವಾಸಿಗಳು ಬಹಳವಾಗಿ ಇಳಿದು ಹೋಗಿರುವದರಿಂದ ಅಂಥಾ ಅಧಿಕಾರಿಗಳ ಸಂಬಳವನ್ನು ಶೇಕಡ 10 ರಂತೆ ಕಡಿಮೆ ಮಾಡಬೇಕೆಂತಲೂ ಅಧಿಪತ್ಯಗಳ ಕಾಂಗ್ರೆಸ್ ಮಂತ್ರಿಗಳು ಒಪ್ಪಿ ಇಂಡಿಯಾ ಸ್ಟೇಟ್ಸ್ ಸೆಕ್ರೆಟರಿಯವರಿಗೆ ಮನವಿಮಾಡಿರುತ್ತಾರೆಂದು ಪ್ರಕಟವಾಗಿದೆ.

ಒಂಸ್ಸಾ ಅಧಿಪತ್ಯಕ್ಕೆ ಸೇರಿದ ತಾಲ್ಚರ್ ಸಂಸ್ಥಾನದ ಪ್ರಜೆಗಳು ತಮ್ಮ ಅರಸರನ್ನು ಜವಾಬ್ದಾರಿ ಸರ್ಕಾರ ದಯಪಾಲಿಸಬೇಕೆಂದೂ, ಕಂದಾಯ ಕಛೇರಿಗಳನ್ನು ಕಡಿಮೆಮಾಡಬೇಕೆಂದೂ ಪ್ರಾರ್ಥಿಸಿವರು. ಅವರಿಂದ ಪ್ರಯೋಜನವೇನೂ ಆಗಬಿಲ್ಲವಾಗಿ ಸುಮಾರು 20,000 ಜನರು ಆ ಸಂಸ್ಥಾನವನ್ನೇ ಬಿಟ್ಟು ಬ್ರಿಟಿಷ್ ಇಂಡಿಯಾದಲ್ಲಿ ನೆಲಸಲು ಹೋಗಿರುತ್ತಾರೆ. ತಾಲ್ಚರ್ ಸಂಸ್ಥಾನದ ಪ್ರಜಾ ಸಂಖ್ಯೆ ಸುಮಾರು 70,000 ವೆಂದು ತಿಳಿಯುವುದು. ಊರು ಬಿಟ್ಟು ಬಂದಿರುವವರು ಪಾಡು ಮಾಡಿಕೊಳ್ಳಲಾಗಿದೆಯೆಂದು ಹೇಳಲಾಗಿದೆ.

ವಿದೇಶ

ಅನೇರಿಕಕ್ಕೆ ಸಲ್ಲಬೇಕಾಗಿರುವ ಯುದ್ಧದ ಸಾಲದ ವಿಷಯದಲ್ಲಿ ಬ್ರಿಟಿಷ್ ಕಾಲಹರಣ ಮಾಡುತ್ತಿದೆಯೆಂದು ಅಮೇರಿಕಸರ ಕೂಗು. ಇದೇ ಡಿಸೆಂಬರ್ ತಾ 15ಕ್ಕೆ ಅರ್ಧ ವರ್ಷದ ಕಂತಾಗಿ ಅಮೇರಿಕಕ್ಕೆ ಸಲ್ಲಬೇಕಾಗಿರುವ ಸಾಲದ ನೋಟ್ 128 ಮಿಲ್ಯ ಡಾಲರುಗಳು.

ಯುನೈಟೆಡ್ ಸ್ಟೇಟ್ಸಿನ ವರ್ಜೀನಿಯಾ ವಿದ್ಯಾಲಯಗಳ ಕಾನನ ಸಭೆಯು ಯಹೂದಿಗಳಿಗೆ ಸ್ಥಳ ಕೊಡಬಹುದೆಂದು ಸೂಚಿಸಿತ್ತು. ಇಲ್ಲಿ ೯ ಚಿಕ್ಕ ದ್ವೀಪಗಳ ಒಂದು ಗುಂಪು ಇವೆ. ಆದರ ಮೂರರಲ್ಲಿ ಮಾತ್ರ ಜನವಸತಿ ಇದೆ; ಮಿಕ್ಕವುಗಳಲ್ಲಿ ಇಲ್ಲವಾದ್ದರಿಂದ ಅಲ್ಲಿ ಯಹೂದಿಗಳು ನೆಲಸಲೆಂದು ಆ ಕಾನನ ಸಭೆಯ ತೀರ್ಮಾನ. ಇದಕ್ಕೆ ಪ್ರೆಸಿಡೆಂಟ್ ರೂಸ್‌ವೆಲ್ಟರೇನೆನ್ನುವರೋ ನೋಡಬೇಕು.

ವೀರಶೈವ ಜನಾಂಗದ ಮಿಟಿಂಗು.

ದಕ್ಷಿಣ ಕೊಡಗು ವೀರಶೈವ ಜನಾಂಗದ ಜಮ್ಮ, ಜಹಗೀರು, ಸಾಗು ಭೈತರು ಈ ತಾ. 1 ರಲ್ಲು ನೊಖ್ಯ ಗ್ರಾಮದಲ್ಲಿ ಭದ್ರಗೌಡ ಎಸ್. ನಿದ್ದಪ್ಪನವರ ಅಧ್ಯಕ್ಷತೆಯಲ್ಲಿ ನೇರಿದ ಸಭೆಯ ತೀರ್ಮಾನಗಳು.

(1) ಕೊಡಗು ದೇಶವು ಈಗಿರುವಂತೆ ಪ್ರತ್ಯೇಕ ಆಡಳಿತದಲ್ಲಿರುವುದು ದೇಶದ ಆರ್ಥಿಕ, ರಾಜಕೀಯ, ಸಾಮಾಜಿಕ ಅಭಿವೃದ್ಧಿಗೆ ಕುಂದುಕವೆಂದು ಈ ಸಭೆಯು ತೀರ್ಮಾನಿಸಿದೆ.

(2) ಕೊಡಗು ದೇಶವು ತನ್ನ ನೆರೆ ದೇಶವಾದ ಮೈಸೂರು ರಾಜ್ಯದೊಡನೆ ಸೇರಲು ಕೊಡಗು ಸರ್ಕಾರವು ತಕ್ಕ ವಿಷಯಗಳನ್ನು ಮಾಡಿಸಿಕೊಡಬೇಕಾಗಿ ಹಜರತ್ ಚೀಫ್ ಕಮಿಷನರ್ ಸಾಹೇಬರವರನ್ನು ಪ್ರಾರ್ಥಿಸಿಕೊಳ್ಳುವಂತೆ ತೀರ್ಮಾನಿಸಿದೆ.

ಯಸ್. ಸಿದ್ದಪ್ಪ,
(ಅಧ್ಯಕ್ಷ.)

ಪರ್ತಮಾನ ಸಂಗ್ರಹ.

ಗೋಣಿಕೊಪ್ಪಲು.

ದಕ್ಷಿಣ ಕೊಡಗು ದನಗಳ ಪ್ರದರ್ಶನವು ಇಲ್ಲಿ ಬರುವ ಫೆಬ್ರವರಿ ತಾ. 3-4 ಮತ್ತು 5 ರಲ್ಲಿ ನಡೆಯುವದಾಗಿ ತಿಳಿಯುತ್ತೇನೆ

ನಿಧನ ವಾರ್ತೆ.

ಬೆಂಗಳೂರು ಗ್ರಾಮದ ಶ್ರೀ ಪಟ್ಟಮನೆ ಕೆ. ಪೊನ್ನಪ್ಪನವರು ಕಳೆದ ಭಾನುವಾರ ರಾತ್ರೆ ತಮ್ಮನೆಯೊಳಗಿಂದ ಹೊರಗೆ ಬಂದಾಗ ಯಾರೋ ಅಪರಿಗೆ ಗುಂಡು ಹೊಡೆದುದರ ಸ್ರಯುಕ್ತ ಮೃತರಾದರೆಂಬೂ, ಮಡಿಕೇರಿಯಲ್ಲಿರುವ ಶ್ರೀ ಮುಲ್ಲೆರ ಪೂವಯ್ಯನವರ ಪತ್ನಿಯವರು ತಾ. 17-12-38 ರಲ್ಲಿ ಶಿವಾಧೀನರಾದರೆಂಬೂ ತಿಳಿಸಲು ವ್ಯನನಪಡುತ್ತೇವೆ.

ನೀರಾಜನೇಟೆ.

ತಾ. 18 ರಲ್ಲಿ ಅಖಿಲ ಕೊಡಗಿನ ಸಹಕಾರಿ ಸಮ್ಮೇಳನವು ಶ್ರೀಮಾನ್ ಯಜ್ಞ ನಾರಾಯಣ ಐಯ್ಯರ್ ಯಂ. ಎ ಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಕೊಡಗಿನವರ ಡೆಪ್ಯುಟೇಷನ್.

ಕೊಡಗಿನ ಭವಿಷ್ಯತ್ತನ್ನು ಕುರಿತು ಹೆ ರಿಪುರ ಕಾಂಗ್ರೆಸ್ ಸಂಬಂಧವಾಗಿ ತಾ ಸಾದ ನಿರ್ಣಯದ ವಿಷಯ ವಿವರಿಸಿ ಕೇ ಅಲಿಕ್ಕಾಗಿ ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯವರ ತೀರ್ಮಾನದಂತೆ ಕಳೆದ ಸೆಪ್ಟಂಬರ್ ತಿಂಗಳಲ್ಲಿ ದೆಲ್ಲಿಯಲ್ಲಿ ನಡ ದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಿ ಟಿಂಗಿಗೆ ಹೋಗಿದ್ದ ಡೆಪ್ಯುಟೇಷನಿಸವರಿಗೆ ವರ್ಕಿಂಗ್ ಕಮಿಟಿಯವರಿಂದ ಸಿಕ್ಕಿದ ತೀ ರ್ಮಾನವನ್ನು ಪ್ರಕಟಿಸಲು ತದವಾದದ್ದಕ್ಕೂ, ಆ ಸಂಬಂಧ ಉಂಟಾದ ಅಪಪ್ರ ಚಾರಕ್ಕೂ ಕಕ್ಕ ಕಾರಣಗಳನ್ನು ಪತ್ರಿಕೆಗ ಳ ಮೂಲಕ ಪ್ರಕಟಿಸಬೇಕೆಂದು ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ತಾ 19-12-38 ರಲ್ಲಿ ನಿಶ್ಚಯಿಸಿದ ಮೇರೆ ಈ ಪ್ರಕಟಣೆಯನ್ನು ದೊರಡಿಸಿದ್ದಾಗಿದೆ

ಕೊಡಗು ಜಿಲ್ಲಾ ಕಾಂಗ್ರೆಸ ಕಮಿಟಿ ಯವರು ನೇಮಿಸಿಗ ಡೆಪ್ಯುಟೇಷನಿನವರು ಡೆಲ್ಲಿಯಲ್ಲಿ ವರ್ಕಿಂಗ್ ಕಮಿಟಿಯವರ ಮುಂದೆ ಕೂಡಗಿನ ಸಂಬಂಧ ಹರಿಪುರ ರಾವಾಸ್ತು ಕುರಿತು ಸರಿಸ್ತಾರವಾಗಿ ವಿವರಿ ಸಿದ ಮೇರೆ ವರ್ಕಿಂಗ್ ಕಮಿಟಿಯವರು ಮಾಡಿದ ತೀರ್ಮಾನವನ್ನು ಕಾಂಗ್ರೆಸಿನ ಜ ನರಲ್ ಸೆಕ್ರೆಟರಿಯವರಾದ ಶ್ರೀಯುತ ಕೃಪಾಲಿನಿಯವರು ದೆಪ್ಯುಟೇರ ನಗರ ಚಾಯಿಸೂತಿನಲ್ಲಿ ರಿಸಿದ್ದನ್ನು, ನಂತರ ಅದನ್ನು ಪತ್ರ ಮುಖಾಂತರ ಬರೆಯು ತಿಳಿ ಸುತ್ತೇನೆಂದು ಹೇಳಿದ್ದನ್ನು ಕಳೆದ ವಾರ ಪ್ರಕಟಿಸಿದ್ದೆವು ಶ್ರೀ ಕೃಪಾಲಿನಿಯವ ರು ಅಮರಾವತಿನಿಂತ ತಾ 6-10-38 ರಲ್ಲಿ ವರ್ಕಿಂಗ್ ಕಮಿಟಿಯವರ ಸರ್ವ ತೀರ್ಮಾನವನ್ನು ಜಲ್ಲಿಯಿಂದ ಕೂಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿ ಯವರಿಗೆ ಬರೆದು ತಿಳಿಸಿದ್ದರು ಆದ ರೆ ಕೊ. ಜ. ಕಾ ಕಮಿಟಿ ಸೆಕ್ರೆಟರಿಯರ ರಾದ ಶ್ರೀ ಸಿ ಯಂ ಪೂಣಚ್ಚನವರು ಈ ಪತ್ರದ ವಿಚಾರ ನನಗಾಗಲೀ, ಡೆಪ್ಯು ಟೇಷನಿನ ಇತರ ಮೆಂಬರುಗಳಿಗಾಗಲೀ ತಿಳಿಸದ ಇದ್ದ ಕಾರಣ ಈ ವಿಷಯ ಅರಿ ಯಲು ಬಹು ಕುತೂಹಲದಿಂದಿದ್ದೆ ನಾನು ಶ್ರೀ ಕೃಪಾಲಿನಿಯವರಿಗೆ ತಾ 15-10-1938 ರಲ್ಲಿ ಒಂದು ಪತ್ರ ಬ ರೆಯಬೇಕಾಯಿತು. ಅವರು ಅದಕ್ಕೆ ಉ ತ್ತರವಾಗಿ ಕಳುಹಿಸಿದ ಪತ್ರವನ್ನೂ, ಪೂ ಣಚ್ಚನವರಿಗೆ ಈ ಮೊದಲು ಅವರು ಕಳುಹಿಸಿದ ಪತ್ರದ ನಕಲನ್ನು ಕಳೆದ ವಾ ರ ಬರಿಂಗ ಪಡಿಸಿರುವೆನು. ಮೆ ಸಿ. ಯಂ. ಪೂಣಚ್ಚನವರು ಇಷ್ಟು ಸುಮ್ಮು ವಾದ ಪತ್ರವನ್ನು ಅದರಲ್ಲೂ, ಡೆಪ್ಯುಟೇ ಷನಿನವರು ಕಾಂಗ್ರೆಸ್ ವರ್ಕಿಂಗ್ ಕಮಿ ಟಿಯನ್ನು ಕಾಣರಿಲ್ಲವೆಂಬ ಅಪಪ್ರಚಾರ ವೆ ಕೂಡ ನಡೆಯುತ್ತಿದ್ದಂಥ ಸಮಯದಲ್ಲಿ ನವರಾಗಲೀ, ಡೆಪ್ಯುಟೇಷನಿನ ಇತರ ಮೆಂ ಬರುಗಳಿಗಾಗಲೀ, ತೋರಿಸದೆ ಗುಟ್ಟಿನಲ್ಲಿ ಟ್ಟಿದ್ದು ತುಂಬಾ ತೋಚಕೀಯವಾಗಿದೆ, ಈ ಪತ್ರವನ್ನು ನಿ [illegible] ರು ವರ್ಕಿಂಗ್ ಕಮಿಟಿಯವರು ಮಾಡಿರುವ ತೀರ್ಮಾನವು ಕಾಣಲಿಲ್ಲವೆಂಬುದಕ್ಕೆ ಕಾಣ ಲಿಲ್ಲವೆಂಬುದು, ಕಾಂಗ್ರೆಸ್ ಅಧ್ಯಕ್ಷರ ಯೂ ವರ್ಕಿಂಗ್ ಕಮಿಟಿಯವರ ಅಭಿಪ್ರಾಯ ಯುಕ್ತವಾದ ತೀರ್ಮಾನವನ್ನು ಎಂ ತರಗೆ ದೊರೆಲಿಲ್ಲವೆಂಬುದು, ವರ್ಕಿಂಗ್ ಕಮಿಟಿ ಯ ಒಬ್ಬಿಬ್ಬ ಮೆಂಬರರ ಬಾಯಿಮಾತಿನ ಮೇರೆ ಡೆಪ್ಯುಟೇಷನಿನವರು ಕೂಡಗಿನ ಭವಿಷ್ಯತ್ತಿನ ವಿಚಾರವಾಗಿ ಕೊಡಗಿನ ಜ ನರು ತಮ್ಮ ಇಚ್ಛಾನುಸಾರ ತೀರ್ಮಾನ ಮಾಡಿಕೊಂಡರೆಂಬುದು ಮೊದಲಾದ ಅಪಪ್ರ ಚಾರಕ್ಕೂ ಕಕ್ಕ ಕಾರಣಗಳನ್ನು ಪತ್ರಿಕೆಗ ಳ ಮೂಲಕ ಪ್ರಕಟಿಸಬೇಕೆಂದು ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ತಾ 19-12-38 ರಲ್ಲಿ ನಿಶ್ಚಯಿಸಿದ ಮೇರೆ ಈ ಪ್ರಕಟಣೆಯನ್ನು ದೊರಡಿಸಿದ್ದಾಗಿದೆ

ಕೊಡಗು ಜಿಲ್ಲಾ ಕಾಂಗ್ರೆಸ ಕಮಿಟಿ ಯವರು ನೇಮಿಸಿಗ ಡೆಪ್ಯುಟೇಷನಿನವರು ಡೆಲ್ಲಿಯಲ್ಲಿ ವರ್ಕಿಂಗ್ ಕಮಿಟಿಯವರ ಮುಂದೆ ಕೂಡಗಿನ ಸಂಬಂಧ ಹರಿಪುರ ರಾವಾಸ್ತು ಕುರಿತು ಸರಿಸ್ತಾರವಾಗಿ ವಿವರಿ ಸಿದ ಮೇರೆ ವರ್ಕಿಂಗ್ ಕಮಿಟಿಯವರು ಮಾಡಿದ ತೀರ್ಮಾನವನ್ನು ಕಾಂಗ್ರೆಸಿನ ಜ ನರಲ್ ಸೆಕ್ರೆಟರಿಯವರಾದ ಶ್ರೀಯುತ ಕೃಪಾಲಿನಿಯವರು ದೆಪ್ಯುಟೇರ ನಗರ ಚಾಯಿಸೂತಿನಲ್ಲಿ ರಿಸಿದ್ದನ್ನು, ನಂತರ ಅದನ್ನು ಪತ್ರ ಮುಖಾಂತರ ಬರೆಯು ತಿಳಿ ಸುತ್ತೇನೆಂದು ಹೇಳಿದ್ದನ್ನು ಕಳೆದ ವಾರ ಪ್ರಕಟಿಸಿದ್ದೆವು ಶ್ರೀ ಕೃಪಾಲಿನಿಯವ ರು ಅಮರಾವತಿನಿಂತ ತಾ 6-10-38 ರಲ್ಲಿ ವರ್ಕಿಂಗ್ ಕಮಿಟಿಯವರ ಸರ್ವ ತೀರ್ಮಾನವನ್ನು ಜಲ್ಲಿಯಿಂದ ಕೂಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿ ಯವರಿಗೆ ಬರೆದು ತಿಳಿಸಿದ್ದರು ಆದ ರೆ ಕೊ. ಜ. ಕಾ ಕಮಿಟಿ ಸೆಕ್ರೆಟರಿಯರ ರಾದ ಶ್ರೀ ಸಿ ಯಂ ಪೂಣಚ್ಚನವರು ಈ ಪತ್ರದ ವಿಚಾರ ನನಗಾಗಲೀ, ಡೆಪ್ಯು ಟೇಷನಿನ ಇತರ ಮೆಂಬರುಗಳಿಗಾಗಲೀ ತಿಳಿಸದ ಇದ್ದ ಕಾರಣ ಈ ವಿಷಯ ಅರಿ ಯಲು ಬಹು ಕುತೂಹಲದಿಂದಿದ್ದೆ ನಾನು ಶ್ರೀ ಕೃಪಾಲಿನಿಯವರಿಗೆ ತಾ 15-10-1938 ರಲ್ಲಿ ಒಂದು ಪತ್ರ ಬ ರೆಯಬೇಕಾಯಿತು. ಅವರು ಅದಕ್ಕೆ ಉ ತ್ತರವಾಗಿ ಕಳುಹಿಸಿದ ಪತ್ರವನ್ನೂ, ಪೂ ಣಚ್ಚನವರಿಗೆ ಈ ಮೊದಲು ಅವರು ಕಳುಹಿಸಿದ ಪತ್ರದ ನಕಲನ್ನು ಕಳೆದ ವಾ ರ ಬರಿಂಗ ಪಡಿಸಿರುವೆನು. ಮೆ ಸಿ. ಯಂ. ಪೂಣಚ್ಚನವರು ಇಷ್ಟು ಸುಮ್ಮು ವಾದ ಪತ್ರವನ್ನು ಅದರಲ್ಲೂ, ಡೆಪ್ಯುಟೇ ಷನಿನವರು ಕಾಂಗ್ರೆಸ್ ವರ್ಕಿಂಗ್ ಕಮಿ ಟಿಯನ್ನು ಕಾಣರಿಲ್ಲವೆಂಬ ಅಪಪ್ರಚಾರ ವೆ ಕೂಡ ನಡೆಯುತ್ತಿದ್ದಂಥ ಸಮಯದಲ್ಲಿ ನವರಾಗಲೀ, ಡೆಪ್ಯುಟೇಷನಿನ ಇತರ ಮೆಂ ಬರುಗಳಿಗಾಗಲೀ, ತೋರಿಸದೆ ಗುಟ್ಟಿನಲ್ಲಿ ಟ್ಟಿದ್ದು ತುಂಬಾ ತೋಚಕೀಯವಾಗಿದೆ,

ಇಂತಿಯೂ ನರಕಾರ ರವು ಮೈಸೂ ಯೆದೆ ಲಂಪ್ರತಿಗಳ ಸಂಬಂಧವಾ ಗಿ ಚಾರಿ ಗೆ ಸೆಂಬರ್ 1937 ನೇ ಇಸವಿ Iನೇ ಲ್ಲಿನ್ನು ಸಂಪೂರ್ಣ ವಿಸರ ಕರಣೆಯೆ ಬ ಗೈ ಳಾರಿಕೆಗೆ ಸ್ವಕಟಿಸಲಾಗಿದೆ

ಕೆ ಚಂಗಪ್ಪ,
ರಿಜಿಸ್ಟ್ರಾರ

1937 ನೇ ಇಸವಿ ನಂಬ್ರು I ನೇ ಆಕ್ಟಿ

ಸ್ವಾಧೀನಪಡಿಸಿಕೊಳ್ಳಲಾಗಿರುವ ಗಣಿ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಈ ಸ್ವಾಧೀನಕ್ಕೆ ಗುರಿಯಾಗಿರುವ ಆಸ್ತಿಯ ಉತ್ಪತ್ತಿಗಳನ್ನು ಸಂಗ್ರಹಿಸಲು ಅನುಕೂಲವಾಗುವಂತೆ ಮಾಡಿರುವ ಆಕ್ಟು

ಪದಾರ್ಥವನ್ನು ಸೆಕ್ಷನ್ 3 ರ ಮೇರೆ ತಕ್ಕ ಕುಸುಂ ಇಲ್ಲದೆ ತರಗತಿಯು ಹೆಸರಿನ ಚಿಹ್ನೆಯಿಂದ ಗುರ್ತಿಸುವಷ್ಟನ್ನು 500 ರೂ ನಾಯಿಗಳ ವರೆಗಿನ ಜುಲ್ಮಾನೆಯಿಂದ ಶಿಕ್ಷಿಸಲ್ಪಡುವನು.

ತರಗತಿ ಯಾ ಹೆಸರಿನ ಚಿಹ್ನೆಯನ್ನು ಅನುಕರಿಸಿದಕ್ಕೆ ಶಿಕ್ಷೆ.

(೫) ಯಾವುದೇ ತರಗತಿವಾರು ಹೆಸರಿನ ಚಿಹ್ನೆಯನ್ನು ಸರಕಾರಿಕೆಗಾಗಿ ಅನುಕರಿಸಿದ್ದಕ್ಕೆ ಅಥವಾ ಅನುಕರಿಸುವುದಕ್ಕಾಗಿ ಯಾವುದೇ ಬಣ್ಣ ಸ್ಲೇಟು ಯಾ ಇನ್ನಿತರ ಸಲಕರಣೆಗಳು ತನ್ನ ವಶವಲ್ಲಿ ಇಟ್ಟು ಕೊಂಡಿರುವುದು 2 ವರ್ಷದ ವರೆಗಿನ ಸಜಾ. ಯಾ ಜುಲ್ಮಾನೆ ಅಥವಾ ಈ 2 ಬಗೆಯಿಂದಲೂ ಶಿಕ್ಷಿಸಲ್ಪಡುವನು.

ಆಳ್ವು ಲಗಾವಾಗುವಿಕೆ.

(೬) ಗವರ್ನರ್ ಜನರಲ್ ಇನ್‌ಕೌನ್ಸಿಲ್‌ರವರು ಈ ಆಕ್ಟಿನ ಪಟ್ಟಿಯಲ್ಲಿ ಸೇರಿದ ಯಾವದೇ ವ್ಯವಸಾಯದ ಉತ್ಪತ್ತಿಯನ್ನು ಕುರಿತು ಅದನ್ನು ಸೇರಿಸಿದ್ದರಿಂದ ಕೆಡುಕುಂಟೆಂದು ತನಗೆ ಯುಕ್ತವೆಂದು ತೋರಿದ ರೀತಿಯಲ್ಲಿ ಆಲೋಚಿಸಿ ಮೇರೆ ಗಜೆಟ್ ಆಫ್ ಇಂಡಿಯಾದಲ್ಲಿ ನೋಟಿಫಿಕೇಶನ್ ಪ್ರಕಟಿಸಿಯಾದ ಮೇಲೆ ಅಂಥಾ ಪದಾರ್ಥವು ಶೆಡ್ಯೂಲ್‌ನಲ್ಲಿ ಸೇರಿಸಲ್ಪಟ್ಟಿದೆಯೆಂದು ಎಣಿಸಲಾಗುವುದು.

ಶೆಡ್ಯೂಲ್.

(ಸೆಕ್ಷನ್ 2 ನ್ನು ನೋಡಿ)

1. ಹಣ್ಣು
2. ತರಕಾರಿ
3. ಸೊಪ್ಪು
4. ಕರಾವಿನ ಉತ್ಪತ್ತಿ
5. ಹೊಗೆ ಸೊಪ್ಪು
6. ಕಾಫಿ.
7. ಚಕ್ಕೆ ಲವಂಗ ಮತ್ತು ಚಿಪ್ಪುಗಳು.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಆದರಲ್ಲಿ ಹಿಂದಿನ ವರ್ಷದ ಪೂರ್ತಿಯೊಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,650-6-0 ರೂ. ವಿಮಾ ಕಂತು ಬರುತ್ತೆ. ಕಂಪನಿಯಿಂದ ಭರವಸೆ ಪಡಿಸುವ ಹಣ ರೂ. 39,38,150. ಬಾಕಿ ರೂ. 1,29,500 ವಾರಸಾ ಭರವಸೆ ಕೊಟ್ಟಿದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಗಾಂತ್ಯದಲ್ಲಿ ತೀರ್ಮಾನಿಸಲು, ಮುಂದುವರಿಸಲು ಇಲ್ಲವೇ ನಾರ್ಜಿಗೊಳಿಸಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ 4,13,775 ಹೆಚ್ಚಿದೆ.

ಈ ಕೆಲಸಗಳ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ನಿಬಂಧಕರುಗಳೊಡನೆ ಅನುಭವಿಸಲು ನಿಮ್ಮೆಲ್ಲರುಗಳು ಇಷ್ಟಪಡುತ್ತಾರೆ

ಇಂಡಿಯಾ ಸರಕಾರದ ಭರವಸೆಯಿಂದ ಬೀಮೆವಿಸು ಕೆಲಸ ಮಾಡುವ 215 ಇಂಡಿಯನರ ಕಂಪನಿಗಳಲ್ಲಿಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಆಯರ್ ಬುಕ್' ಎಂಬ ಸ್ತವದಿಂದ ತಿಳಿಯುವುದಕ್ಕಿದೆ. ಈ ಕಂಪನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾ ದೊಡ್ಡ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ಬಲಿಗೆ ಕ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ ದಕ್ಷಿಣ ಭಾರತದಲ್ಲಿ ಹೆದ್ದಾರಿಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೆಯದಾಗಿದೆ. ಒಂದನೇಯ ದಾದ ಕಂಪನಿಯು ಇದಕ್ಕಿಂತ 25 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟಿರುವುದು.

ವಿವಿಧ ಕಂತುಗಳ ಆದಾಯ:—ಈ ವರ್ಷದ ವಿವಿಧ ಕಂತುಗಳ ಆದಾಯವು (ವಾರಸಾ ಭರವಸೆ ಹೊರತು ಪಡಿಸಿ ಯಾ ಕಂತಿನ ಅವಯಕ್ಕಿಂತ ಹೆಚ್ಚಿದೆ ಹೆಚ್ಚಿದೆ. ವರದು ವರ್ಷದ ಜೀವ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 3,36,767-6-6 ರೂಪಾಯಿ.

ಜೀವ ವಿಮಾ ಫಂಡು:—ಈ ಕಂಪನಿಯ ಜೀವ ವಿಮಾ ಫಂಡು ರೂ. 75,258-14-0 ರಿಂದ, ವ್ಯವಸಾಯ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ಪಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿವಿಧ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿವಿಧ ಕಂಪನಿಗಳ ವಾರ್ಷಿಕ ವೃತ್ತಾಂತದಲ್ಲಿ ಜೊಗಳಲು ಹರಾವಪಡ್ಡೇ ಆಗಿದೆ.

ಭಾರತ ಜೀವನವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಬಾನೂನು ಮೇರೆ ಠೇವಣಾತಿ ಮಾಡತಕ್ಕದ್ದಿದ್ದ ರೂ, 2 ಲಕ್ಷವನ್ನು ಪೂರ್ತಿಯೊಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷಪಡುವರೆಂದು ನಿರುವರು.

ಸಿ. ಯಂ. ತಿಮ್ಮಯ್ಯ,
(52-27) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಧಾತು ಪುಷ್ಟಿ ಲೇಪ.

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ತತ್ಕಾಲವಾದ ಶಕ್ತಿಸಂಪಾದಕ ರಸಾಯನಿ, ಸ್ವಪ್ನಾವಸ್ಥೆ, ವೀರ್ಯದ ಉಷ್ಣತೆ, ಧಾತು ಜಂತ್ರಿಯೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಆಕರ್ಷತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆಲ್ಲದೆ ನರಗಳ ಬೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯಸ್ಥಿರತ್ವವನ್ನು ಉಂಟುಮಾಡುತ್ತದೆ.

ಬಾಟ್ಲಿ 1ಕ್ಕೆ ರೂ. 2—8—0.

ಮಲೇರಿಯಾ ನಿವಾರಿಣಿ.

ಇದು ಚಳಿ ಜ್ವರ, ಚಾತುರ್ಥಿಕ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರನ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ಕ್ಕೆ ರೂ. 1—8—0; ಸಣ್ಣ ಬಾಟ್ಲಿ ರೂ. 0—13—0.

ಫ್ಲೀನ್ ಮಿಕ್ಷ್ಚರ್.

ಜ್ವರಗೆಡ್ಡೆ, ಅಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಆಕಳಿಕೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟು ಮಾಡುವುದು. ಬಾಟ್ಲಿ 1ಕ್ಕೆ ರೂ. 1—2—0.

ಬಾಲಗ್ರಹ ಗುಟಿಕೆ.

ಮಕ್ಕಳಜೀರ್ಣ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮಾರ್ಸ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ಕ್ಕೆ 0—10—0.

ಎಲ್ಲಾ ಔಷಧಿಗಳು ಪೋಷ್ಟಿನಲ್ಲಿ ಕಳುಹಿಸಲ್ಪಡುವುದು. ಲಭ್ಯವಾಗಿಗೆ ಬರೆಯಿರಿ. ಕಾರ್ಯಾಲಯಗಳಲ್ಲಿ ಕೊಂಗ್ರೆಸ್ ಕಛೇರಿಯ ಔಷಧಿ ರಿಯಾಯಿತಿ ಕೊಡಲಾಗುವುದು.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ವಿವಿಧ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ (2) ವಿ. ಬಿ. ಕಾಮತ್, ಮಡಿಕೇರಿ. (3) ಬಿ. ಪುಟ್ಟಯ್ಯ ಕೆಸ್ಟ್ ಎಂಡ್ ಸನ್ಸ್, ಸೋಮವಾರಪೇಟೆ. (4) ಎ. ಎಸ್. ಸೂಬಯ್ಯ, ಸುಂಟಿಕೊಪ್ಪ. (5) ಮುಂಡರ ಪೈಯ್ಯ ಸುಳ್ಯ. (6) ಸಾರ್ವಜನಿಕ ಲೈಬ್ರರಿ ಮತ್ತು ಆಸ್ಪತ್ರೆ, ವಿರಾಜಪೇಟೆ. (7) ಎ. ಎಸ್. ಪುಟ್ಟಯ್ಯ, ಗೋಣಿಕೊಪ್ಪಲು. [18]

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂಪೂರ್ಣವಾಗಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿವೆ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನನ್ನ ಮುಖ್ಯ ಸಿದ್ಧತೆ.

ಜೇನೆಯಿಲ್ಲದೆ ಹಲ್ಲು ತೀಳುವುದು. ನೋವಿಲ್ಲದೆ ಹಲ್ಲು ತುಚ್ಚಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ಕೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕೆನೈಟ್, ಎಂದೂ ತುಂಡಾಗದ ಪೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂ
5 ಕಷವಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುದು.

ನಿಮಗೆ ತೃಪ್ತಿಯಾಗುವೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ಅಖಿಲ ಕೊಡಗು ಸಹಕಾರ ಸಮ್ಮೇಳನ.

ಅಧ್ಯಕ್ಷರಾದ ಶ್ರೀಮಾನ್ ಎ. ಕೆ. ಯಜ್ಞನಾರಾಯಣ
ಐಯ್ಯರ್, ಬಿ.ಎಂ, ಎ.. ಯವರ ಭಾಷಣ.

ಅಖಿಲ ಕೊಡಗು ಕೊ ಆಪರೇಟಿವ್ ಸುಪರ ಸಭೆಯ ದಶಮ ವಾರ್ಷಿಕೋತ್ಸವ ಸಮಾರಂಭ ನೂಡಲು ನನ್ನನ್ನು ಆಹ್ವಾನಿಸಿರುವುದರಿಂದ ನಾನು ಬಹುವಾಗಿ ಸಂತೋಷಿತನಾಗಿರುವೆನು. ಈ ಮಹತ್ತರ ಜೆಯನ್ನು ನಾನು ಬಹುವಾಗಿ ಶ್ಲಾಘಿಸಿದು ತ್ತೇನೆ ನೂತ್ಯಲ್ಲದೆ ಈ ಪ್ರೀತಿ ಪುರಸ್ಕರ ಆಯ್ಕಾನಕ್ಕಾಗಿ ನಂದಿಸುತ್ತೇನೆ. ಇಂಥಾ ಸುಸಂದರ್ಭದಲ್ಲಿ ಅಧ್ಯಕ್ಷರಾಗಿರುವಪರಿಗೆ ಇರಬೇಕಾದ ದಕ್ಷತೆಯು ನನ್ನಲ್ಲಿ ಇಲ್ಲವೆಂಬ ನನಗೇ ಗೊತ್ತಿದೆ ಮತ್ತು ಈ ಆಹ್ವಾನಕ್ಕೆ ಒಪ್ಪಿರುವುದಕ್ಕೆ ನಾನೇ ಲಘೀರನಾಗಿರುತ್ತೇನೆ. ಸಹಕಾರವೆಲ್ಲೇ ಒಡನಾಡಿ ಅಸೀಮ ನೈಪುಣತೆಯನ್ನು ಪಡೆದ ಅನೇಕರು ಇರುವುದಕ್ಕೆ ಈ ಅಧ್ಯಕ್ಷತನ ವನ್ನು ಅಲಂಕರಿಸಿರುವರಾದರೆ. ಆ ನೈಪುಣ್ಯತೆಯು ನನಗಿದೆಯೆಂದು ನಾನು ಬೇಳಲಾರೆ. ಆದರೂ, ಸಹಕಾರ ಜಗತ್ತಿನಲ್ಲಿ ಅಸಕ್ತಿಯು ನನಗೆ ಬಹುಕಾಲದಿಂದ ಇರುವೆಂದೂ, ಕೆಲವು ಶ್ರದ್ಧೋನ್ನತ್ಯ ಶಕ್ತಿಗಳ ಸಂಗಡ 'ಬೆಂಗಳೂರು ಏಪೆಕ್ಸ್ ಕೊ-ಆಪರೇಟಿವ್ ಸೊಸೈಟಿ'ಯೆಂಬ ಸಂಘವನ್ನು ಪ್ರಾರಂಭಿಸಿ ಅದರ ಮೊದಲನೆಯ ಅಧ್ಯಕ್ಷನಾಗಿ ಏಳೂವರೆ ವರುಷಗಳ ಕಾಲ ಕೆಲಸ ಮಾಡಿರುವುದೂ ನನಗೆ ಇಷ್ಟೊಂದು ಸನ್ನೆ ಆಹ್ವಾನಕ್ಕೆ ಒಪ್ಪಿಕೊಳ್ಳಲು ಹೇಳಬೇಕಾಯಿತು.

ಸ್ವಸಹಾಯವನ್ನೆ ಸಲಂಬಿಸಿ ಇರುವ ಹಳ್ಳಿಗಳ ಜನಸ್ಥಿತಿಯನ್ನು ಕಡಿಮೆ ಮಾಡಲು ಸಹಕಾರ ಇಲಾಖೆಗೂ ಸ್ವಸಹಾಯ ಇಲಾಖೆಗೂ ಇನ್ನು ಅತಿ ಹೆಚ್ಚಿನ ಸಂಬಂಧವನ್ನು ನೀವು ಜನಸಿಗೆ ಹುಟ್ಟಿಕೊಂಡಿರುತ್ತೀರೆಂಬುದಕ್ಕೆ ನನ್ನ ಆಹ್ವಾನವೇ ನಿದರ್ಶನವೆಂದು ಭಾವಿಸುತ್ತೇನೆ. ಈ ಭಾವನೆಯಿಂದ ಈ ಸಮ್ಮೇಳನವನ್ನು ನಾನು ಸ್ವೀಕರಿಸುತ್ತೇನೆ.

ಕಳೆದ ಕೆಲವು ವರ್ಷಗಳಿಂದ ಸಹಕಾರ ಸಂಘಗಳಿಗೆ ಬ್ಯಾರುವ ಪರಿಸ್ಥಿತಿಯನ್ನು ನೋಡಿದರೆ ನಿನ್ನು ಹೇರಬಲ್ಲಿರುವ ಸಹಕಾರ ಸಂಘಗಳು ಕಳೆದ ವರ್ಷ ಒಟ್ಟಾರೆ ಶೃಪ್ತಿಕರವಾಗಿಯೂ, ಸಫಲವಾಗಿಯೂ ಕೆಲಸ ನಡೆಸಿರುತ್ತವೆಂಬುದಕ್ಕೆ ನಿರಾಸೆಗೆ ಪ್ರಥಮತಃ ಅಭಿನಂದಿಸುತ್ತೇನೆ. ಇದು ಸಾಧಾರಣ ಸಿವಾರಸ್ಯಾಗಲಿಲ್ಲ.—ಏಕೆಂದರೆ ಈ ದೇಶದ ವಿಸ್ತಾರ ಅಥವ ಜನಸಂಖ್ಯೆಯಸ್ಟ್ನೇ ಬೇರೆ ದೇಶದ ನಿಸ್ತಾರ ಸುತ್ತು ಜನ ಸಂಖ್ಯೆಗೆ ಹೋಲಿಸಿದರೆ ಅಲ್ಲಿರುವ ಸಹಕಾರ ಸಂಘಗಳ ಸಂಖ್ಯೆ ಅಥವ ವರ್ಗಗಳಿಗಿಂತ ನಿನ್ನು ಸಹಕಾರ ಸಂಘಗಳೇ ಅಧಿಕವಾಗಿವೆ. ವ್ಯವಸಾಯದಲ್ಲಿರುವ 1 ಲಕ್ಷದ ಮೂವತ್ತು ಸಾವಿರ ನಿಕ್ಕೆಗಿಂತ ಸ್ವಲ್ಪ ಹೆಚ್ಚಿನ ಭೂವಿಸ್ತಾರಕ್ಕೂ, ಸುಮಾರು ಒಂದು ಲಕ್ಷದ ಅರವತ್ತು ಸಾವಿರ ಜನಸಂಖ್ಯೆಗೂ ನಿಮ್ಮ ಸಂಘಗಳು 310 ಇವೆ. ಈ ಸಂಘಗಳು ಪ್ರಯೋಜನ ಕೊಡುವ ಹಳ್ಳಿಗಳ ಸಂಖ್ಯೆಯನ್ನು ವಿಚಾರಿಸಿದರೆ ಇವು ಒಂದು ಹಳ್ಳಿಗೆ ಒಂದು ಸಂಘವಿದ್ದಂತಾಯಿತು. ಬರಿಯ ಸಂಖ್ಯೆಯನ್ನು ತೆಗೆದು ಕೊಂಡರೂ ನಿಮ್ಮ ಕರ್ತವ್ಯದ ಭಾರವು ದೊಡ್ಡದಾಗಿದೆ. ಈ ಸಂಘಗಳು ಯಾವ ಬಗೆಯ ಸೇವೆ ಒದಗಿಸಬೇಕಾಗಿದೆ, ಎಷ್ಟರಮಟ್ಟಿಗೆ ಅವು ಸಫಲವಾಗಿವೆ ಎಂಬುದನ್ನು ನಿರ್ಣಯಿಸಲು ಸಾಧ್ಯವಾಗಿಲ್ಲ. ಆದರೆ ಸಾಮಾನ್ಯವಾಗಿ ಹೇಳುವುದಾದರೆ ಸಹಕಾರ ಸಂಘಗಳು ಜನಸಿಗೆ ಹತ್ತಿರವಾಗಿವೆ ಎಂಬುದು ಸ್ಪಷ್ಟವಾಗಿದೆ. ಸಹಕಾರ ಸಂಘಗಳು ಜನಸಿಗೆ ಹತ್ತಿರವಾಗಿವೆ ಎಂಬುದಕ್ಕೆ ಸಾಕ್ಷಿಯಾಗಿ ಸಹಕಾರ ಸಂಘಗಳ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳವನ್ನು ಹೇಳಬಹುದು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು.

ಕಾಂಗ್ರೆಸ್ ಸದಸ್ಯರ ಪಟ್ಟಿಗಳು ಪರಿಶೀಲಿಸಲ್ಪಡಬೇಕು.

ರೂಪಾಯಿಯ ದರ ಇಳಿಸಲ್ಪಡಬೇಕು.

ಸರ್ಕಾರವು ಸಂಸ್ಥಾನದ ಬಳಲಿಕೆಯನ್ನು ಪರಿಹರಿಸಲು ಸಹಾಯ ಮಾಡುವಂತೆ ಕಾಂಗ್ರೆಸ್ಸು ಅವರ ಸಹಾಯಕ್ಕೆ ಬರಬೇಕು.

ಈ ಸಾರಿಯ ವರ್ಕಿಂಗ್ ಕಮಿಟಿಯ ಮೀಟಿಂಗು ಅತ್ಯಂತ ಮಹತ್ವವಿದ್ದಿರುವ ಸಂಸ್ಥಾನಗಳ ಪ್ರಜೆಗಳ ಹೋರಾಟ, ನಾಣ್ಯ ವಿನಿಮಯ ದರ, ಕಾಂಗ್ರೆಸ್ಸಿನಲ್ಲಿಯ ಕೊಳೆಯನ್ನು ಹೋಗಲಾಡಿಸುವ ಇವೇ ಮೊದಲಾದ ಮಹತ್ವದ ವಿಷಯಗಳು ನಿಶ್ಚರ್ಶಿಸಲ್ಪಟ್ಟವು. ಠರಾವುಗಳನ್ನು ವಾಚಕರ ಅವಗಾಹನೆಗೆ ಕೊಡಲಾಗಿದೆ.

ಸಂಸ್ಥಾನಗಳ ವಿಚಾರ.

'ದೇಶದ ಬೇರೆ ಬೇರೆ ಭಾಗದಲ್ಲಿರುವ ಹಿಂದೀ ಸಂಸ್ಥಾನಗಳಲ್ಲಿನ ಜನರಲ್ಲಿ ಜಾಗೃತಿಯಾಗಿರುವುದನ್ನು ವರ್ಕಿಂಗ್ ಕಮಿಟಿಯು ಸ್ವಾಗತಿಸುವಲ್ಲಿದೆ. ಇದು ಮುಂದೆ ಸಂಸ್ಥಾನಗಳಲ್ಲಿನ ಜವಾಬ್ದಾರಿ ಸರ್ಕಾರಗಳನ್ನೊಳಗೊಂಡ ಜಾಗೃತ ಭಾರತ ಸ್ವಾತಂತ್ರ್ಯವು ಪೂರ್ವಾರಂಭಗಾಂಭೂತಿಸುತ್ತದೆ ಮತ್ತು ಸ್ವಾತಂತ್ರ್ಯವಾಗಿ ನಡೆಯುತ್ತಿರುವ ಹೋರಾಟಗಳಿಗೆ ತನ್ನ ನೈತಿಕವಾದ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.'

'ಈ ಜಾಗೃತಿಯ ಪರಿಣಾಮವನ್ನು ಸರಿಸಿ ಕೆಲವು ಸಂಸ್ಥಾನಾಧೀಶ್ವರರು ಪ್ರಜೆಗಳೊಂದಿಗೆ ಸಹಕರಿಸಿ ಅವರ ಕೇಳಿಕೆಯನ್ನು ಮನ್ನಿಸುತ್ತಿರುವುದನ್ನು ಕಮಿಟಿಯು ಮೆಚ್ಚಿರುವದು. ಆದರೆ ಕೆಲವು ಸಂಸ್ಥಾನಾಧೀಶ್ವರರು ಇದನ್ನು ಪ್ರತಿಬಂಧಿಸಿ 'ಕ್ರೂರ ಮತ್ತು ಅಮಾನುಷ ದಬ್ಬಾಳಿಕೆಗಳನ್ನು ನಡಿಸುತ್ತಿರುವುದನ್ನು ನೋಡಿ ಈ ಕಮಿಟಿಯು ವಿಷಾಧಿಸುತ್ತದೆ. ಅಲ್ಲದೆ ಕೆಲವು ಸಂಸ್ಥಾನಾಧೀಶ್ವರರು ಜನತೆಯ ಕೋರಿಕೆಯನ್ನು ಸಲ್ಲಿಸಬೆ ತಮ್ಮಲಿಚಿಸುವಂತೆ ಪ್ರಜೆಗಳನ್ನು ಬ್ರಿಟಿಷ್ ಸರ್ಕಾರವು ಸಹಾಯ ಪಡೆಯಿಲೆತ್ನಿಸುವುದನ್ನು ಈ ಕಮಿಟಿಯು ಖಂಡಿಸುತ್ತದೆ. ಇಂಥಾ ಚಳವಳಿಗಳನ್ನು ನಿಲ್ಲಿಸಲು ಬ್ರಿಟಿಷ್ ಸರ್ಕಾರವು ಸಹಾಯ ಮಾಡುವದೇ ಅಪರೆ ಪ್ರಜೆಗಳ ಸಂರಕ್ಷಣೆ ಮಾಡಲು ತನಗೂ ಅಧಿಕಾರ ವಿದೆಯೆಂಬುದನ್ನು ಕಾಂಗ್ರೆಸು ಸಾರಿ ಹೇಳುತ್ತದೆ.'

'ಸಂಸ್ಥಾನಗಳ ಒಗ್ಗೆ ಹರಿಪುರದಲ್ಲಾದ ಗೊತ್ತುವಳಿಯನ್ನು ಈ ಸಂಸ್ಥೆಯು ಪುಷ್ಟೀಕರಿಸಿ ಅದು ಅತ್ಯಂತ ಯೋಗ್ಯವಾದ್ದರಿಂದ ಮುಂದೆಯೂ ಇದು ಸಾಗಬೇಕು. ಜವಾಬ್ದಾರಿ ಸರ್ಕಾರಕ್ಕಾಗಿ ಸಂಸ್ಥಾನಗಳಲ್ಲಿ ಪಡೆಯುತ್ತಿರುವ ಚಳವಳಿಯನ್ನು ಕಾಂಗ್ರೆಸ್ ಸ್ವಾಗತೀಕರಿಸಿದರೂ ಸಂಸ್ಥಾನಗಳಿಗೆ ಸಂಬಂಧಿಸಿದ ಜನರು ಸತ್ಯಾಗ್ರಹ ಮೊದಲಾದ ಚಟುವಟಿಕೆಗಳಲ್ಲಿ ಭಾಗ ತೆಗೆದುಕೊಳ್ಳುವದರಿಂದ ಪ್ರಜೆಗಳ ಚಳವಳಿಯು ಪ್ರಬಲವಾಗಲಾರದು ಮತ್ತು ಅವರಿಗೆ ತಮ್ಮ ಆತ್ಮರಕ್ಷೆಯ ಪರಿಮಿತಿ ತಿಳಿಯಲಾರದು.'

'ಎಲ್ಲಾ ಸಂಸ್ಥಾನಗಳ ಬಳವಳಿಗಳೂ ಕಾಂಗ್ರೆಸಿನ ಆಡಿಂಸಾ ಧೋರಣಾನ್ನು ಅನುಲಂಬಿಸಿ ನಡಿಯಬೆಸಡೆಂದು ಈ ಕಮಿಟಿಯು ನಂಬುತ್ತದೆ.'

ಕಾಂಗ್ರೆಸ್ ಶುದ್ಧೀಕರಣ ಸಮಸ್ಯೆ.

'ಕಾಂಗ್ರೆಸ್ಸಿನ ತಿಂತರ್ಗತ ಆಡಳಿತೆಯಲ್ಲಿಯೂ, ಅಸ್ಪಾಮೂಣಿಕ ನಡತೆ ಇರುವವರೆಂದೂ ಆನೇಕ ಸ್ಥಾಂತಗಳಿಂದ ವರ್ಕಿಂಗ್ ಕಮಿಟಿಗೆ ತಿಳಿಸಿಬಂದಿವೆ. ಇಂಥಾ ಮೋಟು ಸದಸ್ಯರನ್ನು ತೊಡಸುವದು ಕೂಡಲೇ ನಿಲ್ಲಿಸಲ್ಪಡಬೇಕು ಇದಕ್ಕಾಗಿ ಕಾಂಗ್ರೆಸ್ ಕಮಿಟಿಗಳ ರಿಜಿಸ್ಟರುಗಳನ್ನು ಪರಿಶೀಲಿಸಿ ಅನರ್ಹರೆಂದು ಕಂಡು ಬಂದ ಹೆಸರನ್ನು ರಿಜಿಸ್ಟರುಗಳಿಂದ ತಕ್ಷಿಣಗೆಯಬೇಕೆಂದು ಕಮಿಟಿಯು ಖಂಡಿತ ಅಭಿಪ್ರಾಯವಿದೆ. ಕಾಂಗ್ರೆಸು ಲಕ್ಷ್ಯವಧಿ ಹಿಂದೀಯರಿಗೆ ಸ್ವಾತಂತ್ರ್ಯಗಳಿಸಿ ಕೊಡುವ ತನ್ನ ಉದಾತ್ತ ಧ್ಯೇಯದ ಬಗ್ಗೆ ಕೋಟ್ಯಾನುವಧಿ ಜನರಿಂದ ಸಹಾನುಭೂತಿಯನ್ನು ಸಂಪಾದಿಸುತ್ತಾ ಒಂದು ಜೋರಾದ ಸಂಸ್ಥೆಯೆಂದು ಮನಸಾರಿಕೆ ಪಡಿ ಕೊಟ್ಟಿದೆ. ಈ ಯಶಸ್ಸು ಕಾಂಗ್ರೆಸ್ಸಿನ ವಿಸ್ತಾರ ಕಾರ್ಯಕರ್ತರೆಲ್ಲರ ದೆ ಪೊಳ್ಳು ಸದಸ್ಯತ್ವದಲ್ಲಿಲ್ಲ. ಅದರಿಂದ ಕಾಂಗ್ರೆಸಿನ ನೈಜಸ್ಥಿತಿಗಾಗಿ ಅನೇಕ ಕಾಂಗ್ರೆಸ್ ಸದಸ್ಯರ ಪಟ್ಟಿಯನ್ನು ಅವಲೋಕಿಸಕಕ್ಕನ್ನು ಎಲ್ಲಾ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳೂ ಈ ಕಾರ್ಯಕ್ಕೆ ಒಡನೇ ತೊಡಗಬೇಕೆಂದೂ, 1939ನೇ ವರ್ಷ ಅಂತ್ಯದೊಳಗೆ ಈ ಕಾರ್ಯವನ್ನು ನುಗಿಸಿ ಎ. ಐ. ಸಿ. ಸಿ ಗೆ ವರದಿ ಒಪ್ಪಿಸಬೇಕೆಂದೂ ಅಭಿಪ್ರಾಯ ಪಡುತ್ತದೆ.'

'ಇನ್ನು ಕಾಂಗ್ರೆಸ್ ಸಂಸ್ಥೆಯು ಹೆಚ್ಚು ಬಲಶಾಲಿಯಾಗಬೇಕಾದರೆ ಅನರ್ಹ ಸದಸ್ಯರು ಸೇರದಂತೆ ಅದರ ಘಟನೆ, ನಿಯಮ ನೊವಲಾಮವುಗಳಲ್ಲಿ ತಿದ್ದುಪಡಿಯಾಗಬೇಕು. ಕಾಂಗ್ರೆಸ್ ಪ್ರತಿನಿಧಿಗಳಾಗಿ ಇಚ್ಛಿಸುವವರ ವಿಷಯದಲ್ಲಿ ಕಾಂಗ್ರೆಸ್ ಘಟನೆಯ ನಿನೇ ಕಲಮಿನನ್ವಯ ಸದಾ ಪ್ರಾಧಿಕಾರಿಯಾಗಬೇಕೆಂಬ ನಿರ್ಣಯದ ಜೊತೆಗೆ ಪ್ರತಿನಿಧಿ ಆಯ್ಕೆಗಿಂತ ಮೊದಲು ಆತನ ನೂರು ವರ್ಷಗಳಿಗಿಂತ ಕಾಂಗ್ರೆಸ್ ಸದಸ್ಯನಿರಬೇಕು ಮತ್ತು ಸ್ವತಹ ೨ ಸಾವಿರ ರೂಪಾಯಿ ನೂಲುವದು ಅಥವಾ ಪ್ರಾಂತೀಕ ಕಮಿಟಿಯವರು ಗೊತ್ತುಪಡಿಸಿ ಮತ್ತಾವ ಕೆಲಸವನ್ನು ಮಾಡಿರಬೇಕು.'

ತ್ರಿಪುರಿ ಕಾಂಗ್ರೆಸ್ ಸಿದ್ಧತೆ.

ಪೂರ್ವ ಸಿದ್ಧತೆಗಳು.

ಕೆಲವು ವರ್ಷಗಳಿಂದ ಕಾಂಗ್ರೆಸ್ ಅಧಿವೇಶನವು ಗ್ರಾಮಗಳಲ್ಲಿ ಆಗುತ್ತಿರುವದು ಎಲ್ಲರಿಗೂ ವಿದಿತವಿರುವ ವಿಚಾರ. ಕಳೆದ ವರ್ಷ ಹರಿಪುರದಲ್ಲಿ ನಡೆದ ಅಧಿವೇಶನವು ಹಿಂದಿನ ಅಧಿವೇಶನಗಳೆಲ್ಲಾ ಪುಂಕುಗೊಳಿಸಿತೆಂದು ನಾವು ತಿಳಿದಿರುವೆವು ಹೀಗೆ ವರ್ಷ ವರ್ಷವೂ ಅಪೂಳವಾಗಿ ಅಭಿವೃದ್ಧಿಗೊಂಡು ನಡೆಯುತ್ತಿರುವ ಕಾಂಗ್ರೆಸ್ಸಿನ ಈ ವರ್ಷದ ಅಧಿವೇಶನವು ಮಹಾ ಕೋಸಲಕ್ಕೆ ಸಮೀಪ ತ್ರಿಪುರ ಎಂಬಲ್ಲಿ ಬರುವ ಮಾರ್ಚ್ ತಾ. 10, 11 ಮತ್ತು 12ರಲ್ಲಿ ಜರಗಲಿರುವದು. ಅದಕ್ಕೆ ಬೇಕಾದ ಎಲ್ಲಾ ಸಲಕರಣೆಗಳೂ ಸಿದ್ಧಗೊಳಿಸಲ್ಪಡುತ್ತಿವೆ.

ಸ್ಥಳ ಮತ್ತು ನೀರು.

ಹರಿಪುರದಂತೆಯೇ ಈ ವರ್ಷ ಅಧಿವೇಶನ ನಡೆಯುವ ಸ್ಥಾನವು ಒಂದು ಗ್ರಾಮವಾಗಿದ್ದು, ಹತ್ತಿರದ ರೈಲ್ವೆ ಸ್ಟೇಷನು ಈ ಗ್ರಾಮದಿಂದ ಎಂಟು ಮೈಲು ದೂರದಲ್ಲಿದೆ. ಏನೆಂದರೂ ಈ ವರ್ಷ ಮೂರು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯು ನೆರೆಯುವೀಕ್ಷಿಸುವ ಭಾವನೆಯಿಂದ ತಾತ್ಕಾಲಿಕವಾದ ನಗರ ನಿರ್ಮಾಣ ಕಾರ್ಯವು ನಡೆಯುತ್ತಿದೆ ಇದಕ್ಕಾಗಿಯೆ ಬಹಳ ವಿಸ್ತಾರವಾದ ಸ್ಥಳವಾನವನ್ನು ಆರಿಸಿರುವರು ಇಂಥಾ ದೊಡ್ಡ ಜನಸಂಖ್ಯೆಯು ನೆರೆಯುವಾಗ ಅವರಿಗೆ ನೀರಿನ ಸರಬರಾಯಿಯ ಸಮಸ್ಯೆಯು ಮುಖ್ಯವಾದ್ದು ಕಳಗ ವರ್ಷ ಕಠಿತೀ ಸಬಯು ಪತ್ರಿಕೆಗಳಲ್ಲಿದ್ದುದರಿಂದ ಈ ವಿಚಾರ ಹೊಂಪರ ಇರಲಿಲ್ಲ. ಈ ವರ್ಷವಾದರೋ ಸಬಗಳೆಲ್ಲ. ಅಂತೂ ಜನರಿಗೆ ನಳಿಗೆ ಬಾವಿ (Tube well) ಗಳಿಂದ ನೀರಿನ ಸರಬರಾಯಿ ಮಾಡುವ ಏರ್ಪಾಡು ಮಾಡುತ್ತಲಿದ್ದಾರೆ.

ಔಷೋಪಚಾರ.

ಕಳೆದ ವರ್ಷ ಔಷೋಪಚಾರದ ಏರ್ಪಾಡನ್ನು ಸ್ವಾಗತ ಕಮಿಟಿಯವರು ಮಾಡಿದ್ದರು. ಆವರ ಈ ವರ್ಷ ಹೊಸದೊಂದು ಏರ್ಪಾಡು ಮಾಡಲಾಗುವುದು. ಪ್ರತಿಯೊಂದು ಪ್ರಾಂತದಿಂದಲೂ ಹೊಟೆಲ್ ಮಾಲೀಕರು ಬಂದು ಉಪಹಾರ, ಭೋಜನ ಮಂದಿರಗಳನ್ನು ತ್ರಿಪುರಿಯಲ್ಲಿ ನಡಿಸಬೇಕೆಂದು ಆಯ್ಕಾನ ಹೋಗುವದು. ಆದರಂತೆ ಪ್ರತಿನಿಧಿಗಳಿಗೆ ಅವರವರ ಪ್ರಾಂತವ ಊಟೋಪಚಾರಗಳೇ ಲಭಿಸುವವು.

ಆರೋಗ್ಯಪಾಲನೆ.

ಒಂದು ಸ್ಥಳದಲ್ಲಿ ಲಕ್ಷೋವಲಕ್ಷ ಜನರು ಸೇರುವ ಪ್ರಯುಕ್ತ ಆ ಜನರ ಆರೋಗ್ಯವನ್ನು ರಕ್ಷಿಸಲು ಏರ್ಪಾಡು ಮಾಡುವದು ಅಗತ್ಯ. ಅದಕ್ಕಾಗಿಯೇ ಆರೋಗ್ಯ ಖಾತೆಯವರು ಕಾರ್ಯಾರಂಭ ಮಾಡಿರುವರು ಆಸ್ಪತ್ರೆಗಳು ಸ್ಥಾಪಿಸಲ್ಪಟ್ಟಿವೆ. ವೈದ್ಯರೂ, ಕಂಪೌಂಡರುಗಳೂ, ಕಾಂಗ್ರೆಸ್ ಆಸ್ಪತ್ರೆಗಳಲ್ಲಿ ಕೆಲಸಕ್ಕೆ ತೊಡಗಿರುವರು.

ಸಂಚಾರ ಕಾರ್ಯ

ರೈಲ್ವೆ ಸ್ಟೇಷನಿಂದ ಅಧಿವೇಶನ ಸ್ಥಳಕ್ಕೆ ಹೋಗಲು ಅನುಕೂಲವಾಗುವಂತೆ ಸ್ವಾಗತ ಸಮಿತಿಯವರು ಬಸ್ಸುಗಳನ್ನು ಸಾಮಾನು ಸಾಗಿಸಲು ಲಾರಿಗಳನ್ನೂ ಏರ್ಪಾಡಿಸಲಿರುವರು. ಆದ್ದರಿಂದ ಜನತೆಯ ಅಗಮನಕ್ಕೂ, ನಿರ್ಗಮನಕ್ಕೂ ಬಾಧೆಯ ಸೌಕರ್ಯಗಳು ಮಾಡಲ್ಪಟ್ಟಿವೆ.

ವೀಕ್ಷಣೆಗಳ ನಿರ್ಮಾಣ.

ಹರಿಪುರದಲ್ಲಿ ಕಳೆದ ವರ್ಷ ಮಾಡಿದಂತೆಯೇ ವಿದ್ಯುದ್ದೀಪಗಳ ನಿರ್ಮಾಣ ಮಾಡಬೇಕೆಂದಿದ್ದಾರೆ. ಆದರೆ ವಿದ್ಯುಚ್ಛಕ್ತಿಯ ಕಂಪೆನಿಯವರು ಬಹಳ ಹೆಚ್ಚು ಹಣ ಕೇಳಿದ್ದರಿಂದ ವಿದ್ಯುದ್ದೀಪ ಹಾಕಿಸುವುದಿಲ್ಲವಂತೆ. ಆದರೆ ಸ್ವಾಗತದಲ್ಲಿ ಎಣ್ಣೆಯ ದೀಪಗಳ ನಿರ್ಮಾಣ ಮಾಡಲಿರುವರು.

ಪ್ರದರ್ಶನ.

ರಾಷ್ಟ್ರಸಭಾ ಮಹಾಧಿವೇಶನದ ಸಂದರ್ಭದಲ್ಲಿ ಖಾದಿ, ಗಾಮ ಕೈಗಾರಿಕೆ ಮತ್ತು ಕೃಷಿ ಪದಾರ್ಥಗಳ ಪ್ರದರ್ಶನವು ನಡೆಯುವದು. ಈ ಸಮಾರಂಭದ ಉದ್ಘಾಟನೆಯ ಸಮಾರಂಭವನ್ನು ಪೂಜ್ಯಗಾಂಧಿಯವರು ನೆರವೇರಿಸಲಿರುವರು. ಅಧಿವೇಶನಕ್ಕೆ ಒಂಬತ್ತು ದಿವಸಕ್ಕೆ ಮೊದಲು ಈ ಪ್ರದರ್ಶನವು ನಡೆಯುವದು.

ಅಧ್ಯಕ್ಷೆಯ ಮೆರವಣಿಗೆ

ಕಳೆದ ಹರಿಪುರ ಅಧಿವೇಶನದಲ್ಲಿ ಅಧ್ಯಕ್ಷರ ಮೆರವಣಿಗೆಯು 51 ಎತ್ತುಗಳಿಂದ ಎಳೆಯಲ್ಪಟ್ಟ ಬಂಡಿಯಿಂದ ನಡೆಯಲ್ಪಟ್ಟಿತು. ಈ ವರ್ಷ ಎಳು ಆನೆಗಳಿಂದ ಎಳೆಯಲ್ಪಟ್ಟ ರಥದಲ್ಲಿ ಮೆರವಣಿಗೆ ನಡೆಯುವದು. ಕಾಂಗ್ರೆಸ್ ನಗರಕ್ಕೆ ಮಹಾ ಕೋಸಲದಲ್ಲಿ ರಾಜಕೀಯ ಜಾಗೃತಿ ಮಾಡಿದ ತ್ರೀ ವಿಷ್ಣುದತ್ತ ಶುಕ್ಲರವರ ಹೆಸರಿಡುವರು. ಅಂತೂ ಈ ವರ್ಷದ ಮಹಾಧಿವೇಶನವು ಮಹಾ ವಿಜೃಂಭಣೆಯಿಂದ ನಡೆಯುವದೆಂಬುದರಲ್ಲಿ ಸಂದೇಹವಿಲ್ಲ. ಯುದ್ಧಕ್ಕಾಲದ ಮುಖ್ಯ ಮಂತ್ರಿಗಳೇ ಕಂಕಣಬದ್ಧರಾಗಿ ಇರಿದಿರುವಾಗ ಅಧಿವೇಶನವು ಯಶಸ್ವಿಯಾಗುವುದರಲ್ಲಿ ಏನು ಶಾನೇ ಸಂದೇಹ?

ರೂಪಾಯಿಯ ದರ ಇಳಿಸುವಿಕೆ.

'ರೂಪಾಯಿಯ ವಿನಿಮಯ ದರವನ್ನು 18 ಪೆನ್ಸ್‌ಗಳೆಂದು ನಿರ್ಧರಿಸಿದಂದಿನಿಂದ ದೇಶದ ಅನೇಕ ಸಂಘ ಸಂಸ್ಥೆಗಳು ವಿರೋಧಿಸಿವೆ. ಈ ಬೇಡಿಕೆಯನ್ನು ಅಲಕ್ಷಿಸಿ ಸರ್ಕಾರವು ಕಳೆದ ಜುಲೈಯಲ್ಲಿ ಈ ದರವನ್ನು ಕಮ್ಮಿ ಮಾಡಲಾಗುವುದಿಲ್ಲವೆಂದು ಪ್ರಕಟಿಸಿದೆ. ಈ ವಿನಿಮಯ ದರದಿಂದ ಹಿಂದೂಸ್ತಾನದ ವ್ಯಾಪಾರವು ಕುಗ್ಗಲು ಕಾರಣವಾಗಿದೆ. ಆದ್ದರಿಂದ ಈ ಪರಿಸ್ಥಿಯಲ್ಲಿ ನಮ್ಮ ದೇಶದ ವ್ಯಾಪಾರವು ಸುಧಾರಿಸಬೇಕಾಗಿದ್ದರೆ ರೂಪಾಯಿಯ ದರವನ್ನು 1 ಶಿಲ್ಲಿಂಗ್ 4 ಪೆನ್ಸಿಗೆ ಇಳಿಸಬೇಕೆಂದು ಈ ಕಮಿಟಿಯು ಅಭಿಪ್ರಾಯಪಡುತ್ತದೆ'

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮೂತ್ರಿಗಳು —

ಬಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೂ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮೂತ್ರಿಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿಂದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೈರಡು ಮೂತ್ರಿಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ನೂರ್ಧ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಬೌಕ್ಕ್ಸ್:
52–26 ಬೆಂಗಳೂರು ಸಿಟಿ.

೪೩ ವರ್ಷಗಳಿಂದ ಅನುಭವಪಟ್ಟು ಶ್ರುತ್ಯಾತಿ ಹೊಂದಿದ

ಕರ್ಪೂರಂ ಕಂಪನಿ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಜೀರ್ಣಾಗಿ ಶಕ್ತಿ ಉಂಟಾಗುವುದು. ಬಾಟ್ಲಿಗೆ 1 ರೂ.

ಗಣೇಶ ರಾಮುಚೆಂಪ್ರೆ ಕರ್ಕಿ.
ಮುತ್ತು ಕಂಪೆನಿ,
(52–2) ಗಿರಗಾಂವ್, ಮುಂಬಯಿ ೪.

ನೋಟೀಸು.

ಈ ಕೆಳಗಿನ ಮತದಾರರು ಕೊಡಗು ಪತ್ರಿಕೆಯ ಚಂದಾ ತಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದಾರೆ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸವ್ಯ ರಸೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ನಿತಿಂ ಟೇವರ ಜವಾಬ್ದಾರಿಕೆ ಮೇಲೆ ರಸೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಶಾಶ್ವತ ಮೂಡಿ ರಸೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಯಪ್ಪನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂದೇಪಂಡ ಸೋಮಯ್ಯನವರು.
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ವಜಪತ್ತನವರು.
ಪೊನ್ನಂಪೇಟೆನಾಡು—ಮೆ ಪಿ. ಆ. ಮುದ್ದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಜ್ಜಮಡ ಮೊಣಪ್ಪನವರು ವತ್ತು ಮೆ. ಕೆ ಮೊಣಮ್ಮಯ್ಯನವರು.
ಸೋಮವಾರಪೇಟೆ—ಮೆ ಕೆ ದೊಗಪ್ಪನವರು.
ಶನಿವಾರಸಂತೆ—ಮೆ. ಎಲ್. ಎಂ. ಪ್ರಭಣ್ಣನವರು.

ಸೂಚನೆ.—ಪ್ರತಿಯೊಂದು ರಸೀತಿ ಪುಸ್ತಕಕ್ಕೂ ಯಜಮಾನರಾಗಿ ಈ ಮತಿಳಿ ಸಹಿಯಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಉಪಯೋಗವಾದ ಕೆಲವು ಕಾರ್ಯಗಳನ್ನು ಮಾಡಿದೆ. ಜನನ ಮರಣಂಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿಸು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಜುಮ್ಮೋಗ ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,04,000.

ಎಂಡೋಮೆಂಟ್ ಪೂರ್ತಿ ಪಕ್ವತೆ [illegible] ವರ್ಷಕ್ಕೆ 21 ರೂಪಾಯಿಯೂ, ಹೋಲ್ ಲೈಫ್ ವಿಮೆ ಖರಾರುಗಳಿಗೆ. ಒಂದಕ್ಕೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.
52–41

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ಪ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲೆಯನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಸಮಯೋಚಿತರಿಂದ ಸರ್ಟಿಫಿಕೇಟ್ ಸಹ ಕೊಡುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಅನುಭವವುಳ್ಳ ವೈದ್ಯ ಶಾಲೆಯು ಸ್ವಚ್ಛಾರವಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನು, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನಿನಲುಬು, ನೋವು, ಮಂಡಿ, ಪಕ್ಕಗಳು- ಈ ಭಾಗಗಳ ನೋವನ್ನು ಗುಣವಡಿಸುವುದು.

ಉಪಯೋಗದ ಕ್ರಮ:-ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ಪರಿಗೆ ಒಮ್ಮತೆಗೆನುಕೊಳ್ಳುವುದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

ವಿ.ಪಿ. ಹೆಚ್. ರಾಮುಣ್ಣೆ ವೈದ್ಯರ್.

ಮೂರಾಟಕ್ಕೆ ತಯಾರಾಗಿದೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮೂ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ನಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಜೈಲಾ ಪುಸ್ತಕಗಳೂ, ರಸೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಬಂಧಿ ಜಾತಿ, ಕುಟುಂಬ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಮಿದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,800	0	0
ಜಮೂಬಂದ ತೇವಸ್ತುತಿ	–	2,44,140	6	4
ವಸೂಲಾದ ಕ್ಷೇಮನಿಧಿ	–	1,36,525	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,753	1	11
ತ್ರಿಪ್ಟ್ ಡಿಪಾಜಿಟ್ಟು	–	35,550	2	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೂಡಿಕೊಳ್ಳುವುದನ್ನು ತಾ 1-4-1937 ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಡಿಮಾಯಿಸಿಕೆ ಮಾಡುತ್ತಾರೆ.

ಪ್ರಸಿಡೆಂಟ್:—ಸಂಬ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಜೋರೀರ ಎ. ಮಂದಣ್ಣನವರು ಬಿ ಎ, ಬಿ. ಎಲ್
ಸೆಕ್ರೆಟರಿ:—ಪುಲಿಯಂಡ ಜಿ ಐಯ್ಯಪ್ಪನ್ನರು ಬಿ ಎ, ಬಿ ಎಲ.

ತಾ. 1-10-1938

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮೂಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55	ರೂ. 35.	ರೂ. 22.
6 ತಿಂಗಳಿಗೆ—	„ 100.	„ 35.	„ 22.	„ 13
3 ತಿಂಗಳಿಗೆ—	„ 60.	„ 20.	„ 13.	„ 8.
1 ತಿಂಗಳಿಗೆ—	„ 25	„ 10	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉಪಾಖ್ಯಾನಗಳು ಲೇಖನಸಂಗ್ರಹ—
ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಧವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಪ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಆಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾವೆಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ಜಾಜ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಜಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

82-50

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೩೦—೧೨—೧೯೩೮.

ಸಂಪುಟ ೧೮] [ಸಂಚಿಕೆ ೩೦

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Offic. : UDIPI, S. K.

Branches.

1. Udipi, 2. Coondapoor, 3 Car Street, Mangalore, 4. Madras, 5. Shimoga, 6. Bunder. Mangalore, 7. Mercara, 8 Vrarajendrapet, 9. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

Advances on GOLD & OTHER VALUABLE SECURITIES are granted at all our Branches.

DEPOSITS for varying periods are accepted at the following rates :—

3 months	2½% p. a
6 & 9 months	3 % p. a
12 & 24 months	3½% p. a
SHORT TERM	2 % p. a.
SAVINGS BANK ACCOUNT	2½% p. a.

BANKING BUSINESS OF EVERY DESCRIPTION UNDERTAKEN.

52-3

ಜೈವನಾಶ

ಬೃಹನ್ನಾಶವೆಂಬುವು ಸೃಷ್ಟಿ ಮಹರ್ಷಿಗೆ ಅವಶ್ಯ ಜೀವಶಕಗಳಂತ
ಪ್ರಯೋಗಿಸಲ್ಪಟ್ಟ ಸುಧಾ ರಸಾಯನ

ಇದು ಲೈಂಗಿಕ ಶಕ್ತಿವರ್ಧಕ ಹಸಿವನ್ನು ಕೆರಳಿಸುವುದು, ಜೀರ್ಣಶಕ್ತಿಯನ್ನು ಹೆಚ್ಚಿಸಿ ಜೀವಪೋಷಕ ಸಾರವನ್ನು ವರ್ಧಿಸುವುದು. ಧೈರ್ಯ, ಕೆಮ್ಮು, ಬೀತ ಬಾಧೆ, ಉಬ್ಬಸ, ಪುಂಸ ರೋಗ, ಪೈಶ್ಯಾಘಾತ ಇವುಗಳ ಮೇಲೆ ದಿವ್ಯೌಷಧವಿದು.

ಪೌಂದು ೧ಕ್ಕೆ ರೂ. ೨—೮—೦. ಅರ್ಧಕ್ಕೆ ರೂ. ೧—೫—೦.

ಕಸ್ತೂರಿ ಮಿಶ್ರಣ ದಶಮೂಲ

ಪ್ರಸವಾನಂತರ ಬಾಣಂತಿಯಿಂದು ಉಪಯೋಗಿಸಲಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಕೀಳ್ಪುವಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಅರುಚಿ, ಅಗ್ನಿ ಮಾಂದ್ಯಮುಂತಾದವುಗಳನ್ನು ಹೋಗಲಾಡಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶರೀರಕ್ಕೆ ಧೈರ್ಯಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ ೧ಕ್ಕೆ ರೂ. ೧—೪—೦.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (3) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (4) ವಿ ಕೂರ್ಗ್ ಟ್ರೇಡರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎಸ್. ಹುಚ್ಚಯ್ಯ, ಗೋಣಿ [19]

ಡಾ. ಸಿ. ಪಿ. ಸಂಬಿಯವರ್,

ಇವರ

ದಂತಚಿಕಿತ್ಸಾಲಯವನ್ನು ಸಂಪರ್ತಿಸಿ ಶಾಸ್ತ್ರೀಯ ರೀತ್ಯಾ ಕಾರ್ಯಾಚರಿಸುತ್ತಿರುವರು. ವೀರಾಜಪೇಟೆ, ಕೊಡಗು.

ಪರೀಕ್ಷಾನಿಷ್ಪಾಯಗಳೆಲ್ಲಾ ಧರ್ಮಾರ್ಥ.

ರುಜ್ಮಾಷಿಗಾಗಿ ಸಿದ್ಧರಿದ್ದೇವೆ ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುನ್ನುಡಿ ಸಿದ್ಧತೆ.

ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ರುಜಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂಬು ಹುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕೆನೈಟ್, ಎಂದೂ ಕುಂದಾಗದ ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕೂಲಂ ಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ಶಾಶ್ವತವಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—ಲಕ್ಷ್ಮೀನಿವಾಸ್ ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಷ್ಟಕಾಲದಲ್ಲಿ ಸಂಪಾದಿಸಿದ ಹಣವನ್ನು ಶೀಘ್ರವಾಗಿ ಇಟ್ಟು ಈ ಚಿನ್ನದಂತ ಸುವರ್ಣಾವಕಾಶವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಕೇವಲ 5ರಿಂದ 5 ವರ್ಷಗಳ "ಕೂಪೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ. 5, 10, 20, 40, 80, 200, 400 ಮತ್ತು 800 ಗಳ ನಾನಾವರ್ಗದ ರೇವಜಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ವಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಸೂಚಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ತುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಏವನೊಗ್ಗ, ತರೀಕೆರೆ ಮುತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural & Industrial Bank Ltd

52-30

ಝಂಡೂರಪರ	"ZANDU" ಝಂಡೂರಪರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. ಝಂಡೂ ಅಯೋಡೈಸ್ಡ್ **ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ನೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಕೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-20)

ವೀರರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ವಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಪಜಂಟರಿಗೆ ಸಾಲ ಮತ್ತು ಅಸ್ತಿಯ ಬತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರಸ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭೂಮಸದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಸಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯು ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್ಸಿ., ಎಲ್.ಎಲ್.ಬಿ.
ಆಫೀಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-14

ಕಾರ್ಖಾನೆಗಳಲ್ಲಿ ತಯಾರಾದ ಮನೆಗಳು.

ಈ ತನಕ ಕಾರ್ಖಾನೆಗಳಲ್ಲಿ ಮೋಟಾರು, ವಿಮಾನ ವೇ ಮೊದಲಾದ ಯಂತ್ರಗಳನ್ನು ತಯಾರಿಸುತ್ತಿದ್ದರು. ಇನ್ನು ಮುಂದೆ ಮನೆ ಮತಗಳನ್ನೂ ತಯಾರಿಸಿ ಬಿಕರಿಗಿಡುವ ಯೋಜನೆಯು ಅಮೇರಿಕಾ ದೇಶದಲ್ಲಿ ನಡೆಯುತ್ತಿದೆ. ಒಂದೆರಡು ಮನೆಗಳನ್ನು ತಮೂರಿಸಿ ಈ ಮೊದಲೇ ನೂರಲ್ಬಟ್ಟಿವೆ. ಅದರೆ, ಇನ್ನು ಮುಂದೆ ತಿಪ್ಪುಗಳನ್ನು ತುಂಬಾ ತಯಾರಿಸಿ ಸೂರಾಟಿಕ್ಕಿಡಲಿರುವರು. ಹೀಗೆ ಮಾಡಿದರೆ ಸಾಮಾನ್ಯ ಒಂದು ಮನೆಯನ್ನು ಕಟ್ಟಿಸಲು ಈಗ ತಗಲುವ ಖರ್ಚಿನ ಅರ್ಧ, ಅರ್ಧಕ್ಕಿಂತಲೂ ಕಡಿಮೆ ಬರಬಲ್ಲಿ ಅವುಗಳನ್ನು ಮಾರಲು ಸಾಧ್ಯವಾಗುವದಂತೆ.

—೦೦—

ಲೋಹದ ಫಿಲ್ಮುಗಳು.

ಹತ್ತು ವರ್ಷಗಳ ಪ್ರಯತ್ನದಿಂದಾಗಿ ನ್ಯೂಯಾರ್ಕಿನ ಡಾ. ರೊಬರ್ಟ್ ಕಾರ್ಟರೆಂಬವರು ಲೋಹದ ಫಿಲ್ಮುಗಳನ್ನು ತಯಾರಿಸಿದ್ದಾರೆ. ಅವುಗಳನ್ನು ಈಗಿನ ಫಿಲ್ಮುಗಳಿಗಿಂತಲೂ ಕಡಿಮೆ ಕ್ರಯಕ್ಕೆ ಮಾರಲು ಸಾಧ್ಯವಿದೆಯಂತೆ. ಮತ್ತೊಮ್ಮೆ, ಅವುಗಳ ಪ್ರಯೋಜನವೂ ತುಂಬಾ ಇದೆ. ಅವರ ಎರಡು ಬಟ್ಟಗಳಲ್ಲಿ ಚಿತ್ರವನ್ನು ತೆಗೆಯಲು ಸಾಧ್ಯವಿದೆಯಲ್ಲದೆ, ಅದು ಹಾಳಾಗುವದೂ, ಮುರುಡಿಕೊಳ್ಳುವದೂ ಇಲ್ಲವಂತೆ.

ಈಗಿನ ಫಿಲ್ಮುಗಳಲ್ಲಿರುವ ಚಿತ್ರಗಳನ್ನು ಅವುಗಳ ಹಿಂದಿನಿಂದ ಬೆಳಸನ್ನಿಟ್ಟು ತೋರಿಸುವರಷ್ಟೆ! ಆದರೆ ಈ ಲೋಹದ ಫಿಲ್ಮಿನಲ್ಲಿರುವ ಚಿತ್ರಗಳನ್ನು ತೋರಿಸುವ ಕ್ರಮವೇ ಬೇರೆ. ವಾರದರ್ಶಕವಲ್ಲದ ತೆರಗಳ ಮುಂಭಾಗದಲ್ಲಿ ದೀಪವನ್ನಿಟ್ಟು ಅವುಗಳ ಪ್ರತಿಬಿಂಬವನ್ನು ಫಲಕದ ಮೇಲೆ ಬೀಳುವಂತೆ ಮಾಡಲಾಗುವುದು.

—೦೦—

ತುಂಡಾದ ಎಲುಬುಗಳನ್ನು ಬೆಸೆಯಿಸುವ ವಿಜಿಕ್ರ ವೈದ್ಯ.

ಉತ್ತರ ಕನ್ನಡದ ಅಂಕೋಲಾ ತಾಲೂಕಿನಲ್ಲಿ ಬೋಡೂರು ಎಂಬುದೊಂದು ಹಳ್ಳಿಯಿದೆ. ಇಲ್ಲಿ ಹಳೆಯ ಗೌತಮಿಂಬೊಬ್ಬ ಸಾಧುವು ಇರುವನು. ಈತನು ಕುಂಭಿ ಮುನಿತನವನು. ತನಿಗಳ ವರ್ಷಗಳ ಹಿಂದೆ ತನ್ನ ಪೂರ್ವಜರಲ್ಲೊಬ್ಬನು ಬೇಟೆಗೆ ಹೋದಾಗ ಒಂದು ಜಿಂಕೆಯನ್ನು ಕೊಂದಿದ್ದನು. ಅಲ್ಲಿ ಅವನ್ನು ಆ ನೇಕ ತುಂಡುಗಳನ್ನಾಗಿ ಎಂದು ತನ್ನಿಂದಿನೆ ಒಂದೆರಡಿಗೆ ಒಂದೊಂದು ಸಾಲನ್ನು ಆತನು ಕೊಟ್ಟನು. ಮನ್ನೆ ಪಾಲನ್ನು ಅಲ್ಲಿಯೇ ಬಳಿಯಲ್ಲಿದ್ದ ಗುಡಿಸಿ ಎರೆಗಳೇಜ್ಞಾ ಮಿಸಿ ಮನೆಗೆ ಒಯ್ದನು. ಮಾನಗೆ ಹೋಗಿ ನೋಡಲು ಅವರಲ್ಲಿದ್ದ ಎಲ್ಲಾ ತುಂಡುಗಳು ಒಂದೇ ಮುಸ್ಸೆಯೊಗಿದ್ದುದನ್ನು ಕಂಡು ಅವನಿಗೆ ಬಹಳಾಶ್ಚರ್ಯವೆನಿಸಿತು! ಕಾಡಿಗೆ ಹೋಗಿ ಅದೇ ನುರವ ಎಲೆಗಳನ್ನು ಪುನಹ ತಂದು ಪರೀಕ್ಷಿಸಿ ನೋಡಿದಾತನು. ಅವುಗಳ ಸ್ವರ್ಶವಾಹೊಡನೆ ಮೊಂಸವ ಎಷ್ಟು ತುಂಡುಗಳಿದ್ದರೂ ಮುದ್ದೆ.

ಈ ಗುಟ್ಟು ತಂದೆಯಿಂದ ಮಗನಿಗೆ, ಅತನಿಂದ ಅತನ ಮಗನಿಗೆ ಹೇಳಲ್ಪಟ್ಟು, ಈಗಲೂ ಆ ಕುಟುಂಬದ ನಾನು ಆ ಸಾಧುವಿಗ ತಿಳಿದಿರುವುದು. ಪರರಿಗೆ ಅದನ್ನು ಹೇಳಿದರೆ, ಅದರಿಂದ ತನಗೆ ಹಾನಿಯುಂಟಾಗಬಹುದೆಂದಾತನು ಬೆದರುತ್ತಿರುವನು.

ತುಂಡಾದ ಎಲುಬುಗಳನ್ನು ಸರಿಪಡಿಸಲು ಆ ಎಲೆಗಳನ್ನಾತನು ಉಪಯೋಗಿಸುತ್ತಿರುವನು. ಎಂಥಾ ಕಠಿಣ ತರದ 'ಕೇಸು'ಗಳೂ ಆ ಎಲೆಗಳ ಉಪಯೋಗದಿಂದ ಗುಣವಾಗುತ್ತಿರುವವು. ಆತನ ಹೆಸರಿಂದು ಪ್ರತಿಯೋರ್ವ ಹಳ್ಳಿಗನಿಗೂ ತಿಳಿದಿರುವುದು. ಕೊಡಗೂ ಈ ವಿಚಾರದಲ್ಲಿ ಹಿಂದಿಲ್ಲವಷ್ಟೆ!

—೦೦—

ವಿವಿಧ ವಿಚಾರ.

ನಶ್ಯದ ಮಹಿಮೆ.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ದಕ್ಷಿಣ ಜಿಲ್ಲೆಗಳಲ್ಲಿ ಡಾಕ್ಟರುಗಳಾವ ಮೆಡ್ಜ್ ಮತ್ತು ಲ್ಯಾಕಿ ಎಂಬವರು ನಶ್ಯ ಹಾಕುವುದರಿಂದ ಯಾವ ವಿಧದಲ್ಲಾದರೂ ಪೆಟ್ಟಿ ನೋವಿದ್ದರೂ ಗುಣವಾಗುವುದಾಗಿ ತಿಳಿಸಿದ್ದಾರೆ. ಕೆಲವದ 80ನಷ್ಟು ಮಂದಿಗೆ ಗುಣವಾಗಿರುವುದಾಗಿ ಇವರು ತಿಳಿಸಿದ್ದಾರೆ. ದಿನಕ್ಕೆ ನಾಲ್ಕು ಸಲ ನಶ್ಯ ಹಾಕಬೇಕಂತೆ. ಇವರಿಂದ ಜೀರ್ಣಾಂಗಗಳು ನಡಿಲವಾಗಿ ಲವಲವಿಕೆಯಿಂದ ಕೆಲಸ ಮಾಡುವುದಂದೂ, ಅಗ ತಿಂದದ್ದೆಲ್ಲಾ ಜೀರ್ಣವಾಗುವುದೆಂದೂ, ಯೂನಾಗ ಜೀರ್ಣವಾಯಿತೋ ಆಗ ಹೊಟ್ಟೆ ನೋವಲ್ಲಿ ಬಂತು? ಎಂಬಾ ಈ ವೈದ್ಯಾಚ್ಚರು ಕೇಳಿದ್ದಾರೆ.

—೦೦—

ಸುಧಾರಿತ ಕ್ಷೌರದ ಕತ್ತಿ!

ಎಲ್ಲಾ ವಿಚಾರಗಳಲ್ಲೂ ಸುಧಾರಣೆಗಳಾಗುತ್ತಿರುವಾಗ ಕ್ಷೌರದ ಬ್ಲೇಡಿನಲ್ಲೂ ಸುಧಾರಣೆ ಯೊಂದಾಗಬಾರದು? ಆದ್ದರಿಂದ ಈ ಸುಧಾರಣೆಯಾಗಿದೆ. ಕೇಳಿ! ಇನ್ನು ಮೇಲೆ ನೀವು ಸಾಬೂನನ್ನು ಬ್ರಷ್‌ನಿಂದ ಬಳಿದು ಕೊಳ್ಳುವ ಅಗತ್ಯವೇ ಇಲ್ಲ. ಏಕೆಂದರೆ ಸಾಬೂನಿನ ನೊರೆಯ ನಳಿಗೆಯನ್ನೂ ಸಹ ರೇಜರಿನ ಹಿಡಿಯಲ್ಲಿ ಸೇರಿಸಲಾಗಿದೆ. ಹಿಡಿಯನ್ನು ಬಲವಾಗಿ ಹಿಡಿದುಕೊಂಡು ಕೆನ್ನೆಯ ಮೇಲೆ ಎಳೆದರೆ ಸಾಬೂನಿನ ನೊರೆಯು ನಳಿಗೆಯನ್ನು ಅನುಕುವುದರಿಂದ ಬ್ಲೇಡಿನ ಮುದಯಲಿರುವ ರಂಧ್ರಗಳಲ್ಲಿ ಬಂದು ಸೇರುತ್ತಿದೆ. ನಂತರ ಆ ನಳಿಗೆಯೇ ಹಿಡಿಯಾಗಿಯೂ ಪರಿಣಮಿಸುವುದರಿಂದ ಸುಖವಾಗಿ ಷೇವ ಮಾಡಿಕೊಳ್ಳಬಹುದು ಎಂದು ಹೇಳಲಾಗಿದೆ.

—೦೦—

ಚಲಿಸುವ ಫೋಟ್ಯಾಫೀಸ್.

ಇನ್ನು ಮುಂದೆ ನಾವು ಫೋಟ್ಯಾಫೀಸಿಗೆ ಹೋಗಬೇಕಾದ್ದೂ ಇಲ್ಲ. ಊಂಟೆ ಜಪಾನರು ನಮ್ಮ ಸುಸಜ್ಜಾಗಿಲಿಗೆ ಅವಯಂತೆಕಾದ್ದೂ ಇಲ್ಲ. ಏಕೆಂದರೆ ಫೋಟ್ಯಾಫೀಸುಗಳು ಬಿದ್ದಾದಲ್ಲಿವೆ! ಈಗ ಸೂಚ್ಯಕ್ಕೆ ಅವಕ್ಕೆ ನಮ್ಮಂತೆ ಜಾನಿಯೆಯೇ ಎಂದು ಕೇಳಬೇಡಿ. ಅವುಗಳನ್ನು ಮೊಡ್ಡ ಮೂಡ ವಾಣಿಜ್ಯರುಗಳ ಮೇಲೆ ಸ್ಥಾಪಿಸಲಾಗುವುದು. ಇದು ಯಾವಾಗಲೂ ನಾಡಿನಲ್ಲೇ ಸಂಚರಿಸುತ್ತಿದ್ದು ಅಗತ್ಯ ಕಂಡು ಬಂದ ಕಡೆ ಮೊತ್ರ ಒಂದು ದಿನದ ಮಟ್ಟಿಗೆ ನಿಲ್ಲುತ್ತದೆ. ಈಗ ಈ ರೀತಿ ಅಂಚೆ ಕಚೇರಿಯೊಂದು 13 ನಾಡಿನ ಪೈಲಿಗಳ ಸಂಚಾರವನ್ನು ಮುಗಿಸಿಕೊಂಡು 'ರಾಯಲ್ ಜೋಗಾಗಿ ರಿಜ್ಮಂಡ್' ಎಂಬಲ್ಲಿದೆ. ಇದು ಆನೇಕ ಗ್ರಾಮಗಳನ್ನು ವ್ಯವಹಾರಗಳಲ್ಲಿದಲ್ಬಟ್ಟಿತು. 32 ವರ್ಷಗಳ ಕಾಲ ಅಂಚೆ ಕಚೇರಿಗಳಲ್ಲಿ ಕೆಲಸ ಮಾಡಿ ಅನುಭವ ಪಡೆದ ಶ್ರೀ. ಎ. ಎಫ್. ಜೇನಿಯವರು ಈಗ ಇವರ ಆಡಳಿತ ನೋಡಿಕೊಳ್ಳುತ್ತಿರುವರು. ಮನಿಯಾರ್ಡರು ಮಾಡಬೇಕಾದರೆ, ರಿಜಿಸ್ಟರು ಮಾಡಬೇಕಾದರೆ ಟೆಲಿಗ್ರಾಂ, ಟೆಲಿಫೋನ್ ಸೌಕರ್ಯಗಳು ಬೇಕಾದರೆ ಎಲ್ಲ ಇಲ್ಲಿ ದೊರೆಯುವವಂತೆ! ಓಡಾಡುವ ಮನೆಗಳೇ ಪ್ರಚಾರವೆಲ್ಲಿರುವಾಗ ಇಂಥಾ ಕಚೇರಿಗಳನ್ನು ಕೇಳಿದರೆ ಆಶ್ಚರ್ಯ ವೇನೂ ಕಂಡು ಬಾರದು. ಪೊನ್ನೆ ತಾನೇ ಸಂಯುಕ್ತ ಪ್ರಾಂತ್ಯದ ಸರ್ಕಾರದವರು ಓಡಾಡುವ ಆಪ್ಪಶ್ರೆಗೆ ಅನುಮತಿ ಇತ್ತಿದ್ದಾರೆ. ಅಮೇರಿಕಯ ವ್ಯವಸಾಯ ಶಾಲೆಯೊಂದನ್ನು ಒಂದು ದೊಡ್ಡ ಲಾರಿಯ ಮೇಲೆ ನಿರ್ಮಿಸಿದ್ದಾರೆ. ಎಷ್ಟೇ ಆಗಲಿ, ಆಧುನಿಕ ಯುಗದ ಮಹಿಮೆ!

—೦೦—

ಪಾತ್ರೆಗಳನ್ನು ತೊಳೆಯುವ ಅಗತ್ಯವಿಲ್ಲ.

ಒಬ್ಬನು ಊಟ ಮಾಡಿ ಪಾತ್ರೆಗಳನ್ನು ತೊಳೆಯುವದೆಂದರೆ ಅದೊಂದು ರಗಳೆಯ ಕೆಲಸ. ಆ ಕೆಲಸವು ಇಲ್ಲವಂತೆ ಮಾಡುವುದಕ್ಕಾಗಿ ನ್ಯೂಯಾರ್ಕಿನ ಒಬ್ಬ ವ್ಯಾಪಾರಿಯು ಕಲ್ಲು ಸಕ್ಕರೆಯ ಪಾತ್ರೆಗಳನ್ನು ತಯಾರಿಸಿರುವನು. ಅವುಗಳಲ್ಲಿಬ್ಬ ಅಡುಗೆಗಳನ್ನು ತಿಂದ ಬಳಿಕ ಆ ಪಾತ್ರೆಗಳನ್ನೂ ತಿಂದು ಮುಗಿಸುವುದು ಸುತ್ತಿ ಊಟಕ್ಕೆ ಕುಳಿತ್ತಿದ್ದ ಸ್ಥಳವನ್ನು ಸೂತ್ರ ಒರೆಸಿ ಉಜ್ಜಿ ಬಿಟ್ಟರಾಯಿತು. ನೋಡಿ, ನೋಡಿಗರೆನ್ನು! ಎಷ್ಟೊಕ್ಕೆ ಮೂರೊತ್ತುಂಬುವನೆನು ಮೂರು ಪಾತ್ರೆಗಳನ್ನು ತಿಂದರೆ ತಿಂಗಳಿಗೆಷ್ಟು? ವರ್ಷಕ್ಕೆಷ್ಟು? ಅವನ ಕಾಲಾಂತ್ಯದ ವರೆಗೆಷ್ಟು? ಪಾತ್ರೆಗಳ ಕ್ರಯವೆಷ್ಟು? ನಮ್ಮೂರಿಗೆ ಅಂಥಾ ವ್ಯಾಪಾರಸ್ಥರೇ ಬೇಡಪ್ಪ!

—೦೦—

ಜಪಾನೀ ಬುದ್ಧಿವಂತಿಕೆ.

ನಮ್ಮ ಕೆಲವು ವ್ಯಾಪಾರಿಗಳಿಗೆ ತೂಕವೆಲ್ಲಿ, ಕ್ರಯವೆಲ್ಲಿ, ವಸ್ತುವಿನೆಲ್ಲಿ ನೋಡ ಮಾಡಲು ಪುರ್ಸತ್ತೆ ಗೊತ್ತು. ಅದರ ಜಪಾನಿಯರು ತಮ್ಮೆಲ್ಲವನ್ನೂ ಬಿಟ್ಟು, ತೂಕವ ಲ್ಲೇ ನೋಡ ಮಾಡಲು ತೊಡಗುತ್ತಾರೆ. ಅಂದರೆ ಸಾಮಾನುಗಳು ಎಲ್ಲೆಲ್ಲಿ ದಯಮಾಡಿಸಿದ್ದೋ ಆ ಸ್ಥಳಗಳ ಹೆಸರುಗಳನ್ನು ಜಗತ್ತಿನ ವ್ಯಾಪಾರ ಕ್ಷೇತ್ರಕ್ಕೆ ತಿನು ಕೂಲವಾಗಿ ಬಡಲುಯಿಸಿ ಎಲ್ಲರ ಬಾಯಲ್ಲೂ ನಲ್ಲಿ ಹಾಕುವ ಹಾಗೆಯೇ ಆದರೆಲ್ಲಿದ ಮಂಚೆಸ್ಟರ್ ಬಟ್ಟೆಗೆ ಹೆಚ್ಚು ಗಿರಾಕಿ ಇದೆಯೆಂದು ತಿಳಿದೊಡನೆ ತಮ್ಮ ಬಟ್ಟೆ ಗಿರಣಿಗಳಿರುವ ಪ್ರದೇಶಕ್ಕೆ 'ಮಂಚೆಸ್ಟರ್' ಎಂಬ ನಾಮಕರಣ ಮಾಡಿ 'ಮಂಚೆಸ್ಟರಿನಲ್ಲಿ ತಯಾರಾದುದು' ಎಂದು ಬರೆದು ಸಕ್ಕುಗಳನ್ನು ವಿಕ್ರಯಕ್ಕೆ ಬಿಡುವರು. ಅದೇ ರೀತಿ ಅಲ್ಲಿ ಸ್ಕಿಡನ್, ಸೆಕ್ಲೆನ್ ಸ್ಕಿನ್, ಬನೇರಿಯೊ, ಲಿವರ್ ಪೂಲ್ ಎಂಬ ಪ್ರದೇಶಗಳು ಬೇಕು ಬೇಕಾದ ವಸ್ತುಗಳ ತಯಾರಿಗಾಗಿ ನಾಮಕರಣ ಮಾಡಲ್ಪಟ್ಟಿವೆಗಳು! ನಮ್ಮ ಕೆಲವು ವ್ಯಾಪಾರಿಗಳಾದರೂ ಜಪಾನಿ ಬಟ್ಟೆಗಳನ್ನೂ, ವಸ್ತುಗಳನ್ನೂ ಜರ್ಮನಿ, ಇಂಗ್ಲೆಂಡು, ಅಮೇರಿಕೆಯುವೆಂ ಏ ಅಧಿಕ ಬೆಲೆಗೆ ಮಾರುವುದರಲ್ಲಿ ತಪ್ಪೇನು?

—೦೦—

ಸೀಸದಿಂದ ಚಿನ್ನ!

ನಮ್ಮ ಹಿರಿಯರು ಆ ಪುರಾತನ ಅಪ್ಪ ಗಳೆ ಸತ್ಯವಾಗಿದೆ. ಸಾಧುಗಳು ಬೇಕಷ್ಟು ಬಂಗಾರ ತಯಾರಿಸಿ, ಭಂಗ ಕೊಂಡು ಸೇದುವ ವಿಚಾರ 'ನಿಜ' ವೆಂದು ಕೆಲವರಿಗೆ ಹೊಕ್ಕಿದಿದ ಫ್ರೋಲೆಂಡಿನ ಲೋವ್ಜ್ ಎಂಬಲ್ಲಿನ ತರುಣನೊಬ್ಬನು ಇದೀಗ ಸೀಸದಿಂದ ಚಿನ್ನ ತಯಾರಿಸುವುದನ್ನು ಕಂಡು ಹಿಡಿದಿದ್ದಾನೆ ತಾನು ಮಾಡಿದ ಘನಗಾರವ ಮೂವರಿ ಮುಂದಸ್ಥು ದೋಧಕ ಸಂಸ್ಥೆಗೆ ಕಳುಹಿಸಿದ್ದಾನೆ. ಆ ಸಂಘದವರು ಇದೀಗ ಈ ಕೆಲಸವನ್ನು ಸಂಪೂರ್ಣವಾಗಿ ಮುಂದುವರಿಸಲು ಇಬ್ಬರು ಶೋಧಕರ, ಒಬ್ಬ ಇಂಜನಿಯರನ್ನು ಹಾಗೂ ಶೋಧಕ ಸಂಸ್ಥೆಯ ಸದಸ್ಯರೊಬ್ಬರಿಂದೊಡಗೂಡಿದ ಕಮಿಟಿಯೊಂದನ್ನು ಏರ್ಪಡಿಸಿದ್ದಾರೆ. ಆದರೆ ಶೋಧಕರ ಹೆಸರನ್ನು ಮಾತ್ರ ಅವರು ಪ್ರಕಟಿಸಲಿಲ್ಲ. ಕಾರಣ ಈ ಜಪಾನೀಯನೆಲ್ಲಾ ಮ ಜಪಾನಿಗೂ, ನಾಜಿಯೆಂದು ಜರ್ಮನಿ ಇಟೆಲಿಗಳೂ, ಬ್ರಿಟಿಷ್ ಎಂದು ಬ್ರಿಟನೂ ಹೇಳಿಬಿಡಬಹುದೆಂಬ ಭಯ! ಅಂತೂ ಯಾವ ದೇಶವಾದೀ ಆಗಲಿ, ಅವನ ಸಹಸಕ್ಕೆ ಮೆಚ್ಚಬೇಕಷ್ಟೆ? ಸೀಸದಿಂದ ಚಿನ್ನವಾದರೆ ಆಭರಣಗಳು ಯಥೇಚ್ಛವಾಗಬಹುದು! ಸ್ತ್ರೀಯರ ಸಂತೋಷವು ಮಿತಿಯಿರುವುದು!! ಮುಂದೆಗಾರಿಕೆಗೆ ಅಂತ್ಯವೇ ಇಲ್ಲದಾಗುವುದು!!! ಬೇಡವಪ್ಪ ಬೇಡ, ನಮಗೆ ಅಂಥವರ ಸಹವಾಸ.

—೦೦—

ದುಂದುಗಾರಿಕೆಯನ್ನು ತಪ್ಪಿಸಲು ಸ್ತ್ರೀಯರು ಮುಂದೆ ಬರಬೇಕು-ಲೇ:-ಬಿ. ಯಂ. ಅಪ್ಪಯ್ಯ.

ಮಡಿಕೇರಿಯನ್ನು ನೋಡದ ಮತ್ತು ಕೇಳದ ಕೊಡಗರ್‌ಯಾರೂ ಇಲ್ಲ. ಹಿಂದಿನ ಮಡಿಕೇರಿಯನ್ನು ಇಂದಿನ ಮಡಿಕೇರಿಗೆ ಸರಿಹೋಲಿಸಿ ನೋಡಿದಲ್ಲಿ ಇನ್ನು ಕೊಂಚ ವರ್ಷಗಳಲ್ಲೇ ಪಟ್ಟಣವು ಸ್ವರ್ಗ ಸಾಮಾನ್ಯವಾಗಬಹುದೆಂದು ಊಹಿಸಲು ಮನಸ್ಸು ತವಕಪಡುತ್ತಿದೆ.

ಮಡಿಕೇರಿಯು ಕೊಡಗಿನ ರಾಜಧಾನಿ ಪಟ್ಟಣವಾಗಿ ಈ ವೇರೆ ಮತ್ತು ವರವೇರವರು ಇಲ್ಲೊಂದು ಸಾಮಾನ್ಯ ಊರು ಎಂದು ಭಾವಿಸಿದ್ದರೂ, ಪಟ್ಟಣದಲ್ಲಿ ವಾಸಿಸುವ ಜನರ ನಿಯಮಗಳು ವಿಶೇಷತಾನಸ್ಸಿಗೆ ಏರಿನೆ. ಇಲ್ಲಿಯ ಜನರ ಜೀವನದ ರೀತಿಯೂ, ಆವರ ಪೋಷಾಕೂ ನವೀನುಡಿಗಳು ಯಾರೋ ಒಬ್ಬ ಆಂಗ್ಲೋ ಇಂಡಿಯನ್ ರು ಹೇಳಿದ ಹಾಗೆ ಯುರೋಪ್ ಖಂಡದಲ್ಲಿರುವ ಸ್ಕಾಟ್‌ಲೆಂಡ್ ದೇಶವನ್ನು ಮೀರಿಸಿದೆ. ಇಂಗ್ಲಿಷ್ ಭಾಷೆಯು ಪ್ರತಿಯೊಂದರಲ್ಲೂ ಮಿಳಿತವಾಗಿ ಕೊಡವರಲ್ಲಿ ಕೊಡವ ಭಾವೆಯೇ ಮಾಯವಾಗುತ್ತಿದೆ.

ಮಡಿಕೇರಿಯು ಸುಖಜೀವನದ ನಿಧಿಯಾಗಿ ಕಷ್ಟತರವಾದ ಕೆಲಸ ಕಾರ್ಯಗಳು ಗಂಡಸು ಹೆಂಗಸರಲ್ಲಿ ಸ್ವಪ್ನಪ್ರಾಯವಾಗುತ್ತಿದೆ. ದೇಹ ಭೂಷಣಗಳಂತೂ ಒಬ್ಬೊಬ್ಬರನ್ನು ಮೀರಿಸುತಿವೆ. ಆಭರಣಗಳಂತೂ ವರ್ಷಕ್ಕೆ, ವರ್ಷಕ್ಕೆ ಬದಲಾವಣೆಯೆನ್ನು ಹೊಂದುತ್ತ ಚಿನ್ನವೆ ಕೆಲಸ ಮಾಡುವ ಆಕ್ಕಸಾಲಿಗನಿಗೆ ನೆಮ್ಮದಿ, ತರಹ ಹುಡುಕುವವರಲ್ಲೇ ಮನಸ್ಸು ಬೇಸರಿಸುವಂತಿದೆ. ಈ ವಸ್ತ್ರ ಭೂಷಣಗಳಿಗಿಂತ ಆಭರಣವು ಮೂರು ಪಾಲು ಬೆಲೆ ಜಾಸ್ತಿ ಬೆಲೆಯಲ್ಲಿ ಮೇಲು.

ಕೊಡಗಿನ ಉತ್ಪತ್ತಿಯೊದರೊಳಿನು? ಭತ್ತ, ಅಕ್ಕಿ, ಯಲಕ್ಕಿ, ಸುಣಸು, ಕಿತ್ತಳೆ. ಇವರ ಬೆಲೆಯಾಗಿ ಹೇಗಿದೆ? ಮಾಸ್ಯಪ್ರತಿನಿಧಿಯಾಗಿದೆ. ಧಾರಣವಾಸಿಯಂತೂ ಉತ್ಸಾಹ ಕೈಕಸವನ್ನು ನಿಯತ್ಸಾಹಿಯನ್ನಾಗಿ ನೂನುತ್ತಿದೆ. ಧಾರಣೆಯಾಸಿ ಕಡಿಮೆಯಾಗಿ ಉತ್ಪತ್ತಿಯು ಕಡಿಮೆಯೂ ಕಾರಣ ಜಮಿನ್ದಾರನ ಲಕ್ಷ್ಮಿಯು ಕುಂದಿತು. ಅನೇಕ ನಿಧಿಯ ಕಾಯಿಲೆಗಳು ತಲೆದೂರಿ ಲಾರಂಭಿಸಿವೆ. ಸುಂದಿನ ಪ್ರಜೆಗಳಾಗುವ ಜಂಲಕರ ಲಕ್ಷ್ಮಿಯೂ ಕಡಿಮೆಯಾಗಲು ಅನೇಕ ಕಾರಣಗಳು. ಚಾನುವಾರುಗಳು ಉಚ್ಚ ಸ್ಥಾನವನ್ನು ಪಡೆದಿಲ್ಲ. ಜನಜಾನುವಾರುಗಳು ವೃದ್ಧಿ ಹೊಂದಿದ ಹೊರತು ದೇಶವು ಸುಬಿಕ್ಷದಿಂದ ಮೆರೆಯದು.

ಆಗಲೇ ಕೊಡಗಿನ ಅಬ್ಬ ಸ್ವಲ್ಪ ವೃದ್ಧಿಯೂ ಟ್ರಾವನ್‌ಕೂರ್ ನೇಶನಲ್ ಮತ್ತು ಕ್ವೆಲನ್ ಬ್ಯಾಂಕ್ ಕಂಪೆನಿಯವರ ಪರವಾಯಿತು. ಇದು ಅನೇಕರ ಗಣ್ಯದ ಸ್ವರವನ್ನು ಕರಯುತ್ತಿದೆ.

ಕೊಡಗಿನ ಜೊಕ್ಕಸವನ್ನು ಬರಿದು ಮಾಡುತ್ತಿರುವುದು ಆಭರಣ ಮತ್ತು ಬಟ್ಟೆ ಕೊಡಗಿನವರನ್ನು ಕಡುಬಡವರನ್ನಾಗಿ ಮಾಡುತ್ತಿರುವದು ದುಂದುಗಾರಿಕೆ. ಮಿತವ್ಯಯ, ಸಂಘಶಕ್ತಿ, ಪ್ರೀತಿ, ಒಲುಮೆ ಇವುಗಳನ್ನು ಕಾಪಾಡಲು ಸರ್ವರೂ ಮುದುಕ ಬಾಲಕರಾದಿಯಾಗಿ ಸ್ಕೌಟ್ ಸಂಸ್ಥೆಗೆ ಸೇರಿ ಹತ್ತು ವಿಧಿಗಳನ್ನು ಪರಿಪಾಲಿಸಲು ಪ್ರಯತ್ನಪಡಿ. ನುಸ್ಸು ನಿರ್ಮಲವಾಗಿ ಪಕ್ವವಾಗುವುದು. ಸ್ಕೌಟ್ ಉಡುಪನ್ನೇ ದಿನವೂ ಧರಿಸಿ, ಖರ್ಚು ಜೋತೆಯಾಗುವುದು. ಕೆಲಸ ಕಾರ್ಯಗಳಿಗೂ ಅನುಕೂಲವಾಗುವುದು. ನೆರೆ ಹೊರೆಯವರಲ್ಲಿ ವಿಶ್ವಾಸವೂ, ಸಹೋದರ ಭಾವವೂ ಬೆಳೆಯುವುದು.

ಹೆಂಗಸರೆಲ್ಲರೂ ಗರ್ಲ್ಸ್‌ಗಾಯಿಡ್ ಕೃಪನುಸ್ಸೇ ಅನುಸರಿಸಿ ಅದಕ್ಕೆ ಸಂಬಂಧಪಟ್ಟ ಉಡುಪನ್ನೇ ಉಡಲು ಪ್ರಾರಂಭಿಸಿ. ಗರ್ಲ್‌ಗಾಯಿಡ್ ಉಡುವ ತೀರೆಯು ನೇರಳೆ ಬಣ್ಣದ ಸುದ್ರಾಕ್ಷಿ ಅಂಚಿನ ತೀರೆ, ಖರೀದಿ ಅತ್ಯಲ್ಪ. ಕೊಡಗು ದೇಶದ ಗಂಡಸರು ಹೆಂಗಸರೆಲ್ಲರೂ ಸ್ಕೌಟ್ ಮತ್ತು ಗರ್ಲ್‌ಗಾಯಿಡ್ ಆಗಿ ಹತ್ತು ಧರ್ಮವನ್ನು ಪಾಲಿಸುತ್ತಾ ಸಹೋದರ ಭಾವದ ಸ್ಫೂರ್ತಿಯನ್ನು ಎಲ್ಲೆಲ್ಲೂ ಸಾರುತ್ತಾ ದುಂದುಗಾರಿಕೆಯನ್ನು ನಾಮಾವಶೇಷವನ್ನಾಗಿ ಮಾಡಿ ಪ್ರಪಂಚಕ್ಕೆ ಒಂದು ಮೇಲ್ಪಂಕ್ತಿಯನ್ನು ಹಾಕುವರೆಂದು ನಂಬುವೆನು.

ಡಿಸ್ಟ್ರಿಕ್ಟ್ ಬೋರ್ಡುಗಳು.

(ಗಾಂಧಿಯವರ ಲೇಖನ.)

